BUSINESS OF THE HOUSE

Mr. SPEAKER.—What time will be required by the Hon'ble Minister for reply ?

Sri H. SIDDAVEERAPPA (Harihar).—May I know whether the Hon'ble Minister will confine his reply only to the points raised during the course of the two days' discussion or to the points raised during the course of the General Discussion also ?

Mr. SPEAKER.—There are some matters raised in the course of the General Discussion which have not been answered. It would be but fair that they are answered. There are cut motions which for the sake of saving time we have treated as having been moved. Therefore, they shall have to be taken as moved. If one hour will not suffice, the Hon'ble Minister might consider and let me know. I want to know from the Whips whether they have apportioned time.

Sri B. RACHAIAH.—It is the convention that only the points raised in the cut motions and the points referred by the hon. Members used to be answered at the time of the reply. But since the desire of the Members is that I should reply to some of the points made during the General Discussion, I may require half an hour more.

Sri D. M. SIDDIAH (Biligere).—We have met and decided ; I am prepared to concede 1½ hours to the Minister for his reply. You may call two speakers from this side or if necessary, only one.

Mr. SPEAKER.—There will be no tea break and the Minister will be given 1½ hours. The reply will begin at 4-15.

Sri H. SIDDAVEERAPPA.—It all depends upon how the debate goes on and how the reply is given.

BUDGET ESTIMATES FOR 1967-68—DEMANDS FOR GRANTS

(Demand Nos. 2, 7,8, 33, 38, 42 and 51)

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ಇವತ್ತು ನಾನು ಒಂದು ಪ್ರಾಮುಖ್ಯವಾದಂಥ ವಿಚಾರವನ್ನು ಈ ಬೇಡಿಕೆ ಮೇಲೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಹಣಕಾಸಿನ ಸಚಿವರು ನಿನ್ನೆ ಈ ವರ್ಷದ ಆಯವ್ಯಯದ ಚರ್ಚೆಗೆ ಉತ್ತರ ಕೊಡುವ ಕಾಲದಲ್ಲಿ ಇಡೀ ದೇಶದ ಜನರನ್ನೇ ಎಚ್ಚರಿಸತಕ್ಕ ವಿಚಾರವನ್ನು ಹೇಳಿದ್ದಾರೆ. ಅದು ಭೂಕಂದಾಯದ ವಿಚಾರ. ಅದರ ಬಗ್ಗೆ ಈ ಸರ್ಕಾರದ ನಿಲುವು ಏನು ಎನ್ನತಕ್ಕದ್ದನ್ನು ಈ ದೇಶದ ರೈತಬಾಂಧವರು ಆ ಪ್ರಸ್ತಾವದ ಕಡೆ ಕಾದು ನೋಡುತ್ತಿದ್ದಾರೆ.

ಈ ವಿಚಾರವನ್ನು ಕಾಂಗ್ರೆಸ್ಸಿನವರು ತಮ್ಮ ಇಚ್ಛೆಯ ಪ್ರಕಾರ ಇದಕ್ಕೆ ತಿರುಗು ಮುರುಗು ಹೇಳತಕ್ಕಂಥಾದ್ದು ನ್ಯಾಯವಲ್ಲ. ಚುನಾವಣೆಯ ಪೂರ್ವ ಈ ದೇಶದ ಜನತೆ ಹೇಳಿದಂತೆ ಈ ಸರ್ಕಾರ ಈಗ ಇರತಕ್ಕ ಕಂದಾಯದ ಪದ್ಧತಿಯನ್ನು ಮುಂದೆ ಇಡಬೇಕೋ ಬೇಡವೋ ಎನ್ನತಕ್ಕಂಥ ವಿಚಾರದಲ್ಲಿ ತೀವ್ರವಾಗಿ ಪರಿಶೀಲಿಸುತ್ತಿದ್ದೇವೆ, ಅದಕ್ಕೋಸ್ಕರ ಒಂದು ಕಮಿಟಿಯನ್ನು ನೇಮಕ ಮಾಡಿದ್ದೇವೆ ಎಂಬ ವಿಚಾರವನ್ನ ಈ ದೇಶದ ಜನತೆಯ ಮುಂದೆ ಹೇಳಿದರು. ಈ ದೇಶದ ಜನತೆಯಲ್ಲಿ ಕಾಂಗ್ರೆಸ್ ಸರ್ಕಾರ ಕಂದಾಯವನ್ನು ವಜಾ ಮಾಡತಕ್ಕ ವಿಚಾರದಲ್ಲಿ ತೀವ್ರವಾದ ನಂಬಿಕೆಯನ್ನು

(ಶ್ರೀ ಎಸ್. ಶಿವಪ್ಪ)

ಹುಟ್ಟಿಸುವುದಕ್ಕೋಸ್ಕರ ಚುನಾವಣೆಯ ಪೂರ್ವ ಈ ವಿಚಾರವನ್ನು ದೇಶಕ್ಕೆ ಹೇಳಿದರು. ಆ ಮೇಲೆ ಮಾರ್ಚಿ 30ನೇ ತಾರೀಖಿನವರೆಗೂ ಕಂದಾಯದ ವಸೂಲಿ ಕ್ರಮವನ್ನು ನಿಲ್ಲಿಸಬೇಕು ಎಂದು ಎಲ್ಲಾ ಅಧಿಕಾರಿಗಳಿಗೂ ಸೂಚನೆಯನ್ನು ಕೊಟ್ಟರು. ಈ ಎರಡು ಹೇಳಿಕೆಗಳನ್ನೂ ಕೂಡ ಸರ್ಕಾರ ಪ್ರಕಟನೆಯ ಮೂಲಕ ಹೇಳಿದ್ದಾರೆ. ಇದು ಸರ್ಕಾರ ತೀವ್ರವಾಗಿ ಯೋಚನೆ ಮಾಡತಕ್ಕ ವಿಚಾರ. 1965-66, 1966-67 ಈ ಎರಡು ವರ್ಷಗಳ ಕಂದಾಯವನ್ನು ವಸೂಲು ಮಾಡುವುದಿಲ್ಲ ಎಂಬ ಭಾವನೆಯನ್ನು ಭೂಮಿಯನ್ನೇ ನಂಬಿರತಕ್ಕ ಜನತೆಯಲ್ಲಿ ಹುಟ್ಟಿಸಿ ಇತ್ತೀಚೆಗೆ ಹೇಳುತ್ತಿರುವುದನ್ನ ನೋಡಿದರೆ ಅದನ್ನು ಜಾರಿ ಮಾಡುವ ಧೈರ್ಯ, ದಿಟ್ಟತನ, ಈ ಸಮಸ್ಯೆಯನ್ನು ಎದುರಿಸುವಂತಹ ಛಾತಿ ಈ ಸರ್ಕಾರದ ಕಂದಾಯದ ಮಂತ್ರಿಗಳಿಗಾಗಲೀ ಈ ಸರ್ಕಾರಕ್ಕಾಗಲಿ ಇಲ್ಲ ಎನ್ನುವ ವಿಚಾರ ವನ್ನು ಇತ್ತೀಚೆಗೆ ಅವರ ಬಾಯಿಂದ ಹೇಳತಕ್ಕ ಮಾತುಗಳಿಂದ ಅರ್ಥ ಮಾಡಿಕೊಳ್ಳಬೇಕಾಗಿದೆ. ಬಡ್ಜೆಟ್ಟಿನಲ್ಲಿ ಹೇಳಿದ್ದಾರೆ, ಈಗಿರತಕ್ಕ ಕಂದಾಯದ ಪದ್ಧತಿಯನ್ನು ವಜಾ ಮಾಡಿ ಬೇರೆ ರೀತಿ ಮಾಡ ತಕ್ಕದ್ದನ್ನು ಯೋಚನೆ ಮಾಡುತ್ತಿದ್ದೇವೆ ಎಂದು. ಆ ರೀತಿ ಅರ್ಥ ಬರುವ ರೀತಿಯಲ್ಲಿ ಬಡ್ಜೆಟ್ಟಿನ ಮೇಲೆ ನಡೆದಂತಹ ಚರ್ಚೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಇವರು ಪುನಃ ಗೊಂದಲದ ಕಡೆಗೆ ಎಳೆದುಕೊಂಡು ಹೋಗುವ ಪ್ರಯತ್ನ ಮಾಡು ತ್ತಿದ್ದಾರೆ. ಸರ್ಕಾರದ ನಿಲುವು ಕೊನೆಗೆ ಏನು ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಕಂದಾಯವನ್ನು ರದ್ದು ಮಾಡುತ್ತೇವೆ ಎನ್ನುವ ಇಚ್ಛೆ ಅವರಿಗೆ ಇದ್ದ ಪಕ್ಷದಲ್ಲಿ ಅದನ್ನು ನೇರವಾಗಿ ಹೇಳಲಿ, ನೇರವಾಗಿ ರೈತ ಅರ್ಥಮಾಡಿಕೊಳ್ಳುವ ರೀತಿಯಲ್ಲಿ, ಮಾತಿನಲ್ಲಿ ಕಂದಾಯವನ್ನ ವಜಾ ಮಾಡುತ್ತೇವೆ ಎಂದು ಹೇಳಲಿ. ಇಲ್ಲದೆ ಇದ್ದರೆ ಬೇರೆ ಯಾವುದಾದರೂ ರೂಪದಲ್ಲಿ ಕಂದಾಯವನ್ನು ತರತಕ್ಕಂಥ ವಿಚಾರ ಏನಿದೆ, ಏನು ಔಷಧಿಯನ್ನು ಕೊಡುತ್ತೇವೆಂದು ಹೇಳಿದ್ದಾರೆ ಅದನ್ನು ಹೇಳಲಿ. ಈ ಔಷಧಿ ಎಂದು ಹೇಳತಕ್ಕಂಥದ್ದು ಪಾಷಾಣ ಆಗಬಾರದು. ನಾನು ಈ ಮಾತನ್ನು ಹೇಳಿ ಕೊನೆಗೆ ಸರ್ಕಾರಕ್ಕೆ ನಾನು ಒಂದು ಎಚ್ಚರಿಕೆಯ ಮಾತನ್ನು ಹೇಳುತ್ತೇನೆ, ಈ ವಿಚಾರದಲ್ಲಿ ಹಿಂದು ಮುಂದು ನೋಡದೆ ರೈತನ ಬೆನ್ನುಮೂಳೆ ಮುರಿಯುವ ಮನಸ್ಸನ್ನು ಸರ್ಕಾರ ಮಾಡಬಾರದು. ಹಾಗೆ ಮಾಡಿದರೆ ಜನ ರೊಚ್ಚಿಗೆದ್ದು ನಿಮ್ಮ ಬೆನ್ನು ಮೂಳೆಯನ್ನು ಮುರಿದಾರು, ಎಂದು ನಾನು ಎಚ್ಚರಿಕೆ ಯನ್ನು ಕೊಡುತ್ತಿದ್ದೇನೆ. ಈ ವಿಚಾರವನ್ನು ಆಮೂಲಾಗ್ರವಾಗಿ ಯೋಚನೆ ಮಾಡಬೇಕು. ಕಂದಾಯದ ಹೊರೆಯನ್ನು ಹೊತ್ತು ಶತಮಾನಗಳಿಂದ ರೈತ ಸರ್ಕಾರದ ಖಜಾನೆಯನ್ನು ತುಂಬು ತ್ತಿದ್ದಾನೆ. ರೈತನ ಕಂದಾಯದಿಂದಲೇ ಈ ದೇಶವನ್ನು ಆಳಿದರು. ಒಂದಾನೊಂದು ಕಾಲದಲ್ಲಿ ಈ ರೆವಿನ್ಯೂ ಇಲಾಖೆ ಒಂದರಿಂದಲೇ ಅನೇಕ ರಾಜ್ಯಗಳಲ್ಲ ಸರ್ಕಾರದ ಖಜಾನೆಗೆ ಹಣ ಬರುತ್ತಿತ್ತು. ಅದರಲ್ಲಿ ಶೇಕಡಾ 80 ರಷ್ಟು ಹಣ ಕಂದಾಯದ ವಸೂಲಿಯಲ್ಲಿ ಬರುತ್ತಿತ್ತು. ಹಿಂದಿನ ಮೈಸೂರು ರಾಜ್ಯದಲ್ಲಿ ಅದರ ಆದಾಯ 3 ಕೋಟಿ ರೂಪಾಯಿಗಳು ಇದ್ದಂತಹ ಕಾಲದಲ್ಲಿ ಸುಮಾರು $2\frac{1}{2}$ ಕೋಟಿ ರೂಪಾಯಿಗಳು ಈ ಕಂದಾಯದಿಂದಲೇ ಬರುತ್ತಿತ್ತು. ಕಂದಾಯದ ಮುಖಾಂತರವೇ ದೇಶವನ್ನು ನಡೆಸಿಕೊಂಡು ಹೋಗತಕ್ಕಂಥ ಕಾಲ ಇತ್ತು. ಇವೊತ್ತು ಯಾವ ಕಂದಾಯವನ್ನು ಕೊಡುತ್ತಾರೆಯೋ ಆ ಉತ್ಪತ್ತಿ ಕ್ಷೇತ್ರದಿಂದ ಉತ್ಪತ್ತಿಯಾಗತಕ್ಕಂಥ ವಸ್ತುಗಳಿಂದ ಬೇರೆ ಬೇರೆ ರೀತಿಯಲ್ಲಿ ಸರ್ಕಾರದ ಖಜಾನೆಗೆ ಹಣ ಬರುತ್ತಿದೆ. ಭೂಮಿಯಿಂದ ಉತ್ಪತ್ತಿಯಾಗ ತಕ್ಕ ವಸ್ತುಗಳಿಂದ ಅನೇಕ ರೀತಿಯಲ್ಲಿ ಸೇಲ್ಸ್ ಟ್ಯಾಕ್ಸ್, ಇನ್‌ಕಂಟ್ಯಾಕ್ಸ್, ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಇತ್ಯಾದಿ ರೂಪದಲ್ಲಿ ದೇಶದ ಖಜಾನೆಗೆ ಕೋಟ್ಯಾಂತರ ರೂಪಾಯಿಗಳನ್ನು ತುಂಬ ತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಪಾನನಿರೋಧವನ್ನು ಜಾರಿಗೆ ತರುತ್ತೇವೆ. ಎನ್ನುವ ಉದ್ದೇಶಕ್ಕೋಸ್ಕರ ಮಾರಾಟ ತೆರಿಗೆಯನ್ನು ತರುತ್ತೇವೆ ಎಂದು ಹೇಳಿದರು. ಇವೊತ್ತು ಮಾರಾಟ ತೆರಿಗೆಯನ್ನು ವರ್ಷೇ ವರ್ಷೇ ಹೆಚ್ಚಿಸುವುದರಿಂದ 5-10 ಕೋಟಿ ರೂಪಾಯಿಗಳ ಜಾಸ್ತಿ ಆದಾಯ ನಮ್ಮ ಸರ್ಕಾರದ ಖಜಾನೆಗೆ ಬರುತ್ತಿದೆ. ಒಂದು ವರ್ಷಕ್ಕೆ ಸುಮಾರು 30-35 ಕೋಟಿ ರೂಪಾಯಿ ಗಳನ್ನು ಈ ಮಾರಾಟ ತೆರಿಗೆ ಒಂದರಿಂದಲೇ ಸಂಪಾದನೆ ಮಾಡತಕ್ಕ ಕಾಲ ಬಂದಿದೆ. ಮದ್ಯಪಾನ ರದ್ದು ಮಾಡುತ್ತೇವೆಂದು ವರಮಾನ ತೆರಿಗೆಯನ್ನು ಬೇರೆ ತೆಗೆದುಕೊಳ್ಳುತ್ತಿದ್ದಾರೆ. ಇಷ್ಟಾದರೂ ಕೂಡ ಭೂಕಂದಾಯವನ್ನು ರದ್ದು ಮಾಡಿ ಅದನ್ನು ಬೇರೆ ರೀತಿಯಲ್ಲಿ ಪುನಃ ಹಾಕಬೇಕೆಂದು ಯೋಚನೆ ಮಾಡತಕ್ಕದ್ದು ಅಕ್ಷಮ್ಯ ಅಪರಾಧ. ಆದ್ದರಿಂದ ಮಾನ್ಯ ಕಂದಾಯ ಮಂತ್ರಿಗಳು ಇದರ ಬಗ್ಗೆ ಯೋಚನೆ ಮಾಡಿ ಈ ಚರ್ಚೆಗೆ ಉತ್ತರ ಕೊಡತಕ್ಕ ಕಾಲದಲ್ಲಿ ಕಂದಾಯದ ರದ್ದಿಯಾತಿ ಬಗ್ಗೆ ಸರ್ಕಾ ರದ ನಿರ್ದಿಷ್ಟವಾದ ನೀತಿಯೇನು, ಅದನ್ನು ರದ್ದು ಮಾಡುವುದಕ್ಕೆ ಸರ್ಕಾರದವರು ತಯಾರಾಗಿ ದ್ದಾರೆಯೋ ಹೇಗೆ ಎನ್ನುವ ವಿಚಾರದಲ್ಲಿ ಒಂದು ಸಮಾಧಾನಕರವಾದ ಉತ್ತರವನ್ನು ಕೊಡಬೇಕೆಂದು ನಾನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ. ಹಾಗಿಲ್ಲದೆ ಜಾರು ಮಾತುಗಳನ್ನು ಹೇಳುವು

ದಾದರೆ ದೇಶದಲ್ಲಿ ರೈತರ ಒಂದು ದೊಡ್ಡ ಚಳುವಳಿಯನ್ನು ಎದುರಿಸಬೇಕಾಗುತ್ತದೆ. ರೈತ ಚಳುವಳಿಗೆ ಸಿದ್ಧನಾಗಿದ್ದಾನೆ. ಅವನು ಕ್ಷಾಮಡಾಮರಗಳಿಗೆ ತುತ್ತಾಗಿ ಮನೆ ಮಠಗಳನ್ನು ಕಳೆದುಕೊಳ್ಳುವ ಪರಿಸ್ಥಿತಿಗೆ ಬಂದಿದ್ದಾನೆ. ಇಂಥಾ ಸಂದರ್ಭದಲ್ಲಿ ಎರಡು ವರ್ಷಗಳ ಕಂದಾಯವನ್ನು ಒಂದೇ ಬಾರಿಗೆ ಕೊಡಿ ಎಂದು ಸರ್ಕಾರದವರು ಏನೊಂದು ಆಜ್ಞೆಯನ್ನು ಹೊರಡಿಸಿದ್ದಾರೆಯೋ ಅದು ಯೋಗ್ಯವಲ್ಲ ಎಂದು ನಾನು ತಮ್ಮ ಮೂಲಕ ಹೇಳುತ್ತೇನೆ. ಚುನಾವಣೆಯ ಪೂರ್ವ ಏನು ಮಾತನ್ನು ಈ ಸರ್ಕಾರ ಜನತೆಗೆ ಕೊಟ್ಟಿದ್ದಾರೆಯೋ ಆ ಮಾತನ್ನು ಉಳಿಸಿಕೊಳ್ಳಬೇಕು. ಮತ್ತು ಕೂಡಲೇ ಎರಡು ವರ್ಷಗಳ ಕಂದಾಯವನ್ನು ರದ್ದು ಮಾಡಬೇಕು. ಇನ್ನೊಂದು ಮಾತನ್ನು ಕಂದಾಯ ಮಂತ್ರಿಗಳು ಹೇಳಿದ್ದಾರೆ, ಇವೊತ್ತು 5 ಕಡೆಯ ಪ್ರದೇಶಗಳು ಒಂದುಗೂಡಿರುವುದರಿಂದ ದೇಶದಲ್ಲಿ ಕ್ಷಾಮ ಬಂದರೆ ಕೆಲವು ಕಾನೂನಿನ ಅಡಚಣೆಯಿಂದ ಕಂದಾಯವನ್ನು ರದ್ದು ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಅದಕ್ಕೆ ಯಾವ ಕಾನೂನಿನ ಅಡಚಣೆ ಇದ್ದರೂ ಕೂಡ ಈ ಶಾಸನ ಸಭೆಯಲ್ಲಿ ಆ ಕಾನೂನಿಗೆ ತಿದ್ದುಪಡಿಯನ್ನು ತಂದರೆ ಆ ಕಾನೂನನ್ನು ಮಾರ್ಪಾಡು ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಇವೊತ್ತು ದೇಶದಲ್ಲಿ ಅನೇಕ ವಿಚಾರಗಳಲ್ಲಿ ಗೊಂದಲವನ್ನುಂಟು ಮಾಡತಕ್ಕ ಸಮಸ್ಯೆಗಳು ಈ ಕಂದಾಯ ಇಲಾಖೆಯಲ್ಲಿ ಇವೆ. ಇವುಗಳನ್ನೆಲ್ಲಾ ಮಾನ್ಯ ಕಂದಾಯ ಮಂತ್ರಿಗಳು ವಿಚಾರಿಸಬೇಕಾಗಿದೆ.

ಈಗ ಗ್ರಾಮಾಧಿಕಾರಿಗಳನ್ನು ತೆಗೆದುಹಾಕಬೇಕೆಂದು ಮಾಡಿದ್ದಾರೆ. ಶ್ಯಾನುಭೋಗರು ಪಟೇಲರು ಮತ್ತು ತೋಟಿ ತಳವಾರರುಗಳು ಹೋಗಬೇಕೆಂದು ಈಗ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇವೊತ್ತು ನಾನು ಕೇಳತಕ್ಕಂಥಾದ್ದು, ಯಾವ ವ್ಯಕ್ತಿ ಒಂದು ವೃತ್ತಿಯನ್ನು ಅವಲಂಬಿಸಿಕೊಂಡು ಜೀವನವನ್ನು ನಡೆಸಿಕೊಂಡು ಹೋಗುತ್ತಿದ್ದಾನೆಯೋ ಆ ವ್ಯಕ್ತಿ ತನ್ನ ಜೀವನದ ಉತ್ಪತ್ತಿ ಸಾಧನವನ್ನು ಕಳೆದುಕೊಳ್ಳುತ್ತಾನೆ. ಆದ್ದರಿಂದ ಅವರಿಗೆ ಬೇರೆ ಒಂದು ಜೀವನ ಮಾರ್ಗವನ್ನ ಕಲ್ಪನೆ ಮಾಡುವುದು ಸರ್ಕಾರದ ಜವಾಬ್ದಾರಿ. ಶ್ಯಾನುಭೋಗರು, ಪಟೇಲರು ಏನಿದ್ದಾರೆಯೋ ಅವರುಗಳನ್ನು ಕೆಲಸದಿಂದ ಹೊರಕ್ಕೆ ಕಳುಹಿಸತಕ್ಕ ಕಾಲದಲ್ಲಿ ಅವರಿಗೆ ಬೇರೊಂದು ಜೀವನ ಮಾರ್ಗವನ್ನು ಕಲ್ಪನೆ ಮಾಡುವುದು ಯಾವುದೇ ಸರ್ಕಾರದ ಕರ್ತವ್ಯ. ಆದ್ದರಿಂದ ಅದನ್ನು ತಕ್ಷಣ ಸರ್ಕಾರ ಮಾಡಬೇಕೆಂದು ಈ ಮೂಲಕ ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ.

ಇನ್ನು ಅರಣ್ಯ ಇಲಾಖೆಯ ವಿಷಯವನ್ನು ಹೇಳುವುದಾದರೆ, ಭಾರತ ದೇಶದಲ್ಲಿರತಕ್ಕ ರಾಜ್ಯಗಳಲ್ಲಿ ಹೆಚ್ಚಿನ ಅರಣ್ಯ ಸಂಪತ್ತನ್ನು ಹೊಂದಿರತಕ್ಕದ್ದು ಮೈಸೂರು ದೇಶ. ನಮ್ಮ ದೇಶದಲ್ಲಿ ಈ ಒಂದು ಅರಣ್ಯ ಇಲಾಖೆಯಿಂದ ಈ ದೇಶಕ್ಕೆ 10½ ಕೋಟಿ ರೂಪಾಯಿಗಳಷ್ಟು ಉತ್ಪತ್ತಿ ಇದೆ. ಒಂದು ಕೈಯಲ್ಲಿ ಬಂದ ಉತ್ಪತ್ತಿಯನ್ನು ಇನ್ನೊಂದು ಕೈಯಿಂದ ಕೊಟ್ಟುಬಿಡುತ್ತೀರಿ. ಈ ಬೇಡಿಕೆಯಲ್ಲಿ ಆರು ಕೋಟಿ ಇಪ್ಪತ್ತೇಳು ಲಕ್ಷ ರೂಪಾಯಿ ಖರ್ಚನ್ನು ಕೂಡ ಕೇಳಿದ್ದೀರಿ. ಏತಕ್ಕೆ ಇಷ್ಟು ಖರ್ಚು ಮಾಡಬೇಕು ? ಕೇವಲ ಸಿಬ್ಬಂದಿಗಾಗಿ ಒಂದೂವರೆ ಕೋಟಿ ಖರ್ಚು ಮಾಡುತ್ತೀರಿ. ವರ್ಷೇ ವರ್ಷೇ ಸಿಬ್ಬಂದಿ ಖರ್ಚು ಏರುತ್ತಿದೆ. ಏತಕ್ಕೋಸ್ಕರ ಸಿಬ್ಬಂದಿ ಖರ್ಚು ಏರಬೇಕು ? ಸಿಬ್ಬಂದಿಗೆ ಹೆಚ್ಚು ಖರ್ಚು ಮಾಡಿದರೆ ಕಾಡಿನ ಸಂಪತ್ತು ಬೆಳೆದೀತೇನು ? ಸಿಬ್ಬಂದಿಗೆ ಇಷ್ಟು ಖರ್ಚುಮಾಡುವುದು ಖಂಡಿತವಾಗಿ ಒಳ್ಳೆಯದಲ್ಲ, ಇದು ಸಹ ಒಳ್ಳೆಯ ನೀತಿಯಲ್ಲ ಎಂದು ಹೇಳುತ್ತೇನೆ. ಸಿಬ್ಬಂದಿ ವರ್ಗ ಜಾಸ್ತಿಯಾದರೂ ಕೂಡ ಸ್ಮಗ್ಲಿಂಗ್ ಅಂದರೆ ಕಳ್ಳಸಾಗಾಣಿಕೆ ನಿಲ್ಲಿಸಲು ನಿಮಗೆ ಆಗಿಲ್ಲ. ಇದನ್ನು ಅನೇಕ ಸಲ ಹೇಳಿದ್ದೇನೆ. ಇದುವರೆಗೆ ಕಳ್ಳಸಾಗಾಣಿಕೆ ನಿಲ್ಲಿಸಲು ನಿಮಗೆ ಸಾಧ್ಯವಾಗಿಲ್ಲ. ಇದು ಸರಿಯಲ್ಲ.

2-30 P.M.

ಎರಡನೆಯದಾಗಿ ಹೇಳಬೇಕಾದ ವಿಚಾರ ಅಂದರೆ ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನು ಸಾಗುವಳಿಗೆ ಕೊಡಬೇಕಾದುದು. ಬಜೆಟ್ಟಿನ ಸಾಮಾನ್ಯ ಚರ್ಚೆಯ ಕಾಲಕ್ಕೆ ಸರಕಾರದ ಮೇಲೆ ಈ ಬಗ್ಗೆ ಗುರುತರವಾದ ಆಪಾದನೆ ಮಾಡಿದ್ದೇವೆ. ಅರಣ್ಯ ಇಲಾಖೆಗೆ ಸಂಬಂಧಪಟ್ಟ ಜಮೀನು ಸಾಗುವಳಿಗೆ ಕೊಡುವುದಕ್ಕೆ ಕಾನೂನಿನ ಅನೇಕ ಅಡಚಣೆಗಳಿವೆ. ಭೂಮಿಯನ್ನು ನಂಬಿರತಕ್ಕಂತ ಸಾಮಾನ್ಯ ಪ್ರಜೆ ಭೂಮಿ ಕೊಡಬೇಕೆಂದು ಕೇಳುವುದಕ್ಕೆ ಬಂದರೆ ಕಾನೂನಿನ ಅಡಚಣೆ ತೋರಿಸುತ್ತೀರಿ. ಅಂಥವನಿಗೆ ಭೂಮಿ ಕೊಡುವುದಿಲ್ಲ. ಆದರೆ ದೊಡ್ಡ ಬಂಡವಾಳಗಾರರು ಕೋಟ್ಯಾನುಕೋಟಿ ರೂಪಾಯಿ ಬಂಡವಾಳ ಇರತಕ್ಕಂಥವರಿಗೆ ಯಾವುದಾದರೊಂದು ನೆಪದಲ್ಲಿ ಭೂಮಿ ಕೊಡುತ್ತೀರಿ. ಇದು ನಿಜವಾಗಿಯೂ ಅನೀತಿ ಎಂದು ಹೇಳುತ್ತೇನೆ. ಇದಕ್ಕೆ ಕಾನೂನು ಬಲ ಸಚಿವರಿಗೆ ಇರಬಹುದು. ಕಾನೂನು ಅಂದರೆ ರಬ್ಬರ್ ಅಲ್ಲ. ರಬ್ಬರದ ಹಾಗೆ ಹಿಗ್ಗಿಸುವುದು ಸರಿಯಲ್ಲ. ಹಿರಣ್ಯಯ್ಯನವರ ಲಂಚಾವತಾರ ನಾಟಕದಲ್ಲಿ ಹೇಳಿದ ಹಾಗೆ ಕಾಂಗ್ರೆಸ್ ಸರಕಾರದ ಕೈಯಲ್ಲಿ ಕಾನೂನು ರಬ್ಬರ ಆಗಿದೆ

(ಶ್ರೀ ಎಸ್. ಶಿವಪ್ಪ)

ಎಂದು ಹೇಳುತ್ತೇನೆ. ಈ ರೀತಿ ಕಾನೂನು ಹಿಗ್ಗಿಸುವುದು ಸರಿಯಲ್ಲ. ಬಡ ರೈತನು ಬಂದರೆ ಅವನ ಮುಖಕ್ಕೆ ಕಾನೂನು ತೋರಿಸುವ ನೀತಿ ನಿಜವಾಗಿಯೂ ಖಂಡನೀಯವಾದ ನೀತಿ. ಆದಷ್ಟು ಬೇಗ ಇದನ್ನು ಸರಿಪಡಿಸಬೇಕು. ಕಾಂಗ್ರೆಸ್ಸು ಒಳ್ಳೆಯದು ಮಾಡುತ್ತಾರೆಂದು ನಂಬಿರತಕ್ಕಂಥ ಜನರ ಬಾಯಿಗೆ ಮಣ್ಣು ಹಾಕಬೇಡಿ. ಕಾನೂನು ಬಗ್ಗೆ ಒಂದೇ ರೀತಿಯ ದೃಷ್ಟಿ ಇಟ್ಟುಕೊಂಡರೆ ಯೋಗ್ಯವಾಗುತ್ತದೆ. ಶಿವಮೊಗ್ಗ ಜಿಲ್ಲೆಯ ಕಾಡಿನಲ್ಲಿ ಬೆಂಕಿ ಬಿದ್ದುದು ವಿಚಾರಣೆಯಾಗಲಿಲ್ಲ. ಈ ಸಮಾಚಾರ ಪತ್ರಿಕೆಗಳಲ್ಲಿ ಬಂದಿತ್ತು. ಕಾಡಿಗೆ ಬೆಂಕಿ ಬಿದ್ದ ಕಾರಣ ಕಾಡ್ಗಿಚ್ಚು ಬಂತು ಗಾಳಿ ಬಂತು ಎಂದು ಹೇಳುತ್ತಾರೆ. ಇದು ಯಾವ ಗಾಳಿ? ಕಾಡಿಗೆ ಬೆಂಕಿ ಬಿದ್ದುದನ್ನು ವಿಚಾರಣೆ ಮಾಡುವುದಕ್ಕೆ ಮಂತ್ರಿಗಳು ಆ ಜಾಗಕ್ಕಾದರೂ ಹೋಗಿದ್ದರೇ! ವಿಚಾರಣೆ ಇದುವರೆಗೆ ಆಗಿಲ್ಲ. ನಿಜವಾಗಿಯೂ ಇದು ವಿಷಾದಕರ. ಅರಣ್ಯ ಸಂಪತ್ತನ್ನು ಈ ರೀತಿ ಸ್ವಾರ್ಥಕ್ಕೆ ಉಪಯೋಗಿಸಿಕೊಂಡರೆ ದೇಶಕ್ಕೆ ಅಗಾಧವಾದ ನಷ್ಟವಾಗುತ್ತದೆ. ನಾನು ಈ ಮಾತನ್ನು ಮಂತ್ರಿಗಳಿಗೆ ಹೇಳುತ್ತೇನೆ.

ಕೊನೆಯದಾಗಿ ಕಂದಾಯ ಮಂತ್ರಿಗಳು ಕಂದಾಯ ರದ್ದಿಯಾತಿ ವಿಚಾರದ ಬಗ್ಗೆ ಈ ಸಭೆಗೆ ಉತ್ತರ ಕೊಡುವಾಗ್ಗೆ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ರೈತ ಭೂಮಿ ನಂಬಿಕೊಂಡಿದ್ದಾನೆ. ಕಂದಾಯ ಮಂತ್ರಿಗಳು ಕಂದಾಯ ವಜಾ ಮಾಡುತ್ತಾರೆ ಎಂದು ನಿರೀಕ್ಷಣೆ ಮಾಡಿದಂಥ ಜನರಿಗೆ ನಿರಾಶೆ ಉಂಟು ಮಾಡಿದರೆ ಒಂದು ದೊಡ್ಡ ಚಳವಳಿ, ಜನರ ಶಕ್ತಿಯ ಪ್ರದರ್ಶನ ಸರಕಾರ ನೋಡಬೇಕಾಗುತ್ತದೆ. ಜನರಿಗೆ ಸರ್ಕಾರದಲ್ಲಿರುವ ನಂಬಿಕೆ ಉಳಿಸಲು ಕಂದಾಯ ರದ್ದು ಮಾಡಬೇಕು. ಕಂದಾಯ ರದ್ದು ಮಾಡುವುದಕ್ಕೆ ಒಂದು ಧೀರ ತೀರ್ಮಾನ ತೆಗೆದುಕೊಳ್ಳಬೇಕು. ಕಾಂಗ್ರೆಸ್ಸೇತರ ಸರಕಾರ ಇರುವ ರಾಜ್ಯದಲ್ಲಿ ಸಹ ಕಂದಾಯ ರದ್ದು ಮಾಡುವ ಒಂದು ಧೀರ ತೀರ್ಮಾನ ಅವರು ತೆಗೆದುಕೊಂಡಿದ್ದಾರೆ. ನೀವೂ ಕೂಡ ಅದೇ ರೀತಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ನೀವು ಚಂಡಿ ಕತೆಯ ಹಾಗೆ ಮಾತ್ರ ಮಾಡಬೇಡಿ. ಹಟಮಾರಿತನವನ್ನು ಬಿಟ್ಟು ಬಿಡಿ. ಕೂಡಲೇ ಕಂದಾಯ ರದ್ದು ಮಾಡುವ ಬಗ್ಗೆ ಸರಕಾರ ಉತ್ತರ ಕೊಡಬೇಕು ಎಂದು ಒತ್ತಾಯ ಮಾಡಿ ನನ್ನ ಭಾಷಣ ಮುಗಿಸುತ್ತೇನೆ.

†Sri M. SRINIVASA NAYAK (Mangalore-I).—Mr. Speaker, Sir, I rise to support the Demands placed before this august House by the Hon'ble Minister for Revenue and Forests. On my part, I am voicing the feelings of South Kanara people that they are happy that Sri B. Rachaiah is continued as Minister for Forests, because during the last term of his office he has done very good work. Whether it is with regard to expansion of forests or preservation of forests or with regard to the increase of revenue, he has done good work, and I hope this time he will do really better so that the income will go up further. It is very praiseworthy that the Department is concentrating upon the expansion of forests and revitalising by planting valuable trees such as Rose wood and other trees. I would like to bring to the notice and draw the attention of the Hon'ble Minister to one fact about the forest produce. Our forest produce, like Naksonika, Rampatri, etc., has got not only a very good internal market, but also external market. Today the prices are such that it is really worthwhile for the Government to concentrate upon planting of these trees so that the income from that produce might be commendable in the next season. I read a book on the Statistical Survey of Mysore. I went through the whole book. I was not able to find the name of Cashew in that book. Government has not at all given any attention to the growing of Cashew in our area. Mysore has got an export market for Cashew to America, and nearly foreign exchange to the tune of Rs. 5 crores can be obtained by the export of Cashew. But, in Mysore they are depending upon Cashew imported from Mosambica in

Africa for our own industries. Now that they have started export of Cashew, it will be reckoned and in the course of 10 years they are bound to put a ban on its export. Therefore, it is necessary that we should take a chance of growing Cashew here for export purposes or for purposes of our own factory requirements in Mysore itself. We have got vast forest area. I was told that the Forest Department is concentrating upon growing of Cashew trees. The method, I understand, is to sprinkle seeds in the forests so that the Cashew trees might grow. The Cashew tree should be on a plain land so that the people could go and pick up the fruits. Otherwise, the fruit falls down and it cannot be picked up. If the Cashew is grown where there are wild trees, it would not be possible to take cashew nuts and make it available to the exporters. The commercial price of cashew is equal to the price of rice. The price of the paddy is Rs. 100 per quintal and the price of cashew is also Rs. 100 per quintal. So from the commercial point of view growing of cashew is also beneficial. It contains Vitmin 'C'. Its juice is very useful for medicinal purposes. It is stated that the juice is used as medicine for Asthma. Its shells are also very useful. Some kind of oil is taken out from the shells. The oil is being exported to foreign countries. Therefore we can earn foreign exchange also. Every part of the cashew is very vital and important. It does not require more attention while it grows. It has to be planted. During the first four months it needs your care and attention and water is to be given during this period. Fruit should not be plucked at its raw stage. Kerala has a number of cashew factories. There may be about 100 factories there. All facilities are given there to grow more cashew because they know its worth. We too should maintain the market for this commodity and preserve export for the Mysore State.

Regarding forest, we have got technical know-how and the Minister concerned can understand how the forest could be preserved and maintained. We have got a very large area of forest wherein very valuable trees are there. We should see that forest wealth is maintained and also forest industries are started.

Nippani Beedi leaves have got their own intrinsic value. These leaves used to be grown in some parts of Mysore State. These leaves are useful for rolling the beedies. Attention should be paid to grow more trees of these leaves which bring additional revenue to the State exchequer. The Forest Department should see that it is popularised and see that it is grown in large number. Some Division of Forest Department should be posted with this work and it should make this as a commercial project of the Department.

As far as the land revenue is concerned, I am one for the abolition of land revenue. The entire members of this side of the House are interested and they have insisted that land revenue should be abolished. We have already made a representation to the Government in this regard and the Government is taking necessary steps, I think, to abolish the land revenue and to find out the ways augmenting the resources.

(SRI M. SRINIVASA NAIK)

Other States have already abolished the land revenue. Therefore the Government will take necessary steps to do away with the land revenue so that it would be a great monetary help to the ryots.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಸಭಾಪತಿಗಳೇ, ನಮ್ಮ ದೇಶ ಹೆಚ್ಚಾಗಿ ಕೃಷಿಯಿಂದ ಬಾಳುವ ಜನರ ದೇಶವಾಗಿದೆ. ಈ ಕೃಷಿ ಒಳ್ಳೆಯ ದಿಸೆಯಲ್ಲಿ ಅಭಿವೃದ್ಧಿಯಾಗಬೇಕಾಗಿದೆ. ಅರಣ್ಯ ಸಂಪತ್ತನ್ನು ಕಾಪಾಡಿಕೊಳ್ಳುವುದು ನಮ್ಮ ಸರ್ಕಾರದ ಮತ್ತು ಜನಗಳ ಹೊಣೆಯಾಗಿದೆ. ನಾವು ಭೂಗೋಳದಲ್ಲಿ ಓದುತ್ತಿದ್ದೆವು ಅರಣ್ಯ ಹೆಚ್ಚಾಗಿರತಕ್ಕ ಕಡೆ ಮಳೆ ಹೆಚ್ಚಾಗಿ ಬರುತ್ತದೆ, ಅಲ್ಲಿ ಸಮೃದ್ಧಿಯಾಗಿರುತ್ತದೆ ಎಂದು. ಈಗ ಮಳೆ ಬರದೆ, ಅರಣ್ಯ ಹಾಳಾಗಿರುವುದನ್ನು ನೋಡಿದರೆ ಆ ಮಾತು ನಿಜವೋ ಎನ್ನುವ ಭಾವನೆ ಎಲ್ಲರಲ್ಲಿಯೂ ಮೂಡಿ ಬರುತ್ತದೆ. ಮಲೆನಾಡಿನಲ್ಲಿ ದಟ್ಟವಾದ ಅರಣ್ಯಗಳು ಇದ್ದು ಅಲ್ಲಿ ಹೆಚ್ಚಾಗಿ ಮಳೆ ಬಂದು ಅಲ್ಲಿಯ ಬೆಳೆ ಯಾವತ್ತಿಗೂ ಖಚಿತವಾಗಿ ಬರುತ್ತದೆ ಎನ್ನುವ ನಂಬಿಕೆ ಇತ್ತು. ಇಲ್ಲಿಯವರೆಗೂ ಮಲೆನಾಡಿನಲ್ಲಿ ಮಳೆ ಜೂನ್ ತಿಂಗಳ 18ನೇ ತಾರೀಖಿನ ಒಳಗೆ ಬರಬೇಕಾಗಿತ್ತು ; ಭದ್ರಾ ಮತ್ತು ತುಂಗಾ ನದಿಗಳಲ್ಲಿ ಪ್ರವಾಹ ಬರಬೇಕಾಗಿತ್ತು. ಜುಲೈ ತಿಂಗಳು ಪ್ರಾರಂಭವಾದರೂ ಮಳೆ ಸರಿಯಾಗಿ ಬಂದಿಲ್ಲ. ಈಗ ಅರಣ್ಯ ಸಂಪತ್ತು ನಶಿಸಿಹೋಗುತ್ತಿದೆ. ಹಿಂದೆ ನಮ್ಮ ಕವಿಗಳು ಪ್ರಕೃತಿ ದೇವಿಯ ಸೆರಗಿಗೆ ಹೋಲಿಸಿದ್ದಾರೆ ಈ ಅರಣ್ಯ ಸಂಪತ್ತನ್ನು. ನಮ್ಮ ಮುಂದಿನ ಪೀಳಿಗೆಗೆ, ಈ ಕವಿಗಳು ನಿಜವಾಗಿ ನೋಡಿ ಬರೆದಿದ್ದಾರೆಯೋ ಅಥವಾ ಬರೀ ಕವನದಲ್ಲಿ ಮಾತ್ರ ಹಾಗೆ ಬರೆದಿರುತ್ತಾರೆಯೋ ಎನ್ನುವ ಹಾಗೆ ಭಾಸವಾಗುತ್ತದೆ, ಆ ಕವನಗಳನ್ನು ನೋಡಿದರೆ. ಈ ಬಜೆಟ್ಟಿನಲ್ಲಿ ನೋಡಿದರೆ 1966-67ರಲ್ಲಿ ಟಿಂಬರ್ ಅಂಡ್ ಅದರ್ ಪ್ರಾಡ್ಯೂಸ್ ರಿಮೂವ್ಡ್ ಫ್ರಂ ಫಾರೆಸ್ಟ್ ಬೈ ಗವರ್ನ್‌ಮೆಂಟ್ ಏಜೆನ್ಸಿ ಎಂದು 7,27,72,000 ರೂಪಾಯಿ ಮತ್ತು ರಿವೈಸ್ಡ್ ಫಿಗರ್ಸ್‌ನಲ್ಲಿ 7,23,05,000 ಎಂದು ಕೊಟ್ಟಿದ್ದಾರೆ. 1967-68ರಲ್ಲಿ 7,12,00,000 ರೂಪಾಯಿಗಳಿಗೆ ಇಳಿದಿದೆ. ಮತ್ತೆ ಕನ್‌ಸ್ಯೂಮರ್ ಮತ್ತು ಪರ್ಚೇಸರ್ ಇವರಿಂದ ತೆಗೆದುಕೊಂಡು ಹೋಗುವಂಥಾದ್ದು 24 ಲಕ್ಷ ಏರಿದೆ. ಸರ್ಕಾರದ ಏಜೆನ್ಸಿ ಮೂಲಕ ತೆಗೆಯುವುದರಲ್ಲಿ ಈ ರೀತಿ ಇಳಿಯಲು ಕಾರಣವೇನು ಎನ್ನುವುದನ್ನು ನಾವು ಮೊದಲು ಪರಿಶೀಲನೆ ಮಾಡಬೇಕು. ಇದು ಅಲ್ಲಿನ ಅಧಿಕಾರವರ್ಗದವರ ತಪ್ಪೋ ಅಥವಾ ಕಾಡುಗಳು ನಶಿಸಿ ಹೋಗಿರುವುದರಿಂದ ಆ ರೀತಿ ಆಗುತ್ತಿದೆಯೋ ಎನ್ನುವುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಟಿಂಬರ್‌ನಲ್ಲಿ ಮಾತ್ರ 10 ಲಕ್ಷ ರೂಪಾಯಿ ಜಾಸ್ತಿ ಬಂದಿದೆ. ಫೈರ್‌ವುಡ್, ಬಾಂಬೂಸ್ ಟು ಪೇಪರ್ ಮಿಲ್ಸ್, ಗ್ರಾಸ್ ಅಂಡ್ ಅದರ್ ಮೈನರ್ ಪ್ರಾಡ್ಯೂಸ್ ಇವುಗಳಲ್ಲಿ 9 ಲಕ್ಷ 84 ಸಾವಿರ ರೂಪಾಯಿ ಕಡಮೆಯಾಗಿದೆ. ಇದಕ್ಕೆ ಕಾರಣವೇನು, ಏತಕ್ಕೋಸ್ಕರ ಈ ರೀತಿ ಆಗುತ್ತಿದೆ ಎನ್ನುವುದನ್ನು ಸಂಬಂಧಪಟ್ಟ ಮಂತ್ರಿಗಳೂ, ಅಧಿಕಾರ ವರ್ಗದವರೂ ಪರಿಶೀಲನೆ ಮಾಡಬೇಕು. ನಾವು ನೋಡಿದ್ದರಲ್ಲೇ ಶ್ರೀಮಾನ್ ಶಿವಪ್ಪನವರು ಹೇಳಿದಹಾಗೆ ಒಂದು ಪರ್ಮಿಟ್‌ನಲ್ಲಿ ನಾಲ್ಕು ಸಾರಿ ಟಿಂಬರ್ ಸಾಗಿಸಿರುವುದು ಕಂಡುಬಂದಿದೆ. ಏನೂ ಬಂಡವಾಳವಿಲ್ಲದ ಸಾಮಿಲ್ ಮಾಲೀಕ ಲಕ್ಷಗಟ್ಟಲೆ ದುಡಿದಿರುವುದನ್ನು ನೋಡಿದ್ದೇವೆ. ಸರ್ಕಾರಿ ಅಧಿಕಾರಿಗಳ ಮೇಲ್ವಿಚಾರಣೆ ಇದ್ದಾಗ್ಯೂ ಕೂಡ ಈ ರೀತಿ ಆಗುತ್ತಿರುವುದಕ್ಕೆ ಕಾರಣವೇನು ಎನ್ನುವುದನ್ನು ಸಂಬಂಧಪಟ್ಟವರು ಪರಿಶೀಲನೆ ಮಾಡಬೇಕು. ಕಾಡಿನ ಸಂಪತ್ತು ಹೋಗುತ್ತಿರುವುದರಿಂದ ನಾವು ಕಾಡು ಮೃಗಗಳನ್ನು ಕೂಡ ಕಳೆದುಕೊಳ್ಳುತ್ತಿದ್ದೇವೆ. ಕಾಡು ಮೃಗಗಳನ್ನು ಕಾಪಾಡಿಕೊಂಡು ಬರುವ ಉದ್ದೇಶದಿಂದ ನಮ್ಮ ಮಹಾರಾಜರಾದ ಜಯಚಾಮರಾಜ ಒಡೆಯರ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಂಘವನ್ನು ಸ್ಥಾಪನೆ ಮಾಡಿದರು. ಆದರೆ ಈ ಕಾಡು ಮೃಗಗಳು ಎಲ್ಲೆಲ್ಲಿ ಇದ್ದುವೋ ಅಲ್ಲಿ ಇಲ್ಲದ ಹಾಗೆ ಆಗಿದೆ. ಅವುಗಳನ್ನು ನೋಡಬೇಕಾದರೆ ಮೃಗಾಲಯದಲ್ಲಿ ಹೋಗಿ ನೋಡಬೇಕು ; ಬಂಡೀಪುರದ ಕಡೆ ಹೋಗಿ ನೋಡಬೇಕು. ಒಂದು ನಿದರ್ಶನ ಹೇಳಬೇಕು ಎಂದರೆ, ನಮ್ಮ ತಾಲ್ಲೂಕಿನಲ್ಲಿ ಎಮ್ಮೆದೊಡ್ಡಿ ಕಾಡಿನಲ್ಲಿ ಹುಲಿ ಷಿಕಾರಿಗೆ ಡೆಲ್ಲಿ ಮತ್ತು ಉತ್ತರ ಭಾರತದಿಂದ ಜನರು ಬರುತ್ತಿದ್ದರು. ಹಿಂದೆ ಮಹಾರಾಜರು ಕೂಡ ವರ್ಷಕ್ಕೆ ಒಂದು ಸಾರಿ ಎರಡು ವರ್ಷಕ್ಕೆ ಒಂದು ಸಾರಿ ಅಲ್ಲಿಗೆ ಬಂದು ಹುಲಿ ಷಿಕಾರಿ ಮಾಡುತ್ತಿದ್ದರು ಮತ್ತು ಅಲ್ಲಿ ಹಿಡಿದ ಹುಲಿಗಳನ್ನು ಮೃಗಾಲಯಕ್ಕೆ ಕಳಿಸುತ್ತಿದ್ದರು. ಅಂಥ ಕಾಡಿನಲ್ಲಿ ಒಂದು ಹುಲಿಯೂ ಇಲ್ಲದ ಹಾಗೆ ಆಗಿದೆ. ಅರಣ್ಯ ಇಲಾಖೆಯವರು ಜಮೀನು ಸಾಗುವಳಿಗಾಗಿ ಕೊಡುವಾಗ ಆ ಜಮೀನು ಸಾಗುವಳಿಗೆ ಯೋಗ್ಯವಾದುದೇ ಅಥವಾ ಕಾಡು ಬೆಳೆಯುವುದಕ್ಕೆ ಯೋಗ್ಯವಾದುದೇ ಎನ್ನುವುದನ್ನು ಪರಿಶೀಲನೆ ಮಾಡದೆ ಸಿಕ್ಕಾಪಟ್ಟೆ ಕೊಡಬಾರದು. ಭೂಮಿಯನ್ನು ತೆಗೆದುಕೊಳ್ಳುವವರು ಕೂಡ ಜಮೀನು ಹೇಗಿದೆ ಎಂದು ನೋಡದೆ ಅದರಲ್ಲಿರುವ ಕಾಡನ್ನು ನೋಡಿ ತೆಗೆದುಕೊಂಡಿರುತ್ತಾರೆ. ಜಮೀನು ಹಾಗೆಯೇ ಉಳಿಯುತ್ತದೆ.

ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆಯೇ ವಿನಾ ಏನು ವ್ಯವಸಾಯಾಭಿವೃದ್ಧಿ ಮಾಡಿ ಹೆಚ್ಚು ಆಹಾರವನ್ನು ಬೆಳೆಯಬೇಕು ಎನ್ನುವ ಭಾವನೆಯನ್ನು ಸರ್ಕಾರ ಪಡೆದಿದೆಯೋ ಅದು ಬರೀ ಸುಳ್ಳು ಮಾತಾಗುತ್ತಿದೆ. ಹೀಗಾಗಬಾರದು, ಅರಣ್ಯಸಂಪತ್ತನ್ನು ಕಾಪಾಡಿಕೊಂಡುಬಂದರೆ ದೇಶದಲ್ಲಿ ಸಾಕಾದಷ್ಟು ಸುಭಿಕ್ಷ ನೋಡಬಹುದು ಎಂಬ ಭಾವನೆಯಿಂದ ಮಂತ್ರಿಗಳಾಗಲೀ ಅಧಿಕಾರಿಗಳಾಗಲೀ ಹೆಚ್ಚು ಇದರ ಮೇಲೆ ನಿಗಾ ಇಡಬೇಕು. ಶಿವಪ್ಪನವರು ಹೇಳಿದಹಾಗೆ ಜನರಲ್ಲಿ ಮತ್ತು ಅಧಿಕಾರಿಗಳಲ್ಲಿ ತಿಳಿವಳಿಕೆಯನ್ನುಂಟುಮಾಡಿ ಅರಣ್ಯವನ್ನು ಉಳಿಸಿಕೊಳ್ಳಬೇಕು. ಕಾನೂನಿನ ಭಯ ಎಲ್ಲಿಯವರೆಗೆ ಇರುತ್ತದೆ ಅಲ್ಲಿಯವರೆಗೆ ವನಸಂಪತ್ತು ಉಳಿಯುತ್ತದೆ. ಉದಾಹರಣೆಗೆ ಮಲೆನಾಡಿನಲ್ಲಿ ಕಾಫಿತೋಟ ಮಾಡುವುದಾಗಿ ಹೇಳಿದ್ದು ಅಗಲೇ ಇಲ್ಲ, ಲಕ್ಷಾಂತರ ರೂಪಾಯಿಗಳ ಟಿಂಬರ್ 2-3 ಲಕ್ಷಕ್ಕೆ ಮಾರಿ ಮುಂದೆ ಬಂದರೂ 25-30 ಸಾವಿರ ರೂಪಾಯಿ ಕೊಡಲು ಬಹಳ ಮುಂದುವರದಿರುವವರೂ ಹಿಂದುಳಿದರು. ಆದುದರಿಂದ ಈ ಅರಣ್ಯಸಂಪತ್ತಿಗೆ ಹೆಚ್ಚು ಗಮನಕೊಡಬೇಕು ಮತ್ತು ಇದರಿಂದ ಹೆಚ್ಚು ಉತ್ಪತ್ತಿಮಾಡಬಹುದು ಎಂದು ಸೂಚಿಸುತ್ತೇನೆ.

ಭೂಕಂದಾಯ. ಇದನ್ನು ಎಲ್ಲರೂ ಕೂಡ ರದ್ದುಮಾಡಬೇಕೆಂದು ಹೇಳಿದ್ದಾರೆ. ಹಾಗೆ ರದ್ದುಮಾಡುವಾಗ ರೈತನ ಹಿತ ಕಡೆಗಣಿಸಬಾರದು. ಎಲ್ಲೇ ಆಗಲಿ, ರೈತನ ಸ್ವತ್ತು ಅವನಿಗೇ ಸೇರಬೇಕು, ಅದಕ್ಕೆ ಸಾಕ್ಷಿ, ಆಧಾರ ಇರುತ್ತದೆ. ಹಾಗೆ ಮಾಡಿದರೆ ಸಫಲವಾಗುತ್ತದೆ. ಇಲ್ಲದಿದ್ದರೆ ಯಾರು ಬಲಾಢ್ಯರೋ ಅವರಿಗೆ ಮಾತ್ರ ದೊರೆತು ಬಡವರಿಗೆ ಯಾವ ಪ್ರಯೋಜನವೂ ಆಗುವುದಿಲ್ಲ, ತೊಂದರೆಯಾಗುತ್ತದೆ. ಇಷ್ಟು ಹೇಳಿ ಅಧ್ಯಕ್ಷರು ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ.

† ಶ್ರೀ ಭೋಳ ರಘುರಾಮಶೆಟ್ಟಿ (ಕಾರ್ಕಳ).—ಸನ್ಮಾನ್ಯ ಸಭಾಪತಿಗಳೇ, ರೆವೆನ್ಯೂ ಮಂತ್ರಿಗಳು ಮಂಡಿಸಿರುವ ಬೇಡಿಕೆಯನ್ನು ವಿರೋಧಿಸುತ್ತಾ ನನ್ನ ಅಭಿಪ್ರಾಯವನ್ನು ಸಭೆಯ ಮುಂದಿಡಬೇಕೆಂದಿದ್ದೇನೆ. ರೆವೆನ್ಯೂ ಇಲಾಖೆಯು ಇಡೀ ಪ್ರಾಂತದಲ್ಲಿ ಹಬ್ಬಿದೆ. ಅದು ಗ್ರಾಮಗಳಲ್ಲಿ, ತಾಲ್ಲೂಕು ಮತ್ತು ಜಿಲ್ಲಾಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಕೂಡ ಇದೆ. ಆದರೆ ಈ ಇಲಾಖೆಯಿಂದ ಸಾಮಾನ್ಯ ಜನರಿಗೆ, ಮುಖ್ಯವಾಗಿ ರೈತರಿಗೆ ಬೇಕಾದ ನ್ಯಾಯವಾದ ಕೆಲಸಗಳಾಗಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕಳೆದ 15 ವರ್ಷಗಳಲ್ಲಿ ಈ ಇಲಾಖೆಯ ಅಧಿಕಾರಿಗಳ ಸಂಖ್ಯೆ ಮೂರುನಾಲ್ಕರಷ್ಟು ಹೆಚ್ಚಾಗಿದೆ. ಆದರೆ ಇಲಾಖೆಯಿಂದಾಗಬೇಕಾದ ಕಾರ್ಯ ಮೊದಲನ ಕಾಲು ಅಂಶ ಕೂಡ ಆಗುತ್ತಿಲ್ಲ ಎಂಬುದು ಅನೇಕರಿಗೆ ಗೊತ್ತಿದೆ. ಈ ಆಫೀಸಿಗೆ ಕೆಲಸವೇನಾದರೂ ಆಗಬೇಕಾದರೆ ರೈತರು ಎಷ್ಟು ಅರ್ಜಿ ಹಾಕಿದರೂ ಅಥವಾ ಅವರೇ ಅಲ್ಲಿಗೆ ಹೋದರೂ ನ್ಯಾಯ ಸಿಕ್ಕುವುದಿಲ್ಲ. ಅಲ್ಲಿ ಎಷ್ಟು ಆಫೀಸರುಗಳಿದ್ದಾರೆಯೋ ಅವರಿಗೆ ಲಂಚ ಕೊಡುವುದಕ್ಕೆ ತಯಾರಾಗಿರಬೇಕು ಅಥವಾ ಕೆಲಸಮಾಡಿಸಿಕೊಡುವುದಕ್ಕೆ ರಾಜಕೀಯಕ್ಕೆ ಸಂಬಂಧಪಟ್ಟ ಯಾರಾದರೂ ವ್ಯಕ್ತಿಯ ಸಹಾಯವಿರಬೇಕು, ಹಾಗಿದ್ದರೆ ಕೆಲಸವಾಗುತ್ತದೆ, ಇಲ್ಲದಿದ್ದರೆ ಕೆಲಸವಾಗದೆ ಅನೇಕ ವರ್ಷಗಳಾದರೂ ಹಾಗೆಯೇ ಇರುತ್ತದೆ. ಈ ವಿಷಯದಲ್ಲಿ ಸತ್ಯಾಂಶ ತಿಳಿಯಬೇಕಾದರೆ ಮಂತ್ರಿಗಳು ಎಷ್ಟು ಫೈಲುಗಳು ಬಾಕಿಯಿವೆ ಎಂದು ಆಗಾಗ್ಗೆ ನೋಡಿದರೆ ಗೊತ್ತಾಗುತ್ತದೆ. ಆ ರೀತಿ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಈಗ ತೀರ್ವೆ ವಿಷಯವಿದೆ. ತೆರಿಗೆ ಹಾಕಬೇಕಾದರೆ ನ್ಯಾಯವಾದ ಆಧಾರವಿರಬೇಕು. ಉತ್ಪತ್ತಿಯಮೇಲೆ ಹಾಕಬೇಕು. ಭೂಮಿಯಮೇಲೆ ತೀರ್ವೆ ಹಾಕುವುದಕ್ಕೆ ಆಧಾರ ಸರಿಯಾಗಿಲ್ಲ. ಕೇವಲ ಒಬ್ಬ ಮನುಷ್ಯನಿಗೆ ಭೂಮಿಯಿದೆಯೆಂದು ಅದರ ಆಧಾರದಮೇಲೆ ತೀರ್ವೆ ಹಾಕಿದ್ದಾರೆ. ಇದು ಹಲವಾರು ವರ್ಷಗಳಿಂದ ಬಂದಿರುವುದು ನಿಜ. ಆದರೆ ಹಿಂದೆ ಸರಕಾರಕ್ಕೆ ಬೇರೆ ಉತ್ಪತ್ತಿಯಿರಲಿಲ್ಲ, ಈಗ ಬೇರೆ ಬೇರೆ ರೀತಿಯಲ್ಲಿ ಉತ್ಪತ್ತಿ ಇದೆ. ಹೀಗಿರುವಾಗ ಇದನ್ನು ಸಂಪೂರ್ಣವಾಗಿ ವಿಮರ್ಶೆಮಾಡಿ ತೆಗೆಯುವುದು ನ್ಯಾಯ. ಸರ್ಕಾರದವರು ಈ ರೀತಿ ಮಾಡುವುದಾಗಿ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಕ್ಕಾಗಿ ಆಶ್ವಾಸನೆ ಕೊಟ್ಟಿತು. ಮತ್ತು ಅನೇಕ ಕಾಂಗ್ರೆಸ್ ಮಹನೀಯರೂ ಆ ರೀತಿ ಹೇಳಿದರು, ಆದರೆ ಸರ್ಕಾರದ ಅಭಿಪ್ರಾಯ ಸ್ಪಷ್ಟವಾಗಿಲ್ಲ. ಸರ್ಕಾರದ ಡಿಕ್ಲರೇಷನ್ ಆಗಿದೆಯೆಂದು ಗೊತ್ತಾಗಿದೆ. ಆದುದರಿಂದ ಈ ವಿಷಯದಲ್ಲಿ ಗಮನಕೊಟ್ಟು ಬೇಗನೆ ಕಂದಾಯ ತೆಗೆಯಬೇಕು ಮತ್ತು ರೈತರ ಮೇಲೆ ಇದಕ್ಕೆ ಬದಲಾಗಿ ಇನ್ನೊಂದು ರೂಪದಲ್ಲಿ ಬೇರೆ ತೆರಿಗೆ ಹಾಕಬಾರದು. ಬೇರೆ ತೆರಿಗೆ ಹಾಕಿ ತೀರ್ವೆ ತೆಗೆಯುವುದರಿಂದ ರೈತರಿಗೆ ಪ್ರಯೋಜನವಾಗುವುದಿಲ್ಲ. ಇದನ್ನು ನಾನು ಇನ್ನೊಂದು ಬಾರಿ ಹೇಳುತ್ತೇನೆ.

ಸ್ವಾಮಿ, ರೈತರಿಗೆ ಅನೇಕ ಸೌಲತ್ತುಗಳನ್ನು ಕೊಡುತ್ತೇವೆಂದು ಸರ್ಕಾರದವರು ಅನೇಕ ಸಲ ಹೇಳುತ್ತಾರೆ. ರೈತರು ಹೆಚ್ಚು ಉತ್ಪತ್ತಿಮಾಡಬೇಕೆಂದೂ ಹೇಳುತ್ತಾರೆ. ಆದರೆ ರೈತರಿಗೆ

(ಶ್ರೀ ಭೋಳ ರಘುರಾಮಶೆಟ್ಟಿ)

ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ತಕ್ಕ ಸೌಲಭ್ಯಗಳನ್ನು ಕೊಡುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆ ವಿಷಯ ಹೇಳಬೇಕಾಗಿದೆ, ಅಲ್ಲಿ ನೂರಾರು ವರ್ಷಗಳಿಂದ ಕೃಷಿಗೆ ಕುಮುಕಿ ಹಕ್ಕು ಪಡೆಯುವುದಕ್ಕೆ ಅವಕಾಶ ಇತ್ತು. ಆದುದರಿಂದ ಅನೇಕರು ಕುಮ ಕಿ ಇರುವ ಸ್ಥಳದಲ್ಲಿ ಮನೆ ಕಟ್ಟಿ ಕೆರೆ ಬಾವಿ ಮುಂತಾದವುಗಳ ಅನುಕೂಲವನ್ನು ಮಾಡಿಕೊಂಡಿದ್ದಾರೆ. ಆದರೆ ಸರ್ಕಾರದ ಈಗಿನ ಧೋರಣೆ ಪ್ರಕಾರ ಅದಕ್ಕೆ ಮನ್ನಣೆ ಕೊಟ್ಟಿಲ್ಲ. ಅನೇಕ ಕೃಷಿಕರು ಕುಮುಕಿ ದರಖಾಸ್ತಿಗೆ ಅರ್ಜಿ ಕೊಟ್ಟರು. ಚುನಾವಣೆ ಸಮಯದಲ್ಲಿ ಫಾರಂ ಇಲ್ಲ ಎಂದು ನಮ್ಮ ಜಿಲ್ಲೆಯಲ್ಲಿ ತೊಂದರೆಯಾಗಿದೆ. ಚುನಾವಣೆ ಮುಗಿದ ಮೇಲೆ ದರಖಾಸ್ತು ಕೊಡುವುದಾದರೆ ಒಂದು ಕಾನೂನು ಬಂದಿದೆ ಎಂದು ಹೇಳುತ್ತಾರೆ. ಹೀಗಾಗಿ ರೈತರಿಗೆ 4 ವರ್ಷಗಳಿಂದ ಅರ್ಜಿ ಹಾಕಿರುವವರಿಗೆಲ್ಲಾ ಫಲದಾಯಕವಾಗದೆ ಬಾಕಿ ಇದೆ.

ಇನ್ನು ರಿಜಿಸ್ಟ್ರಾರ್ ಆಫೀಸಿನ ವಿಷಯ ಸ್ವಲ್ಪ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ರಿಕಾರ್ಡ್ ಆಫ್ ರೈಟ್ಸ್ ಇಲ್ಲ, ಎಲ್ಲಾ ರಿಜಿಸ್ಟ್ರಾರ್‌ರವರ ಆಫೀಸಿನಲ್ಲೇ ಪಡೆಯಬೇಕು. ಮೊದಲು ಒಂದೊಂದು ಆಫೀಸಿನಲ್ಲಿ 3-4 ಗುಮಾಸ್ತರಿದ್ದರು, ಆದರೆ ಈಗ ಕೆಲಸ ಜಾಸ್ತಿ ಆಗಿ ರಿಕಾರ್ಡುಗಳು ಜಾಸ್ತಿಯಾಗಿ ಹೆಚ್ಚು ರಿಜಿಸ್ಟರಾದರೂ ಒಬ್ಬಿಬ್ಬರು ಗುಮಾಸ್ತರು ಮಾತ್ರ ಇದ್ದಾರೆ. ಹೀಗಾಗಿ ಒಂದು ರಿಜಿಸ್ಟರಾಗಿರುವ ರಿಕಾರ್ಡಿನ ಕಾಪಿ ಬೇಕಾದರೆ 2-3 ತಿಂಗಳಾಗುವವರೆಗೆ ಕಾಯಬೇಕು. ಇದರಿಂದ ಆಗುವ ದುಷ್ಪರಿಣಾಮವೇನೆಂದರೆ, ಕೋರ್ಟುಗಳಲ್ಲಿ, ಸಿವಿಲ್ ಕೋರ್ಟು ಅಥವಾ ಕ್ರಿಮಿನಲ್ ಕೋರ್ಟುಗಳಲ್ಲಿ ಬೇಕಾದ ರಿಕಾರ್ಡನ್ನು ಹಾಜರು ಮಾಡಲು ಬೇಗ ಸಿಕ್ಕದೆ 3-4 ತಿಂಗಳು ಅದಕ್ಕಾಗಿ ಕಾಯಬೇಕಾಗಿ ಅನ್ಯಾಯವಾಗುತ್ತದೆ. ಕೋರ್ಟುಗಳಲ್ಲಿ ರಿಕಾರ್ಡು ಸಿಕ್ಕಿಲ್ಲವೆಂದು ಕಕ್ಷಿಗಾರರು ಅಥವಾ ವಕೀಲರು ಎಷ್ಟೇ ಹೇಳಿದರೂ ಸಮಯ ಮುಂದುವರಿಸುವುದಕ್ಕಾಗುವುದಿಲ್ಲ. ಇದರಿಂದ ನಮ್ಮ ಜಿಲ್ಲೆಗೆ ಬಹಳ ಅನ್ಯಾಯ ಮತ್ತು ದುಷ್ಪರಿಣಾಮವಾಗುತ್ತಿದೆ. ಆದುದರಿಂದ ರಿಜಿಸ್ಟ್ರಾರರ ಆಫೀಸಿನಲ್ಲಿ ಕೆಲಸಕ್ಕೆ ತಕ್ಕಂತೆ ಕಾಪಿ ಮಾಡುವುದಕ್ಕೆ ಗುಮಾಸ್ತರು ಮೊದಲಿದ್ದಷ್ಟಿರಬೇಕು ಅಥವಾ ಕೆಲಸ ಜಾಸ್ತಿಯಾದರೆ ಜಾಸ್ತಿ ಮಾಡಬೇಕು. ಇದೂ ಅಲ್ಲದೆ ಈಗ ಸ್ಟ್ಯಾಂಪುಗಳು ದೊರೆಯದೆ ತೊಂದರೆಯಾಗಿದೆ. ಸ್ಟ್ಯಾಂಪುಗಳು ಸರಿಯಾಗಿ ಸಿಕ್ಕದೆ ಎಷ್ಟೋ ಜನರು ಕೋರ್ಟುಗಳಲ್ಲಿ ಅಪೀಲು ಮಾಡುವುದಕ್ಕೆ ಅರ್ಜಿ ಹಾಕುವುದಕ್ಕೆ ಸಾಧ್ಯವಿಲ್ಲವಾಗಿದೆ. ಕಾಪಿಗಳಿಗೆ ಅರ್ಜಿ ಹಾಕಿದರೆ ಸ್ಟ್ಯಾಂಪು ಕೊಟ್ಟಿಲ್ಲವೆಂದು ಅನೇಕ ಕಡೆ ತಿರಸ್ಕಾರ ಮಾಡಿದ್ದಾರೆ. ಇದರಿಂದ ಕೋರ್ಟುಕಛೇರಿಗಳಿಗೆ ಹೋಗುವವರಿಗೆ ದೊಡ್ಡ ತಡೆ ಉಂಟುಮಾಡಿದ್ದಾರೆ ಎಂಬ ಕೂಗಿದೆ. ಈ ವಿಷಯದಲ್ಲಿ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಸ್ಟ್ಯಾಂಪನ್ನು ಒದಗಿಸುವ ಸಣ್ಣ ವಿಷಯದಲ್ಲಿ ಕೂಡ ಸರ್ಕಾರ ಅಲಕ್ಷದಿಂದ ವರ್ತಿಸುವುದೆಂದರೆ ದೊಡ್ಡ ದೊಡ್ಡ ವಿಷಯಗಳಲ್ಲಿ ಸರ್ಕಾರ ಎಷ್ಟು ಗಮನ ಕೊಡುತ್ತದೆ ಎಂದು ಸಭೆ ನಿರ್ಣಯಮಾಡಬೇಕಾಗಿದೆ.

ಭೂ ಮಸೂದೆ ವಿಷಯ ಕೂಡ ಹೇಳಬೇಕೆಂದಿದ್ದೇನೆ. ಮಂಗಳೂರು, ಮೈಸೂರಿನ ಬೇರೆ ಜಿಲ್ಲೆಗಳಲ್ಲೂ ಬಹಳ ತೊಂದರೆಯಾಗಿದೆ ನಮ್ಮ ಕ್ಷೇತ್ರ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟಿದೆ.

3-00 P. M.

ಕೇರಳದಲ್ಲಿ ಒಂದು ಭೂ ಮಸೂದೆಯನ್ನು ತಂದಿದ್ದರು. ಅಂತಹ ಭೂ ಮಸೂದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರಲಿಲ್ಲ. ಇಂತಹ ಮಸೂದೆ ಇದ್ದಿದ್ದರೆ ನಿಜವಾಗಿಯೂ ಇಷ್ಟೊಂದು ಅನ್ಯಾಯಗಳು ಆಗುತ್ತಿರಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ವಕ್ಕಲುತನ ಮಾಡುವ ಜನರು ಹಾಗೂ ಧಣಿಗಳು ಈಗ ಜಾರಿಗೆ ತರಬೇಕೆಂದಿರುವ ಭೂ ಮಸೂದೆಯನ್ನು ವಿರೋಧ ಮಾಡುತ್ತಿದ್ದಾರೆ. ಇದನ್ನು ನಾವೆಲ್ಲ ಶಾಸಕರೂ ಸೇರಿ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಕಡೆ ಬಂದಿದ್ದಾಗ ಅವರ ಅವಗಾಹನೆಗೂ ಕೂಡ ತಂದಿದ್ದೆವು. ಆಗ ನಾವು ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಂಡು ಇಂತಹ ಮಸೂದೆಯನ್ನು ತಿದ್ದುಪಡಿ ಮಾಡಬೇಕೆಂದು ಸಲಹೆಗಳನ್ನು ಕೊಟ್ಟಿದ್ದೆವು. ನಮ್ಮ ಜಿಲ್ಲೆಯ ಎಲ್ಲ ಶಾಸಕರೂ ಕೂಡ ದಕ್ಷಿಣ ಕನ್ನಡ ಜಿಲ್ಲೆಯ ಜನರಿಗೆ ಅನುಕೂಲವಾಗುವಂತೆ ಈ ಮಸೂದೆಯನ್ನು ತಿದ್ದುಪಡಿ ಮಾಡಿ ತರಬೇಕೆಂದು ಸೂಚನೆ ಸಹ ಕೊಟ್ಟಿದ್ದೆವು. ನಮ್ಮ ಜಿಲ್ಲೆಯಿಂದ ಬರುವ ಉತ್ಪತ್ತಿ ಜಾಸ್ತಿಯಾಗಿರುವ ಕಾರಣ ಇಲ್ಲಿನ ಜನರ ಜೀವನಕ್ಕೆ ಅನುಕೂಲವಾಗುವ ಮಸೂದೆಯನ್ನು ತಂದು ಅವರಿಗೆ ಒಳ್ಳೆಯದು ಆಗುವಂತೆ ಮಾಡಬೇಕು. ಇದರ ಬಗ್ಗೆ ಒಂದು ಮೆಮೊರ್ಯಾಂಡಂ ಕೂಡ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ. ಇದನ್ನು ಮಾಡದೇ ಹೋದರೆ ಇಲ್ಲಿ ವಕ್ಕಲು ಮಾಡುವ ಜನರಿಂದ ಬರುವ ಉತ್ಪಾದನೆ ಕುಂಠಿತವಾಗುತ್ತದೆ. ಇದಕ್ಕೆ ಅವಕಾಶ ಕೊಡ

ಬಾರದು. ಇದರ ಬಗ್ಗೆ ಸರ್ಕಾರ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ರೆವಿನ್ಯೂ ಮಂತ್ರಿಗಳಲ್ಲಿ ವಿನಂತಿಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

Sri MANIKRAO SHAMRAO (Aurad).—(Spoke in Urdu).

(*English version of the Urdu Speech*)

Hon'ble Speaker Sir, welcoming the demands for grants of the Revenue and Forest Departments, I would like to say something on this occasion. Sir, many of my friends on both sides said much for and against the abolition of Land Revenue ; Sir, being an agriculturist, I would be the last man to oppose anything which is beneficial to the agriculturist class of this State. If abolition of land revenue brings any fruitful result to the cultivators I would certainly welcome this but one thing should be borne in mind that there is a lot of difference in the State budget and a family budget of an individual State finds out the means as per its requirement whereas family or an individual spends the money according to the available means at his disposal and it is but natural that Government must find out the means for making up 4½ crores of rupees which it will lose in case it implements the land revenue abolition. It may come in the form of agricultural income tax, etc. As you know Sir, in our country large number of peasents are illiterate and consequently introduction of such cumbersome laws like incomtax on the peasent class would lead to corruption and malpractices. In that case money would neither remain with the cultivators nor it would come to the Government Treasury ; therefore I strongly oppose the move for abolition of land revenue. In order to show some relief to the cultivators the abolition of land revenue is nothing in my opinion but like the presentation of sweetmeat to the children. Today what our ryots need, is expenditure of large sum of money in crores for improving the lands like bunding, arresting of soil erosion, supply of farm machinery, etc. Agricultural land in this country which is being cultivated since ages has become more or less like unserviceable asset. Therefore I feel instead of abolishing the land revenue let us think of giving large scale support to the agriculturists to enable them to bear the land revenue burden for the welfare state. Therefore, I opoose this move.

Secondly a number of my friends suggested the abolition of Divisional Commissioner Office. I also support this move. It has not at all given any relief to the people for quick disposal of work On the other hand it has become a post office for delay between the Government and district administration. I would like to mention here an instance for the knowledge of this House. About 1½ years back the Taluk Board, Santhpur has sent a loan application for the purchase of blasting machine, but even to-day it is pending in the Divisional Commissioner's Office. I feel that there is no need to maintain such a costly office like the Divisional Commissioner's office which in no way serve any purposes. If is in no way less than maintaining white elephants. Therefore, I urge the Government to take steps to abolish this office.

(SRI MANIKRAO SHAMRAO)

Sir, I would like to emphasise on one more point, that is, even after channelising all loans through co-operativies, even to-day considerable amount is being disbursed through revenue officers in the form of revenue takavi and it is observed that hardly 50 per cent takavi goes to the pockets of ryots. Therefore I suggest to the Government to constitute a non-official committee at Taluk level for the proper distribution of takavi loans.

† ಶ್ರೀ ಬಿ. ಭಾಸ್ಕರಶೆಟ್ಟಿ (ಕಾಪು).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಸುಮಾರು ಎರಡು ಕೋಟಿ ಅರವತ್ತಾರು ಲಕ್ಷ ರೂಪಾಯಿಗಳಷ್ಟು ಹಣ ಭೂ ಕಂದಾಯದ ಬಾಬಿಗೆ ಬೇಕೆಂದು ಇಟ್ಟಿರುವ ಬೇಡಿಕೆಯನ್ನು ವಿರೋಧ ಮಾಡುತ್ತಾ ಕೆಲವು ಸೂಚನೆಗಳನ್ನು ಕೊಡಬಯಸುತ್ತೇನೆ.

ಸ್ವಾಮಿ, ಭೂ ಕಂದಾಯವನ್ನು ರದ್ದು ಮಾಡಬೇಕೆಂದು ನಮ್ಮ ರಾಜ್ಯದಲ್ಲಿರುವ ಶೇಕಡ 72 ಜನರ ಅಭಿಪ್ರಾಯವೂ ಆಗಿದೆ. ಇದು ಈಗಿನ ಪ್ರಶ್ನೆಯೇನಲ್ಲ. ಇದು ಬಹಳ ಅನಾದಿ ಕಾಲದಿಂದಲೂ ಬರುತ್ತಿರುವ ವಿಷಯ. ಭೂಮಿಯ ಮೇಲಿರುವ ತೆರಿಗೆಯನ್ನು ತೆಗೆದು ಹಾಕಬೇಕೆಂದು ಕಾಂಗ್ರೆಸ್ಸು ತನ್ನ ಮೆಮೊರ್ಯಾಂಡಮ್ಮನ್ನು 1942ರಲ್ಲಿ ನಡೆದ ಕರಾಚಿ ಅಧಿವೇಶನದಲ್ಲಿ ಶ್ರೀ ಜವಹರಲಾಲ್ ನೆಹರೂರವರು ತಂದಿದ್ದರು ಮತ್ತು ಆಗ ಇದರ ಬಗ್ಗೆ ತೀರ್ಮಾನವನ್ನೂ ತೆಗೆದುಕೊಂಡಿದ್ದಾರೆ. ಆಗಿದ್ದ ಕಾಂಗ್ರೆಸ್ಸು ಅಧಿವೇಶನದ ರಿಕಾರ್ಡುಗಳನ್ನು ತೆಗೆಸಿ ನೋಡಿದರೆ ಈ ಭೂ ಕಂದಾಯವನ್ನು ರದ್ದು ಮಾಡಬೇಕೆಂದು ಇದರೊಡನೆ ಕೊರತೆ ಬೀಳುವ ದುಡ್ಡನ್ನು ತೆರಿಗೆ ಮೂಲಕ ಬೇರೆ ರೈತರಿಂದ ಅವರ ಉತ್ಪತ್ತಿಯ ಮೇಲೆ ತೆಗೆಯಬೇಕು ಎಂದು ಇತ್ತು. ಈ ಭೂ ಕಂದಾಯವನ್ನು ಕೈಬಿಟ್ಟು ಬೇರೆ ಒಂದು ರೀತಿಯ ತೆರಿಗೆಯನ್ನು ಹಾಕಬೇಕೆಂದು ಹಿಂದೆ ಇದ್ದ ದಿವಂಗತ ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಒಂದು ಕಾಲದಲ್ಲಿ ಎಂದರೆ, ಚೀನಾದಿಂದ ಧಾಳಿ ನಡೆದಾಗ ಪಾಕಿಸ್ತಾನದ ಧಾಳಿ ನಡೆದಾಗ ಒಂದು ಸಂದರ್ಭದಲ್ಲಿ ಹೇಳುತ್ತಾ ಅವರು 'ಜೈ ಜವಾನ್', ಜೈ ಕಿಸಾನ್'' ಎಂದು ಹೇಳಿದ್ದರು. ಕಿಸೆ ಎಂದರೆ ಜೇಬು ಎಂದರ್ಥ. ಈಗ ರೈತರಿಗೆ ಎಲ್ಲ ಬರೀ ಜೇಬೇ ಆಗಿದೆ. ಅವನಿಗೆ ಕೊಡಲಿಕ್ಕೆ ಹಣವಿಲ್ಲ. ಮೈತುಂಬಾ ಹೊದೆಯಲಿಕ್ಕೆ ಬಟ್ಟೆ ಇಲ್ಲ. ಇಂದಿನ ದಿವಸ ರೈತರು ಯಾವ ಪರಿಸ್ಥಿತಿಯಲ್ಲಿ ಇದ್ದಾರೆ ಮತ್ತು ಯಾವ ರೀತಿಯಿಂದ ಹೇಂಡಿಕೊಂಡು ಹೋಗುತ್ತಿದ್ದಾರೆ ಎನ್ನುವುದನ್ನು ನೋಡುವುದಕ್ಕೆ ಬಹಳ ವ್ಯಥೆಯಾಗುತ್ತದೆ. ಇಂತಹ ಒಂದು ದುಸ್ಥಿತಿಯನ್ನು ನಾವು ದಿನ ನಿತ್ಯ ನೋಡುತ್ತಿದ್ದೇವೆ. ಇಂದು ಅಪ್ರತ್ಯಕ್ಷವಾಗಿ ಇರುವಂಥಾ ತೆರಿಗೆಗಳಿಂದ ರೈತನ ಕಣ್ಣುಗಳಲ್ಲಿ ರಕ್ತ ಹರಿಯುತ್ತಿದೆ. ಇಂತಹ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳುತ್ತೇನೆ. ಈಗ್ಗೆ 2—3 ತಿಂಗಳ ಹಿಂದೆ ನಮ್ಮ ಮೈಸೂರು ಸರ್ಕಾರದ ಮಾನ್ಯ ಮಂತ್ರಿಗಳು ಚುನಾವಣಾ ಪ್ರವಾಸ ಹೋದಾಗ್ಗೆ ಜನಗಳಿಗೆ ಭೂ ಕಂದಾಯವನ್ನು ರದ್ದು ಮಾಡುತ್ತೇವೆ ಎಂದು ಕ್ಯಾಬಿನೆಟ್ ಸಭೆಯಲ್ಲಿ ಇಟ್ಟು ವಿಚಾರ ಮಾಡಿದ್ದೇವೆ, ಚುನಾವಣೆಯ ಮುಂಚಿತವಾಗಿ ಈ ಭೂ ಕಂದಾಯವನ್ನು ತೀವ್ರಗತಿಯಲ್ಲಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾ ಬಂದಿದ್ದರು. ಅದು ಇಷ್ಟರವರೆಗೂ ಆಶ್ವಾಸನೆಯಾಗಿಯೇ ಉಳಿದಿದೆ. ಈಗ ಏನು ಅನುಮಾನವಾಗಿದೆ ಎಂದರೆ, ನಿನ್ನೆ ಬಡ್ಜೆಟ್ ಸಮಯದಲ್ಲಿ ಉತ್ತರ ಕೊಡುತ್ತಾ ನಮ್ಮ ಆರ್ಥಿಕ ಮಂತ್ರಿಗಳು ಈ ಭೂ ಕಂದಾಯವನ್ನು ಬದಲಾವಣೆ ಮಾಡುವ ದಾರಿಯಲ್ಲಿ ಇದು ಅನುಮಾನಾಸ್ಪದವಾದ ಪ್ರಶ್ನೆಯಾಗಿದೆ. ಒಂದೇ ನಾಣ್ಯ ಇನ್ನೊಂದು ಮುಖ ಹಚ್ಚಿಕೊಂಡಿದೆ. ಈ ಭೂ ಕಂದಾಯವನ್ನು ರದ್ದು ಮಾಡಿ ಅದರ ಬದಲು ಅಗ್ರಿಕಲ್‌ಚರ್ ಇನ್‌ಕಂಟ್ಯಾಕ್ಸ್ ಅಂತಹ ಒಂದು ತೆರಿಗೆಯನ್ನು ರೈತರ ಮೇಲೆ ಹೊರಿಸುತ್ತಾರೆ ಅನ್ನುವ ಭಯ ಆಗಿದೆ. ಆದುದರಿಂದ ಈ ಶಾಸನಸಭೆ ಮುಗಿಯುವುದರೊಳಗಾಗಿ ಇದಕ್ಕೆ ಉತ್ತರ ಕೊಟ್ಟು ಸ್ಪಷ್ಟೀಕರಿಸಬೇಕು. ಸಂಪೂರ್ಣವಾಗಿ ಇದನ್ನು ಕೈಬಿಡುತ್ತಾರೆಯೇ ಅಥವಾ ಇಂತಿಷ್ಟು ಭೂ ಕಂದಾಯವನ್ನು ಹಾಕುತ್ತಾರೆಯೇ ಎಂಬುದನ್ನು ಖಚಿತವಾಗಿ ತಿಳಿಸಬೇಕು. ಇಲ್ಲದಿದ್ದಲ್ಲಿ ರೈತರಲ್ಲಿ ಅನಿಶ್ಚಿತ ಭಾವನೆ ಬರುತ್ತದೆ.

ಭೂ ಸುಧಾರಣೆ ವಿಷಯವಾಗಿ ನನ್ನ ಅನೇಕ ಮಿತ್ರರು ಹೇಳಿದರು. ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ ಭೂ ಮಾಲೀಕನ ಕೊರಳಿಗೆ, ರೈತನ ಕಾಲಿಗೆ ಸಂಕೋಲೆ ಬಿಗಿದಂತಾಗಿದೆ. ಈ ಭೂ ಸುಧಾರಣೆ ಕಾನೂನು ಭೂ ಮಾಲೀಕನ ಮತ್ತು ವಕೀಲರ ಮನೆಗೆ ಮತ್ತು ಕೋರ್ಟಿಗೆ ಜಗಳ ಕಟ್ಟಿಕೊಂಡು ಅಲೆಯುವ ಕಾಲ ಬಂದಿದೆ. ಇಷ್ಟು ಮಾತ್ರ ಆಗಿದೆ. ವಕೀಲರಿಗಾಗಲೀ, ಧನಿಗಾಗಲೀ ಇದರಿಂದ ಯಾವ ತರಹ ಪ್ರಯೋಜನವೂ ಕಾಣುವುದಿಲ್ಲ. ಇದರಲ್ಲಿ ಇಂತಿಷ್ಟು ಸಮಯದಲ್ಲಿ ನಿರ್ದಿಷ್ಟ

ವಾಗಿ ರೈತನಿಗೆ ಇಷ್ಟು ಭೂಮಿ ಸಿಕ್ಕುತ್ತದೆ, ಇಲ್ಲವೇ ಭೂ ಮಾಲೀಕನಿಗೆ ಇಷ್ಟು ಸಿಕ್ಕುತ್ತದೆ ಎಂದು ಹೇಳಬೇಕು. ಇದಕ್ಕೆ ಕಾನೂನು ಪ್ರಯೋಜನ ಇಲ್ಲವೆಂದು ತಿಳಿದ ವಕೀಲರು ಹೇಳಿದ್ದಾರೆ. ಕಾನೂನು ಪ್ರಕಾರ ರೈತರನ್ನು ಹೊಡೆದು ಓಡಿಸುವುದಕ್ಕೆ ಇದರಲ್ಲಿ ಲೋಪ ಇದೆ. ಇದನ್ನು ಇತ್ಯರ್ಥ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ ದೋಷ ಇದೆಯೆಂದು ತಿಳಿದವರು ಹೇಳಿರುವುದರಿಂದ ತಾವು ದಯಮಾಡಿ ಶಾಸನಸಭೆಯ ಮುಂದೆ ತಂದು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಬಗೆಹರಿಸಬೇಕು ಇದರ ವಿಚಾರವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿಯನ್ನು ನಮ್ಮ ಮಿತ್ರರಾದ ಶ್ರೀಮಾನ್ ಬೋಳ ರಘುರಾಮಶೆಟ್ಟರು ಹೇಳಿದ್ದಾರೆ. ಕೆಲವು ಸಮಯದ ಹಿಂದೆ ಇಡೀ ಲೆಕ್ಕಾಚಾರವನು. ತೆಗೆದು ನೋಡಿದರೆ, ಗೇಣೀದಾರರ ಲೆಕ್ಕಾಚಾರ ಇಲ್ಲದೇ ಇರುವುದು ನಮ್ಮ ಮೈಸೂರು ರಾಜ್ಯ ಒಂದೇ ಎಂದು ಹೇಳಿದರು. ಇಲ್ಲಿ ಎಷ್ಟು ಗೇಣಿದಾರರು ಇದ್ದಾರೆ, ಎಷ್ಟು ಭೂಮಾಲೀಕರು ಇದ್ದಾರೈ ಭೂಮಾಲೀಕರಿಗೆ, ಗೇಣಿದಾರರಿಗೆ ಎಷ್ಟೆಷ್ಟು ಜಮೀನು ಇದೆ, ಯಾವ ರೀತಿ ಹೆಚ್ಚಿಗೆ ಆಗಿದೆ, ಯಾವ, ರೀತಿ ಹಂಚಿಕೆ ಆಗಬೇಕು, ಈ ವಿಚಾರದಲ್ಲಿ ಯಾವುದೂ ನಿರ್ದಿಷ್ಟವಾಗಿ ಗೊತ್ತಿಲ್ಲ. ಇದರಿಂದ ವಕ್ಕಲ ಗನಿಗಾಗಲಿ, ಧನಿಗಾಗಲಿ, ಯಾರಿಗೂ ಪ್ರಯೋಜನವಾಗುವುದಿಲ್ಲ, ಇದು ನಮ್ಮ ಜಿಲ್ಲೆಯ ಪರಿಸ್ಥಿತಿ. ಇದನ್ನು ಮಾನ್ಯಮಂತ್ರಿಗಳ ತಿಳುವಳಿಕೆಗೆ ತರಬಯಸುತ್ತೇನೆ.

ಇನ್ನು ಭೂಕಂದಾಯ ವಸೂಲು ಮಾಡುವ ವಿಚಾರದಲ್ಲಿ ಅವರು ಮಲತಾಯಿ ಧೋರಣೆ ತೋರಿಸುತ್ತಾ ಇದ್ದಾರೆ. ಇದರಿಂದ ನನಗೆ ವ್ಯಥೆಯಾಗಿದೆ. ಹೋದ ಅಸೆಂಬ್ಲಿಯಲ್ಲಿ ನಾನು ಒಂದು ಪ್ರಶ್ನೆಯನ್ನು ಕೇಳಿದಾಗ ನನಗೆ ಉತ್ತರವೂ ಸಿಕ್ಕಿದೆ. ಕಳೆದ ಮೂರು ವರ್ಷದ ಮೈಸೂರು ರಾಜ್ಯದ ಭೂಕಂದಾಯ 5 ಕೋಟಿ 7 ಲಕ್ಷ 94 ಸಾವಿರ 419 ರೂಪಾಯಿ. ಕಳೆದ 3 ವರ್ಷದಲ್ಲಿ ಇದನ್ನು ಲೆಕ್ಕದಿಂದ ತೆಗೆದುಹಾಕಿದ್ದೀರಿ. ಈ ಭೂಕಂದಾಯದ ಲೆಕ್ಕ ತೆಗೆದು ನೋಡಿದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ 89 ಲಕ್ಷ 67 ಸಾವಿರ 720 ರೂಪಾಯಿ ಬಂದಿದೆ. 20 ಜಿಲ್ಲೆಗಳಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮಾತ್ರ ಭೂಕಂದಾಯವನ್ನು ಕೊಟ್ಟಿದೆ. ನಮ್ಮ ಮಾನ್ಯ ಕಾಂಗ್ರೆಸ್ ಮಿತ್ರರು ಚುನಾವಣಾ ಸಂದರ್ಭದಲ್ಲಿ ಕರಪತ್ರಗಳನ್ನು ಹಂಚಿದರು. ನಮ್ಮ ಮೈಸೂರು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಈ ಜಿಲ್ಲೆಯಲ್ಲಿ ಭೂಕಂದಾಯವನ್ನು ರದ್ದು ಮಾಡುತ್ತೇವೆ ಕಾಂಗ್ರೆಸ್ಸಿಗೆ ಓಟು ಕೊಡಿ ಎಂದು ಹೇಳಿದರು. ಹಿಂದಿನ ಮಾನ್ಯ ಸಭೆಯ ಸದಸ್ಯರು ಪಾರ್ಲಿಮೆಂಟಿಗೆ ಹೋಗಬೇಕೆಂದು ಹೀಗೆ ಹೋದಾಗ ಅವರೂ ಹೇಳಿದರು. ಆ ಕರಪತ್ರಗಳನ್ನು ತೋರಿಸುತ್ತೇನೆ. ಅಂತಹ ಒಬ್ಬ ಸದಸ್ಯರನ್ನು ಹಿಡಿದುಕೊಂಡು ಭೂಕಂದಾಯವನ್ನು ರದ್ದು ಮಾಡುತ್ತೇವೆ ಎಂದು ನೀವು ಆಶ್ವಾಸನೆ ಕೊಟ್ಟಿದ್ದೀರಿ. ಆ ಆಶ್ವಾಸನೆಯ ಪ್ರಕಾರ ಕೂಡಲೇ ರದ್ದು ಮಾಡುವುದಕ್ಕೆ ಒಂದು ಪ್ರಯತ್ನವನ್ನು ಮಾಡಬೇಕು ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಕಂದಾಯ ಕೊಡಬೇಕೆಂದು ಹೇಳಿ ಸರ್ಕಾರಿ ಅಧಿಕಾರಿಗಳು ಸಣ್ಣಪುಟ್ಟ ರೈತರ ಮನೆಗಳಿಗೆ ಹೋಗಿ ಕಿರುಕುಳ ಕೊಡುತ್ತಿದ್ದಾರೆ. ಅಂತಹ ಕಿರುಕುಳವನ್ನು ತಪ್ಪಿಸಬೇಕು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜನ ಹಿಂದಿನಿಂದಲೂ ಪರಂಪರೆಯಾಗಿ ಕಂದಾಯವನ್ನು ಸರಿಯಾಗಿ ಕೊಟ್ಟುಕೊಂಡು ಬಂದಿದ್ದಾರೆ. ಹಿಂದೆ ನಾವು ಮದ್ರಾಸ್ ರಾಜ್ಯದಲ್ಲಿದ್ದಾಗಲೂ ಭೂಕಂದಾಯವನ್ನು ತಪ್ಪದೇ ಕೊಟ್ಟುಕೊಂಡು ಬಂದಿದ್ದೇವೆ. ಆದುದರಿಂದ ನಮ್ಮ ಜಿಲ್ಲೆಯ ಜನರನ್ನು ಈ ರೀತಿ ಹಿಂಸೆ ಮಾಡಬಾರದು, ಅವರ ಬಗೆಗೆ ಮಲತಾಯಿ ಧೋರಣೆ ತೋರಿಸಬಾರದು. ಶಾಸನಸಭೆ ಈ ಭೂಕಂದಾಯವನ್ನು ರದ್ದು ಮಾಡಬೇಕು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಹೇಳಿದರು. ಮಾನವರಿಗೆ ಸಂಬಂಧಪಟ್ಟ ವಿಷಯವಾಗಿ ಮಾತನಾಡಿದರು. ಭೂಕಂದಾಯದ ವಿಷಯ ಮತ್ತು ಅರಣ್ಯದ ವಿಷಯವಾಗಿಯೂ ಕೂಡ ಹೇಳಿದರು. ಇವಲ್ಲದೆ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗೆ ದೇವರ ವಿಷಯ ಹೇಳುವುದಾದರೆ, ದೇವರ ಒಂದು ಡಿಪಾರ್ಟ್‌ಮೆಂಟ್ ನಮ್ಮಲ್ಲಿ ಇದೆ. ಅದನ್ನು ಮುಜರಾಯಿ ಮತ್ತು ರಿಲಿಜಿಯಸ್ ಎಂಡೋಮೆಂಟ್ ಡಿಪಾರ್ಟ್‌ಮೆಂಟ್ ಎಂದು ಹೇಳುತ್ತಾರೆ. ನಮ್ಮ ಸರ್ಕಾರದವರು ದೇವರನ್ನೂ ಬಿಟ್ಟಿಲ್ಲ, ದೇವರನ್ನೂ ಕೂಡ ರಾಜಕೀಯಕ್ಕೆ ಎಳೆದು ತಂದಿದ್ದಾರೆ. ಮೈಸೂರು ಸರ್ಕಾರದ ಮುಜರಾಯಿ ಇಲಾಖೆ ಎಂದು ಏನು ಇದೆ, ಆ ದೇವರ ಇಲಾಖೆ, ಅದು ಸಂಪೂರ್ಣವಾಗಿ ನಡೆಯುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಮಾತ್ರ ಈ ದೇವರ ಇಲಾಖೆ ನಡೆಯುತ್ತಾ ಇದೆ. ಇದರ ಅಂಕಿ ಅಂಶ ಕೊಟ್ಟು ಹೇಳುತ್ತೇನೆ. ಇದರಿಂದ ಸರ್ಕಾರಕ್ಕೆ 4 ಲಕ್ಷ ರೂಪಾಯಿಗಳ ಉತ್ಪತ್ತಿ ಇದೆ. ಇದರಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೊಂದರಲ್ಲೇ 3 ಲಕ್ಷ ರೂಪಾಯಿ ಉತ್ಪತ್ತಿ ಬರುತ್ತದೆ. ಇನ್ನು ಒಂದು ಲಕ್ಷ ರೂಪಾಯಿ ಇತರ ದೇವಸ್ಥಾನಗಳಿಂದ ಬರುತ್ತಿದೆ. ಈ 3 ಲಕ್ಷ ರೂಪಾಯಿ ನಮ್ಮ ಜಿಲ್ಲೆಯಿಂದ ಬರದೇ ಇದ್ದಿದ್ದರೆ ಈ ಇಲಾಖೆಯನ್ನು ಇಷ್ಟರವರೆಗೆ ಮುಚ್ಚಬೇಕಾಗಿತ್ತು. ದೇವರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ದೇವರಿಂದ ಸಂಪಾದನೆಯಾಗುತ್ತಾ ಇದೆ. ಹಳೆಯ ಮೈಸೂರಿನಲ್ಲಿ ಇರುವ ಇನ್ನು ಇತರ ದೇವರುಗಳು

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಸಂಪಾದನೆ ಮಾಡಿ ಕೊಡುವುದಿಲ್ಲ. ಇದರಲ್ಲೂ ನೀವು ದೊಡ್ಡ ದೇವರನ್ನು ಬಿಟ್ಟಿದ್ದೀರಿ. ಧರ್ಮಸ್ಥಳದ ಧರ್ಮದರ್ಶಿಗಳ ಕೊರಳಿಗೆ ಜೋಡೆತ್ತಿನ ಚಿತ್ರವನ್ನು ಕಟ್ಟಿ ರಾಜಕೀಯಕ್ಕೆ ಇಳಿಸಿ ಅಧರ್ಮಕ್ಕೆ ಕೈಹಾಕಿದ್ದೀರಿ. ಇನ್ನು ಕಾವಿ ಬಟ್ಟೆಗಳನ್ನು ಹಾಕಿದಂತಹವರು ಯಾರು ಯಾರು ಸ್ವಾಮಿಗಳು ಇದ್ದಾರೋ ಅಂತಹವರನ್ನು ಪರಿವರ್ತನೆ ಮಾಡುತ್ತಾ ಇದ್ದೀರಿ. ಅಂತಹವರು 50 ಜನ ನನ್ನ ಕ್ಷೇತ್ರದಲ್ಲಿ ಪ್ರಸಾದ ತೀರ್ಥ ಇಟ್ಟುಕೊಂಡು ಓಟು ಕೊಡಿ ಎಂದು ಬೇಡುವ ದುಸ್ಥಿತಿಗೆ ಅವರನ್ನು ಇಳಿಸಿದ್ದೀರಿ. ಅವರು ದೇವರ ಹೆಸರಿನಲ್ಲಿ ಅಧರ್ಮಕ್ಕೆ ಕೈ ಹಚ್ಚಿದ್ದಾರೆ ಮತ್ತು ಅಧರ್ಮಿಗಳಾಗಿದ್ದಾರೆ.

ಧರ್ಮಸ್ಥಳದಲ್ಲಿ ನೀವು ಏನು ಮಾಡಿದ್ದೀರಿ ಅಂತ ನೋಡಿ. ಧರ್ಮಸ್ಥಳದಲ್ಲಿ 67 ಲಕ್ಷ ರೂಪಾಯಿ ವರ್ಷಕ್ಕೆ ಉತ್ಪನ್ನ ಇದೆ. ಇದರ ಮೇಲೆ ನಿಮ್ಮ ಹಿಡಿತ ಏನಿದೆ? ಒಂದು ಪೈ ಕೂಡ ಆ ದೇವಸ್ಥಾನಕ್ಕೆ ಸಿಕ್ಕುವುದಿಲ್ಲ. ಧರ್ಮಸ್ಥಳದ ದುಡ್ಡು ಭಕ್ತಾದಿಗಳು ತಂದು ಹಾಕಿದ ದುಡ್ಡು.

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಕಂದಾಯ ಶಾಖೆಗಳ ಮಂತ್ರಿಗಳು).—ಆ ದೇವಸ್ಥಾನಕ್ಕೆ ಸಂಬಂಧಪಟ್ಟ ಹಾಗೆ ಹೈಕೋರ್ಟಿನಲ್ಲಿ ಒಂದು ವ್ಯಾಜ್ಯ ಇದೆ.

ಶ್ರೀ ವಿಠಲದಾಸ್ ಶೆಟ್ಟಿ.—ಧರ್ಮದರ್ಶಿಗಳು ಚುನಾವಣೆಗೆ ನಿಲ್ಲಬಾರದು ಅಲ್ಲವೇ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ನಿಲ್ಲಬಾರದು, ಅವರು ಧರ್ಮವನ್ನು ಕಾಪಾಡುವವರು.

ಶ್ರೀ ಎಂ. ಶ್ರೀನಿವಾಸ ನಾಯಕ್.—ಧರ್ಮಸ್ಥಳ ಕ್ಷೇತ್ರ ಮುಜರಾಯ್ ಎಂಡೋಮೆಂಟ್ ಒಳಗೆ ಒಳಪಡಿಸಬೇಕೇ ಬೇಡವೇ ಎಂಬುದು ಕೋರ್ಟಿನಲ್ಲಿ ತೀರ್ಮಾನವಾಗಿಲ್ಲ. ಆದ್ದರಿಂದ ಅದು ಸಬ್‌ಜ್ಯುಡೀಸ್ ಆಗುತ್ತದೆ. ಆ ವಿಷಯವನ್ನು ಎತ್ತಬಾರದು ಎಂದು ಹೇಳುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯಮಿತ್ರರು ಅದು ಸಬ್‌ಜ್ಯೂಡೀಸ್ ಆಗುತ್ತದೆ ಎಂದು ಹೇಳುವುದರಿಂದ ನಾನು ಆ ವಿಷಯಕ್ಕೆ ಕೈ ಹಾಕುವುದಿಲ್ಲ. ಆದರೆ ಇದರಲ್ಲೂ ಕೂಡ ಒಂದು ತಪ್ಪು ಮಾಡಿದ್ದಾರೆ. ಯಾರು ಪ್ರತಿವಾದಿ ಇದ್ದಾರೋ ಅವರ ಕೊರಳಿಗೆ ಜೋಡೆತ್ತನ್ನು ಕಟ್ಟಿದ್ದಾರೆ. ಸರ್ಕಾರದ ವಿರುದ್ಧವಾಗಿ ಪ್ರತಿವಾದಿ ಇದ್ದಾರೆ ಆದ್ದರಿಂದ ಸರಿಯಾದ ಕಾಗದ ಪತ್ರಗಳು, ದಾಖಲೆಗಳನ್ನು ಕೊಡುವುದಿಲ್ಲ, ಇದು ಕೇವಲ ಜನರ ಕಣ್ಣಿಗೆ ಮಣ್ಣು ಎರಚಲಿಕ್ಕೆ ದಾವೆ ಮಾಡಿದ್ದಾರೆ ಎಂದು ಇಲ್ಲೂ ಕೂಡ ಸ್ಪಷ್ಟವಾಗುತ್ತದೆ. ಅವರು ತಮ್ಮ ಚುನಾವಣಾ ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಧರ್ಮದರ್ಶಿಗಳ ಪರವಾಗಿ, ಧಾರ್ಮಿಕ ಸಂಸ್ಥೆಗಳ ಪರವಾಗಿ......

ಶ್ರೀ ಬಿ. ರಾಚಯ್ಯ.—ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಸರ್ಕಾರಕ್ಕೆ ಒಳಪಡತಕ್ಕದ್ದು ಎಂದು ತೀರ್ಮಾನವಾಗಿದೆ, ಅಲ್ಲಿ ದಾಖಲೆ ಕೊಟ್ಟವರು ಸರ್ಕಾರಿ ಅಧಿಕಾರಿಗಳೇ, ಅವರೇ ಇಲ್ಲೂ ಕೊಡುತ್ತಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಅದು ಕೋರ್ಟಿನಲ್ಲಿರುವುದರಿಂದ ಅದನ್ನು ಅಲ್ಲಿಗೇ ಬಿಡುತ್ತೇನೆ. ಇನ್ನು ಇತರ ದೇವರುಗಳು. ಈ ವಿಷಯ ಈಗಾಗಲೇ ಹೇಳಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವುಗಳಿಂದ ಮೂರು ಲಕ್ಷ ರೂಪಾಯಿ ಬರುತ್ತದೆ. ತಮ್ಮ ಡಿಪಾರ್ಟ್‌ಮೆಂಟಿನ ಹಿಡಿತ ಇನ್ನೂ ಹೆಚ್ಚಾಗಿ ಇದ್ದಿದ್ದಲ್ಲಿ ಇನ್ನೂ ಹೆಚ್ಚಿನ ವರಮಾನ ತೆಗೆದುಕೊಳ್ಳಬಹುದು. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಹೋದ ಅಸೆಂಬ್ಲಿಯಲ್ಲೂ ಕೂಡ ಇದನ್ನು ಹೇಳುತ್ತಾ ಬಂದಿದ್ದೇನೆ. ನನ್ನ ಸ್ನೇಹಿತರು ತಮಾಷೆ ಮಾಡುತ್ತಾ ಇದ್ದರು. ನನ್ನ ಕ್ಷೇತ್ರದಲ್ಲಿ ನಾನು ಇರುವ ಸ್ಥಳದಲ್ಲಿ ಮೂರು ದೇವರುಗಳು ಇವೆ. ಮೂರು ಮಾರಮ್ಮಗಳು ಇದ್ದಾರೆ. ಈ ಮೂರು ಮಾರಮ್ಮನ ಗುಡಿಗಳಲ್ಲಿ ಸಾಧಾರಣ ಒಂದು ವಾರಕ್ಕೆ ಆರು ಸಾವಿರ ರೂಪಾಯಿಗೆ ಕಮ್ಮಿ ಇಲ್ಲದಷ್ಟು ಉತ್ಪನ್ನ ಬರುತ್ತಾ ಇದೆ. ಇದಕ್ಕೆ ಲೆಕ್ಕಾಚಾರ ಇಲ್ಲ. ಒಂದು ತಟ್ಟೆ ಮೇಲೆ ಹಣವನ್ನು ಹಾಕಿ ಭಕ್ತಾದಿಗಳು ಪ್ರಸಾದವನ್ನು ತೆಗೆದುಕೊಳ್ಳುತ್ತಾ ಇದ್ದಾರೆ, ಅದಕ್ಕೆ ಕೊಡಬೇಕಾದ ರಶೀದಿ ಕೊಡುವುದಿಲ್ಲ ಎಂದು ಸರ್ಕಾರದವರ ಹತ್ತಿರ ಹೇಳಿಕೊಂಡು ಹೇಳಿಕೊಂಡು ಸಾಕಾಯಿತು, ತುಂಬಾ ದಿವಸದಿಂದ ಹೇಳುತ್ತಾ ಬಂದಿದ್ದೇನೆ. ಆದರೂ ಇದರ ಮೇಲೆ ಯಾವ ಹಿಡಿತವನ್ನೂ ಹೇರದೆ ಹೋಗಿದ್ದಾರೆ. ಆದ್ದರಿಂದ ಈ ಮಾರಮ್ಮನ ವಿಷಯದಲ್ಲಿ ಹೊಸದಾಗಿ ಬಂದಿರುವ ಮಾನ್ಯ ಕಂದಾಯ ಮಂತ್ರಿಗಳು ಸ್ವಲ್ಪ ನಿಗಾ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ.

ಶ್ರೀ ವಿಠಲದಾಸ ಶೆಟ್ಟಿ (ಪುತ್ತೂರು).—ಮಾರಮ್ಮನ ಗುಡಿಯ ಧರ್ಮದರ್ಶಿಗಳು ತಮಗೆ ಬಹಳ ಸಹಾಯ ಮಾಡಿದ್ದಾರೆ ಅಲ್ಲವೇ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ತಮ್ಮ ಕಾಂಗ್ರೆಸ್ ಬುದ್ಧಿಯನ್ನು ಇಲ್ಲೂ ತೋರಿಸುತ್ತೀರಲ್ಲಾ! ಕಾಂಗ್ರೆಸ್‌ನವರಿಗೆ ಯಾರು ಸಹಾಯ ಮಾಡುತ್ತಾರೋ ಅವರಿಗೆ ಸಹಾಯ ಮಾಡಬೇಕು ಅಂತ ನೀವು

ಯಾವ ರೀತಿ ಅಂದುಕೊಂಡಿದ್ದೀರೋ ಅದನ್ನು ಜನತೆಗೆ ಮತ್ತು ಮಾನ್ಯ ಸದಸ್ಯರಿಗೆ ಗೊತ್ತಾಗುವಂತೆ ಹೇಳುತ್ತಾ ಇದ್ದೀರಿ. ಅಂತಹ ದೃಷ್ಟಿ ನಮ್ಮಲ್ಲಿ ಏನೂ ಇಲ್ಲ. ಇನ್ನೂ ಹೆಸರುವಾಸಿಯಾದ ಎರಡು ಮೂರು ದೇವಸ್ಥಾನಗಳು ಇವೆ, ಅವುಗಳನ್ನು ಜೀರ್ಣೋದ್ಧಾರ ಮಾಡಬಹುದು, ಹೇಗೆಂದರೆ ಅದಕ್ಕೆ ಬೇಕಾದ ರಸ್ತೆಗಳನ್ನು ಮಾಡುವುದು ಮತ್ತು ಅವನ್ನು ಟೂರಿಸ್ಟ್ ಸೆಂಟರನ್ನಾಗಿ ಮಾಡಿ ಅಲ್ಲಿ ಸತ್ರಗಳನ್ನು ಕಟ್ಟಿಸಿ ಪ್ರವಾಸಿಗಳು ಇಳಿದುಕೊಳ್ಳುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಬಹುದು. ಇದರಿಂದಾಗಿ ಅಲ್ಲಿಯ ಉತ್ಪನ್ನ ಹೆಚ್ಚಾಗಲಿಕ್ಕೆ ಸಾಧ್ಯವಿದೆ. ಇದೂ ಅಲ್ಲದೆ ವರ್ಷಾವಧಿ ಗ್ರಾಂಟನ್ನು ಕೊಡುವಾಗ ಇದರಲ್ಲೂ ಕೂಡ ಮಲತಾಯಿ ಧೋರಣೆಯನ್ನು ತೋರಿಸುತ್ತಾ ಇದ್ದೀರಿ. ಹೋದ ವರ್ಷ ಒಂದು ಲಕ್ಷ ರೂಪಾಯಿ ಗ್ರಾಂಟಿನಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ದೇವರಿಗೆ 15 ಸಾವಿರ ರೂಪಾಯಿ ಮಾತ್ರ ಬಂದಿದೆ. ಸಂಪಾದನೆ ಮಾಡಿಕೊಡುವ ದೇವರ ವಿಷಯದಲ್ಲಿ ಹೀಗೆ ತಾರತಮ್ಯ ತೋರಿಸಿದರೆ ನಿಮಗೆ ದೇವರು ಒಳ್ಳೆಯದು ಮಾಡಲಿಕ್ಕೆ ಇಲ್ಲ. ಆದ್ದರಿಂದ ಇನ್ನು ಮುಂದಾದರೂ ಈ ದೇವರ ವಿಷಯದಲ್ಲಿ ರಾಜಕೀಯ ಬೇಡ ಎಂದು ಹೇಳಿ ಇಷ್ಟು ಅವಕಾಶ ಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಸಂಗನಗೌಡ (ಲಿಂಗಸುಗೂರು).—ಸನ್‌ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಮಂಡಿಸಿದ ಈ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಕೆಲವೊಂದು ಸೂಚನೆಗಳನ್ನು ಕೊಡಬಯಸುತ್ತೇನೆ. ಈಗಾಗಲೇ ಅನೇಕ ವಿರೋಧ ಪಕ್ಷದ ಸದಸ್ಯರು ಮತ್ತು ಟ್ರೆಜರಿ ಬೆಂಚಿನ ಅನೇಕ ಸದಸ್ಯರು ಹಲವಾರು ವಿಷಯಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಏನೇ ಇರಲಿ ಮಾತು ಕೊಟ್ಟ ಮೇಲೆ ಹೋಯಿತು, ಮುತ್ತು ಒಡೆದ ಮೇಲೆ ಹೋಯಿತು ಅಂತ ಹೇಳಿ ಗಾದೆಯ ಮಾತು ಇದೆ. ಸರ್ಕಾರ ಆ ಧಾಟಿಯಲ್ಲಿ ಹೆಜ್ಜೆ ಇಟ್ಟಿದ್ದಾರೆ. ಚುನಾವಣೆಗೆ ಮುನ್ನ ಮತ್ತು ಚುನಾವಣೆಗೆ ನಂತರ ಲ್ಯಾಂಡ್ ರೆವಿನ್ಯೂ ಅಥವಾ ಕಂದಾಯವನ್ನು ರದ್ದು ಮಾಡುವ ಬಗ್ಗೆ ಅದನ್ನು ರದ್ದು ಮಾಡುತ್ತೇವೆ ಎಂದು ಹೇಳಿದ್ದರು. ಆದ್ದರಿಂದ ಸರ್ಕಾರ ಆ ಒಂದು ಭಾಷೆ, ಕೊಟ್ಟ ಮಾತು, ವಚನ ಪಾಲಿಸಿದರೆ ರೈತರಿಗೆ ಮತ್ತು ಸನ್‌ಮಾನ್ಯ ಸದಸ್ಯರಿಗೆ ನೆಮ್ಮದಿಯಾಗುವುದು ಅಷ್ಟೇ ಅಲ್ಲ, ರೈತರಿಗೆ ಒಳ್ಳೆಯದಾಗುತ್ತದೆ ಎಂದು ಈ ಪ್ರಸಂಗದಲ್ಲಿ ತಿಳಿಸಬಯಸುತ್ತೇನೆ. ಸರ್ಕಾರದವರು ಹಿಂಜರಿಯಲು ಕಾರಣ ಇಲ್ಲ, ಹೆದರುವ ಅಥವಾ ಅಳುಕುವ ಕಾರಣ ಇಲ್ಲ. ಈಗಾಗಲೇ ತಿಳಿಸಿದಂತೆ ಪಾನನಿರೋಧ ತಿದ್ದುಪಡಿ ಕಾಯಿದೆಯನ್ನು ಸಭೆಯ ಮುಂದೆ ಇಟ್ಟಿದ್ದಾರೆ, ಅದರಿಂದ ಕಂದಾಯವನ್ನು ರದ್ದು ಮಾಡುವುದರಿಂದ ಸರ್ಕಾರಕ್ಕೆ ಆಗಬಹುದಾದಂತಹ ನಷ್ಟ ಅಥವಾ ಬರಬಹುದಾದಂಥ ವರಮಾನ ಕಡಿಮೆ ಆಗುವುದನ್ನು ಗಣ್ಯವಾದ ಪ್ರಮಾಣದಲ್ಲಿ ತುಂಬಿಕೊಳ್ಳ ಬಹುದು ಎಂದು ಸ್ಪಷ್ಟವಾಗಿ ಹೇಳಬಹುದು. ಇದೂ ಅಲ್ಲದೆ ಇನ್ನೂ ಅನೇಕ ನ್ಯಾಯವಾದ ರಿಸೋರ್ಸ್‌ನ್ನು ಕಂಡುಹಿಡಿಯಬಹುದು. ಕಮರ್ಷಿಯಲ್ ಕ್ರಾಪ್ಸ್, ಶೇಂಗಾ, ಹತ್ತಿ, ಅರಳಿ, ಔಡಲ, ಆಯಿಲ್ ಸೀಡ್ಸ್ ಇವುಗಳ ಮಾರುಕಟ್ಟೆಗೆ ಹೋದರೆ ಮಾರ್ಕೆಟ್ ಕಮಿಟಿಯವರು ಸೆಸ್ ಒಂದು ರೂಪಾಯಿಗೆ ಒಂದು ಪರ್ಸೆಂಟ್‌ನಂತೆ ಏರಿಸಿದರೂ ಕೂಡ ಸರ್ವಸಾಧಾರಣ ಜನರಿಗೆ ಅದರಿಂದ ಬಾಧಕವಾಗುವುದಿಲ್ಲ ಮತ್ತು ರೈತರ ಮೇಲೆ ಭಾರ ಆಗಲಿಕ್ಕೆ ಇಲ್ಲ, ಸರ್ಕಾರಕ್ಕೆ ಗಣ್ಯ ಪ್ರಮಾಣದಲ್ಲಿ ವರಮಾನ ಬರಬಹುದು ಎಂದು ಸೂಚನೆ ಮಾಡಬಯಸುತ್ತೇನೆ. ಈ ಪ್ರಸಂಗದಲ್ಲಿ ಇನ್ನು ಎರಡು ಸೂಚನೆಗಳನ್ನು ಕೊಡುವುದೇನೆಂದರೆ, 1965-66 ಮತ್ತು 66-67ನೇ ಸಾಲಿನಲ್ಲಿ ನಮ್ಮ ರಾಜ್ಯ ದಲ್ಲಿ ಅನೇಕ ಭಾಗದಲ್ಲಿ ಮಳೆಯಾಗದೆ ಬೆಳೆ ಸರಿಯಾಗಿ ಬಂದಿಲ್ಲ. ಹಿಂದಿನ ಬಾಕಿ ವಸೂಲು ಮಾಡಲಿಕ್ಕೆ ಶುರು ಮಾಡಿದ್ದಾರೆ. ಅಷ್ಟೇ ಅಲ್ಲ, 67-68ನೇ ಸಾಲಿನ ಸರ್ಚಾರ್ಜ್ ಕೂಡ ವಸೂಲು ಮಾಡುತ್ತಾ ಇದ್ದಾರೆ. ಇದರಿಂದ ರೈತರಿಗೆ ತೊಂದರೆಯಾಗಲಿಕ್ಕೆ ಹತ್ತಿದೆ. ಈ ವಿಷಯವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಬೇಕು. ಈ ವರ್ಷ ಜುಲೈ ತಿಂಗಳು ಆಯಿತು, ಇವತ್ತು 5ನೆಯ ತಾರೀಖು ಇನ್ನೂವರೆಗೂ ಮಳೆ ಆಗಿಲ್ಲ. ರೈತರು ತೊಂದರೆಗೆ ಒಳಗಾಗಿದ್ದಾರೆ ಮತ್ತು ಅನೇಕ ಭಾಗಗಳಲ್ಲಿ ಕ್ಷಾಮಪೀಡಿತ ಪ್ರದೇಶ ಎಂದು ಸಾರತಕ್ಕ ಪ್ರಸಂಗ ಬಂದಿದೆ ಎಂಬುದನ್ನು ಸರ್ಕಾರದ ಗಮನಕ್ಕೆ ಈ ಮೂಲಕ ತರಬಯಸುತ್ತೇನೆ. ಆದುದರಿಂದ 1965-66, 1966-67 ಮತ್ತು 67-68 ರ ಬಾಕಿಯಲ್ಲಿ ಇಲ್ಲಿಯವರೆಗೂ ಎಷ್ಟು ಹಣವನ್ನು ವಸೂಲ್ಮಾಡಿದ್ದಾರೋ ಅಷ್ಟಕ್ಕೇ ಅದನ್ನು ನಿಲ್ಲಿಸುವಂತೆ ಆಜ್ಞೆಮಾಡಿ, ಇದನ್ನು ತಾತ್ಕಾಲಿಕವಾಗಿಯಾದರೂ ತಡೆಹಿಡಿಯುವಂತೆ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಾನು ಇದೇ ಸಂದರ್ಭದಲ್ಲಿ ಮತ್ತೊಂದು ಸೂಚನೆಯನ್ನು ಸರ್ಕಾರಕ್ಕೆ ಮಾಡಬಯಸುತ್ತೇನೆ. ಅದೇನೆಂದರೆ, ಈ ದಿವಸ ಸರ್ಕಾರಿ ಪಡದಲ್ಲಿ ಸಾವಿರಾರು ಎಕರೆ ಜಮೀನು ಬಿದ್ದಿದೆ. ಅದನ್ನು ರೈತರು 10—15—20 ವರ್ಷಗಳ ಕಾಲದಿಂದಲೂ ಬೇಸಾಯ ಮಾಡಿಕೊಂಡು ಬಂದಿದ್ದಾರೆ. ಅವರ ಬಗ್ಗೆ ತಕರಾರು ತಪ್ಪೆಗಳನ್ನಿಡಲಾಗಿದೆ. ಹೀಗೆ ರೈತರಿಂದ ಬಗರ್‌ಹುಕುಂ ಸಾಗುವಳಿ ಮಾಡತಕ್ಕ ಕೇಸುಗಳು ಮತ್ತು ಅವರಿಂದ ದಂಡ ಅಥವಾ ಜುಲ್ಮಾನೆ ವಸೂಲ್ಮಾಡುತ್ತಿರು

(ಶ್ರೀ ಕೆ. ಸಂಗನಗೌಡ)

ವಂಥ ಸಾವಿರಾರು ಕೇಸುಗಳಿವೆ. ಇತ್ತ ಕಡೆಗೆ ಸರ್ಕಾರದವರು ಲಕ್ಷಕೊಟ್ಟು ಅವುಗಳನ್ನೆಲ್ಲಾ ಪರಿಶೀಲನೆ ಮಾಡಿ ಅಂಥಾ ಜಮೀನುಗಳನ್ನು ಆ ಸಾಗುವಳಿ ಮಾಡುತ್ತಿದ್ದ ರೈತರಿಗೇ ಖಾಯಂ ಮಾಡುವುದು ಒಳ್ಳೆಯದೆಂದು ಸೂಚನೆ ಕೊಡಬಯಸುತ್ತೇನೆ.

3-30 P.M.

ಇದೇ ಸಂದರ್ಭದಲ್ಲಿ ಅರಣ್ಯ ಖಾತೆಯ ಬಗ್ಗೆ ಹೇಳುವುದಾದರೆ, ಈ ದಿವಸ ಸಾವಿರಾರು ಎಕರೆಗಳಲ್ಲಿದ್ದ ಮರಗಳನ್ನು ಹಾಳುಮಾಡಿ ಜನರು ಅಲ್ಲಿ ಸಾಗುವಳಿ ಮಾಡುತ್ತಿದ್ದಾರೆಂಬ ವಿಚಾರ ಇದುವರೆಗೂ ಮಾತನಾಡಿದ ಮಾನ್ಯ ಸದಸ್ಯರ ಹೇಳಿಕೆಗಳಿಂದ ತಿಳಿದುಬರುತ್ತದೆ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಹಿಂದೆ ಇದೇ ವಿಚಾರದಲ್ಲಿ ಸರ್ಕಾರದವರು ಒಂದು ಸರ್ಕ್ಯುಲರನ್ನು ಹೊರಡಿಸಿ ಫಾರೆಸ್ಟ್ ಏರಿಯಾದಲ್ಲಿ ಯಾರು ಯಾರು ಅಕ್ರಮದಿಂದ ಸಾಗುವಳಿ ಮಾಡುತ್ತಾ ಬಂದಿದ್ದಾರೋ ಅಂಥವರಿಗೇ ಅವರವರು ಮಾಡುತ್ತಿದ್ದ ಜಮೀನನ್ನು ಖಾತೆ ಮಾಡಿಕೊಡುವುದಾಗಿ ಹೇಳಲಾಗಿತ್ತು. ಹಾಗೆ ಮಾಡಿದರೆ ಜನರೂ ಕೂಡ ನೆಮ್ಮದಿಯಿಂದ ಇರುವುದಕ್ಕೆ ಮತ್ತು ದೇಶದಲ್ಲಿ ಉಂಟಾಗಿರತಕ್ಕ ಆಹಾರ ಕೊರತೆಯನ್ನು ನೀಗುವುದಕ್ಕೂ ಸ್ವಲ್ಪಮಟ್ಟಿಗೆ ಅನುಕೂಲವಾಗುವುದೆಂದು ಸೂಚಿಸಬಯಸುತ್ತೇನೆ. ಇನ್ನು ಇದುವರೆಗೂ ಮಾತನಾಡಿರತಕ್ಕ ಅನೇಕ ಜನ ಮಾನ್ಯ ಸದಸ್ಯರು ನಮ್ಮ ಅರಣ್ಯ ಸಂಪತ್ತು, ಈ ಒಂದು ದೇಶದ ಐಶ್ವರ್ಯ ದಿನ ದಿನಕ್ಕೂ ಕಡಮೆಯಾಗುತ್ತಿದೆ ಎಂದು ಹೇಳಿರುತ್ತಾರೆ. ಜನರು ಗಿಡಗಳನ್ನು ನಾಶಮಾಡುವ ಮಟ್ಟದಲ್ಲಿ ಉತ್ತಮ ಗಿಡಗಳನ್ನು ನೆಡುತ್ತಿಲ್ಲ. ಜನರು ಅದಷ್ಟೂ ಉತ್ತಮ ಗಿಡಗಳನ್ನು ನೆಟ್ಟರೆ ದೇಶಾಭಿವೃದ್ಧಿಗೆ ಒಳ್ಳೆಯದೆಂದು ಹೇಳ ಬಯಸುತ್ತೇನೆ. ಇನ್ನು ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್ ವಿಚಾರಕ್ಕೆ ಬಂದರೆ—ಅದು ಜುಡಿಷಿಯಲ್ಲೇ ಇರಲಿ ಅಥವಾ ನಾನ್‌ಜುಡಿಷಿಯಲ್ಲೇ ಇರಲಿ ಅತ್ತ ಕಡೆಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕಾದ್ದು ಅಗತ್ಯ ಎಂದು ಹೇಳುತ್ತೇನೆ. ಈ ದಿವಸ ಈ ಸ್ಟ್ಯಾಂಪ್ ಪೇಪರುಗಳು ಸಿಕ್ಕದೆ ರೈತರಿಗಾಗುತ್ತಿರುವ ತೊಂದರೆಯನ್ನು ಅಷ್ಟಿಷ್ಟೆಂದು ಹೇಳಲಿಕ್ಕೆ ಬರುವುದಿಲ್ಲ. ಇದರಿಂದ ಸರ್ಕಾರಕ್ಕೆ ಬರತಕ್ಕ ವರಮಾನ ಕೂಡ ಕಡಮೆಯಾಗುತ್ತಿದೆ. ಈ ದಿವಸ ಯಾರಾದರೊಬ್ಬ 5—6 ಸಾವಿರ ರೂಪಾಯಿಗಳಿಗೆ ಒಂದು ಹೊಲವನ್ನು ಖರೀದಿ ಮಾಡಿದರೆ ಅದಕ್ಕೆ ಹಾಕಬೇಕಾದ ಸ್ಟ್ಯಾಂಪ್ ಪೇಪರ್ ಸಿಕ್ಕದಿದ್ದರೆ ಅವರು ಆ ಕ್ರಯಪತ್ರವನ್ನು ಕೇವಲ 500-600 ರೂಪಾಯಿಗಳಿಗೇ ಬರೆದುಬಿಡುತ್ತಾರೆ. ಹೀಗಾಗಿ ಸರ್ಕಾರಕ್ಕೆ ಈ ಬಾಬಿನಿಂದ ಎಷ್ಟು ವರಮಾನ ಬರಬೇಕಾಗಿತ್ತೋ ಅಷ್ಟು ಬರುತ್ತಿಲ್ಲ. ಸರ್ಕಾರದವರು ಇದನ್ನು ಗಮನಕ್ಕೆ ತೆಗೆದುಕೊಂಡು ಸರಿಯಾಗಿ ಈ ಸ್ಟ್ಯಾಂಪ್‌ಪೇಪರುಗಳನ್ನು ಪೂರೈಕೆ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ರೈತರಿಗೂ ತೊಂದರೆ ತಪ್ಪುತ್ತದೆ, ಸರ್ಕಾರಕ್ಕೂ ಸರಿಯಾದ ವರಮಾನ ಬಂದಂತಾಗುತ್ತದೆ.........

ಶ್ರೀ ಜಿ. ಬಿ. ಶಂಕರರಾವ್. (ಕಂದಾಯ ಶಾಖೆಯ ಉಪಮಂತ್ರಿಗಳು).—ಸರಿಯಾದ ಬೆಲೆಯ ಸ್ಟ್ಯಾಂಪ್ ಪೇಪರಿದ್ದರೂ ಅವರು ಅದನ್ನು ಮಾಡೇ ಮಾಡುತ್ತಾರೆ.

ಶ್ರೀ ಕೆ. ಸಂಗನಗೌಡ.—ಸನ್ಮಾನ್ಯ ಮಂತ್ರಿಗಳಿಗೆ ನಾನು ಹೇಳುತ್ತಿರುವುದು ಅರ್ಥವಾಗಲಿಲ್ಲ ಎಂದು ಕಾಣುತ್ತದೆ. ಇಂಥಾ ಕೇಸುಗಳು ಒಂದಲ್ಲಾ ಎರಡಲ್ಲಾ ಸಾವಿರಾರು ಇವೆ. ಇದರಲ್ಲಿ ಒಂದು ಮಹತ್ವದ ವಿಷಯವೆಂದರೆ, ಸಹಕಾರ ಸಂಘಗಳ ಕಾಗದ ಪತ್ರಗಳಿಗೆ ಸಾಲ ಹಂಚುವಾಗ ಆ ಪತ್ರಗಳಿಗೆ ಮಾತ್ರ ಸ್ಟ್ಯಾಂಪ್ ಪೇಪರನ್ನು ತೆಗೆದುಕೊಳ್ಳುವುದಿಲ್ಲ. ಅಲ್ಲಿ ಈ ದಿವಸ ಸಾವಿರಾರು ರೂಪಾಯಿಗಳ ಸಾಲ ಕೊಡಲಾಗುತ್ತಿದೆ. 25—30 ಸಾವಿರ ರೂಪಾಯಿಗಳನ್ನು ತಗಾವಿ ಸಾಲದ ರೂಪದಲ್ಲಿ ಊಡಲಾಗುತ್ತಿದೆ. ಇದೇ ರೀತಿಯಾಗಿ ಆ ಒಕ್ಕಲುತನದಲ್ಲಿರತಕ್ಕ ಜನರು ಟ್ರ್ಯಾಕ್ಟರ್‌ವಗ್ಗೈರೆ ಕೊಂಡಾಗ ಅವರಿಗೆ ಅವುಗಳನ್ನು ರಿಜಿಸ್ಟರ್ ಮಾಡುವಾಗಲೂ ಮತ್ತು ನೊಂದಣಿ ಮಾಡುವಾಗಲೂ ಫೀ ತೆಗೆದುಕೊಳ್ಳಬಾರದೆಂದು, ಇದಕ್ಕೆ ಸಹಕಾರ ಸಂಘಕ್ಕೆ ತೋರಿಸಿರತಕ್ಕ ರಿಯಾಯಿತಿಯನ್ನು ತೋರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕಡೆಯದಾಗಿ ಎಲ್ಲೆಲ್ಲಿ ದೇಶದಲ್ಲಿ ಬರಗಾಲ ಬಂದಿದೆಯೋ ಅಲ್ಲೆಲ್ಲಾ ಪರಿಹಾರಕಾರ್ಯ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದೂ, ಗ್ರಾಮಾಂತರ ಪ್ರದೇಶದಲ್ಲಿ ಫೇರ್‌ಪ್ರೈಸ್ ಡಿಪೋಗಳನ್ನು ತೆರೆಯಬೇಕೆಂದೂ ಹಿಂದೆ ಬರಗಾಲ ಬಿದ್ದಿದ್ದಾಗ ಜಾನುವಾರುಗಳಿಗೆ ಮೇವನ್ನು ಒದಗಿಸಿದಂತೆ ಈಗಲೂ ಹಾಗೇ ಅದನ್ನು ಒದಗಿಸತಕ್ಕ ಕಾರ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ಜನರಿಗೆ ಎಲ್ಲ ರೀತಿಯಿಂದಲೂ ಅನುಕೂಲಗಳನ್ನು ಕಲ್ಪಿಸಿ ಕೊಡ ಬೇಕೆಂದು ಕೇಳಿಕೊಂಡು ನನಗಿಷ್ಟು ಮಾತನಾಡುವುದಕ್ಕೆ ಅವಕಾಶಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಪಿ. ನಾಗಪ್ಪ (ಬಳ್ಳಾರಿ).—ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ಮಂಡಿಸಿರತಕ್ಕ 2,66,52,000 ರೂಪಾಯಿಗಳ ಬೇಡಿಕೆಯನ್ನು ನಾನು ವಿರೋಧಿಸಬಯಸುತ್ತೇನೆ. ಅದಕ್ಕೆ ಕಾರಣ ಇಷ್ಟೇ. ಅದೇನೆಂದರೆ ಇದು ಈ ಕಂದಾಯ ಪದ್ಧತಿ ಬಹಳ ಹಳೆಯ ರಾಜ ಮಹಾರಾಜರುಗಳ ಕಾಲದಿಂದಲೂ ಬಂದಿದೆ; ಅವರು ಹಾಕಿದ್ದ ಪದ್ಧತಿ ಇದು. ಹಿಂದೆ ಆ ರಾಜ ಮಹಾರಾಜರುಗಳಿಗೆ ಯಾವ ಒಂದು ಆದಾಯವೂ ಇರಲಿಲ್ಲ. ಆದುದರಿಂದ ಆ ಕಾಲದಲ್ಲಿ ಅವರು ಅವರ ಕೈಕೆಳಗಿದ್ದ ಪಾಳೇಯಗಾರರಿಗೂ ಜೋಡೀದಾರರಿಗೂ ಕೆಲ ಕೆಲವು ಹಳ್ಳಿಗಳನ್ನು ಮಾರಾಟ ಮಾಡಿ, ಆ ಜನರು ಆ ಭೂಮಿಯನ್ನು ಬೇರೆ ರೈತರುಗಳಿಗೆ ಹಂಚಿಕೆ ಮಾಡಿ ಅವರಿಂದ ಈ ಕಂದಾಯವನ್ನು ಎತ್ತುವಂಥ ಒಂದು ಪದ್ಧತಿಯನ್ನು ಅವರು ಜಾರಿಗೆ ತಂದಿದ್ದರು. ಅದು ಒಂದು ಏಕತಂತ್ರ ರಾಜಕೀಯ ಸಂಕೇತ. ನಮಗೆ ಇಂದು ಪ್ರಜಾತಂತ್ರ ರಾಜಕೀಯ ಬಂದಿದ್ದರೂ ಇದನ್ನು ನಾವಿನ್ನೂ ಕಳೆದಿಲ್ಲ. ಇದನ್ನು ಹಾಗೇ ಮುಂದುವರಿಸಿಕೊಂಡು ಬರಲಾಗುತ್ತಿದೆ.

ಈ ಹಿಂದೆ ಕಾಂಗ್ರೆಸ್ಸಿನವರೂ ಕೂಡ ಇದರ ಬಗ್ಗೆ ಒಂದು ಗೊತ್ತುವಳಿಯನ್ನು ಅಂಗೀಕಾರಮಾಡಿ ಈ ಸಂಪ್ರದಾಯವನ್ನು ಕೈಬಿಡಬೇಕೆಂದು ಮಾಡಿದ್ದರು. ನಮಗೆ ಇವರಿಂದ ಈ ದಿವಸ ಮಾಡಿರತಕ್ಕ 4 ಕೋಟಿ ರೂಪಾಯಿಗಳು ಲುಕ್ಸಾನಾದರೂ ಚಿಂತೆಯಿಲ್ಲ. ಪ್ರಜಾತಂತ್ರದ ಹೆಸರನ್ನು ಅಳಿಸತಕ್ಕ ಈ ಸಂಕೇತವನ್ನು ನಿರ್ಮೂಲಮಾಡುವುದಕ್ಕಾದರೂ ಕಂದಾಯವನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ನಾನು ಹೇಳುತ್ತೇನೆ. ಇದನ್ನು ತೆಗೆದು ಹಾಕಿದರೆ ಸರ್ಕಾರಕ್ಕೆ 4 ಕೋಟಿ ರೂಪಾಯಿಗಳ ನಷ್ಟವಾಗುತ್ತದೆಂದು ಕೇಳಬಹುದು. ಅದನ್ನು ನಾವು ಜಾರಿಯಲ್ಲಿಟ್ಟುಕೊಂಡಿದ್ದರೂ ಈ ಬಾಬಿಗೆ ಈ ದಿವಸ 2,66,52,000 ರೂಪಾಯಿಗಳನ್ನು ಖರ್ಚಿಗೆ ಕೇಳಿರುವುದರಿಂದ ಇದರಲ್ಲಿ ಶೇಕಡ 5!ರಷ್ಟು ಖರ್ಚಾಗುತ್ತಿತ್ತು ಎಂದು ತಿಳಿದು ಬರುತ್ತದೆ. ಈ ದಿವಸ ರೆವಿನ್ಯೂ ಬಾಬಿನಲ್ಲಿರತಕ್ಕ ಜನರು ರೆವಿನ್ಯೂ ಬಾಬಿನಿಂದ ಹೊರಗಿರತಕ ಸೇಲ್ಸ್‌ಟ್ಯಾಕ್ಸ್ ಮನಿಲೆಂಡರ್ಸ್ ಆಕ್ಟಿನ ಕೆಲಸಗಳು, ಕೆಲವು ಇನ್ನಿತರೇ ಮುನಿಸಿಪಲ್ ಟ್ಯಾಕ್ಸ್‌ಗಳನ್ನೆಲ್ಲಾ ವಸೂಲ್ಮಾಡತಕ್ಕ ಕೆಲಸಗಳನ್ನು ನೋಡಿಕೊಳ್ಳುತ್ತಿದ್ದಾರೆ. ಈ ಏಜನ್ಸಿಗಳನ್ನೆಲ್ಲಾ ತಪ್ಪಿಸಿದರೆ ಅವರಿಗೆ ಇರತಕ್ಕದ್ದು ಬರೀ ಕಂದಾಯದ ವಸೂಲಿ ಒಂದೇ. ಆದರೆ ತಾಶೀಲ್ದಾರರ ಹುದ್ದೆಯ ಜೊತೆಯಲ್ಲೇ ಅಡಿಷನಲ್ ತಾಶೀಲ್ದಾರ್, ಅಸಿಸ್ಟೆಂಟ್ ತಾಶೀಲ್ದಾರ್, ಬಿ. ಡಿ. ಒ. ಡಿಪ್ಯುಟಿ ತಾಶೀಲ್ದಾರ್ ಇಷ್ಟು ಹುದ್ದೆಗಳೆಲ್ಲಾ ಬರೀ ನಿರರ್ಥಕ. ಇವರನ್ನು ತೆಗೆದರೆ ಬಹಳ ಹಣ ಉಳಿಯುತ್ತದೆ. ಆದ್ದರಿಂದ ಈಗ ಕಂದಾಯವನ್ನು ವಸೂಲು ಮಾಡತಕ್ಕ ವಿಚಾರವನ್ನು ತಾವು ಸ್ವಲ್ಪ ವಿಚಾರ ಮಾಡಿ ನೋಡಿ. ಪ್ರೊಡಕ್ಷನ್ ಆಫ್ ವೆಲ್ತ್ ಆಗಬೇಕಾದರೆ, ಕ್ಯಾಪಿಟಲ್, ಮೇನೇಜಮೆಂಟ್ ಮತ್ತು ಲ್ಯಾಂಡ್ ಮತ್ತು ಲೇಬರ್ ಬೇಕು. ನೀವು ವಸೂಲು ಮಾಡತಕ್ಕದ್ದು ಟ್ಯಾಕ್ಸ್ ಅಲ್ಲ, ಅದು, ರೆಂಟ್ ರೂಪದಲ್ಲಿ ತೆಗೆದುಕೊಳ್ಳುವುದು. ಒಂದು ನಿಮಗೆ ಕೊಡಬೇಕು, ಇನ್ನೊಂದು ಮಾಲೀಕರಿಗೆ ಕೊಡಬೇಕು. ರೆಂಟ್ ವಸೂಲು ಮಾಡುವುದು ಹಳೆಯ ಪದ್ಧತಿ. ಅದನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ.

ಎರಡನೆಯದಾಗಿ, ಈ ಡಿವಿಜನಲ್ ಕಮಿಶನರ್ಸ್ ಆಫೀಸ್‌ಗಳ ವಿಚಾರ. ಇದು ಹೊಸದು. ಹಿಂದೆ ಹಳೆಯ ಹೈದರಾಬಾದನಲ್ಲಿ ಸುಬೇದಾರರು ಇದ್ದರು. ಅವರನ್ನು ಡಿವಿಜನಲ್ ಕಮಿಶನರ್ಸ್‌ನ್ನಾಗಿ ಮಾಡಿದ್ದಾರೆ. ಅವರಿಗೆ ಇರುವುದು ಪೋಸ್ಟು ಆಫೀಸು ಕೆಲಸ ಯಾವ ಒಂದು 500 ರೂಪಾಯಿ. ಕೆಲಸವಿದ್ದರೂ ಅವರ ಮೂಲಕ ಬರಬೇಕು. ರಾಯಚೂರಿನಲ್ಲಿ 42 ಆಫೀಶಿಯಲ್ಸ್‌ನ ಕನ್‌ಫರ್ಮೇಶನ್ ವಿಚಾರ ಇಲ್ಲಿ 6 ತಿಂಗಳಿಂದ ಪೆಂಡಿಂಗ್ ಇದೆ. ಬಂದಿರುವುದೂ ಡಿಫೆಕ್ಟ್ ಆಗಿ ಬಂದಿದೆ. ಆದ್ದರಿಂದ ಇವರ ಕೆಲವು ಅಧಿಕಾರಗಳನ್ನು ಡೆಪ್ಯೂಟಿ ಕಮಿಶನರಿಗೆ ಕೊಟ್ಟರೆ ಆಯಾಯ ಜಿಲ್ಲಾ ಕೆಲಸಗಳು ಅಲ್ಲೇ ಆಗಬಹುದು ಮತ್ತು ಇದು ಡಿವಿಜನಲ್ ಕಮಿಶನರಿಗೆ ಹೋಗಿ ತಡ ಆಗುವುದು ತಪ್ಪಿ ಹೋಗುತ್ತದೆಂದು ಹೇಳುತ್ತೇನೆ; ಮತ್ತು ಈ ಡಿವಿಜನಲ್ ಕಮಿಶನರ್ ಆಫೀಸನ್ನು ರದ್ದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಡಿಸ್ಟ್ರಿಬ್ಯೂಷನ್ ಆಫ್ ಫ್ಯಾಲೋ ಲ್ಯಾಂಡ್ಸ್. ಇದರ ಬಗ್ಗೆ ಹೇಳುವುದಾದರೆ, ಸರ್ಕಾರದ ನೀತಿ ಬಹಳ ಅಸ್ಪಷ್ಟ. ಇದರಲ್ಲಿ ಕಾಂಗ್ರೆಸನವರಿಗೆ ಅಥವಾ ಖಾದಿಬಟ್ಟೆ ಧರಿಸಿದವರಿಗೆ ಮಾತ್ರ ಭೂಮಿಯನ್ನು ಕೊಡಲಾಗುತ್ತಿದೆ. ಉದಾಹರಣೆಗೆ ವಕ್ರಾಣಿ ಎಂಬ ಗ್ರಾಮ ಇದೆ. ಅಲ್ಲಿರುವ ಹರಿಜನರಿಗೆ ಭೂಮಿಯನ್ನು ಕೊಡದೆ, ಅಲ್ಲಿಂದ 23 ಮೈಲಿಯಲ್ಲಿರತಕ್ಕ ಹರಿಜನರಿಗೆ ಭೂಮಿಯನ್ನು ಕೊಟ್ಟಿದ್ದಾರೆ.

ಶ್ರೀ ಜಿ. ಬಿ. ಶಂಕರ ರಾವ್.—ನೀವೂ ಖಾದಿ ಬಟ್ಟೆ ಉಟ್ಟುಕೊಂಡಿರಿ.

ಶ್ರೀ ಪಿ. ನಾಗಪ್ಪ.—ಖಾದಿ ಒಂದಲ್ಲ, ಒಳಗಿನ ತೊಗಲಿಗೂ ಖಾದಿಬೇಕಾಗುತ್ತದೆ. ಆದ್ದರಿಂದ ಅದನ್ನು ಸರಿಯಾದ ಬೇಡಿಕೆ ಇರುವವರಿಗೆ ಬಡವರಿಗೆ ಇವತ್ತಿನ ದಿವಸ ಸರ್ಕಾರದವರು ಕೊಡುತ್ತಾ

(ಶ್ರೀ ಪಿ. ನಾಗಪ್ಪ)

ಇಲ್ಲ. ಇನ್ನು ಅರಣ್ಯದ ಬಗ್ಗೆ ಹೇಳುವುದಾದರೆ, ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ 1—2ಮೈಲಿನಲ್ಲೇ ಅರಣ್ಯವನ್ನು ಮಾಡಿದ್ದಾರೆ, ಅದನ್ನು ಬಿಟ್ಟರೆ ಗುಡ್ಡಗಾಡು ಪ್ರದೇಶ. ಅಲ್ಲಿ ಕೆರೆಗಳು ಇರತಕ್ಕ ಭೂಮಿಯನ್ನು ತೆಗೆದುಕೊಂಡಿದ್ದಾರೆ. ರೈತರ ಭೂಮಿಯನ್ನು ಕಸಿದುಕೊಂಡಿದ್ದಾರೆ. ಅಲ್ಲಿಯೇ ರಾಯಚೂರು ತಾಲೂಕಿನಲ್ಲಿ ಕೆಲವು ಭೂಮಿಯಲ್ಲಿ ಯಾವ ರೀತಿಯ ಫಲ ಕೂಡ ಬರುತ್ತಿಲ್ಲ. ಅಲ್ಲಿಯ ಜನರು ಬೇರೆ ಹಳ್ಳಿಗಳಿಗೆ ಬಂದು ಜೀವನ ಮಾಡಬೇಕಾಗುತ್ತದೆ. ಅಂಥ ಜಮೀನುಗಳನ್ನು ತೆಗೆದುಕೊಂಡು ಫಾರೆಸ್ಟ್ ಮಾಡುವ ಬದಲಾಗಿ, ಇಂತಹ ಒಳ್ಳೆಯ ಭೂಮಿಯನ್ನು ತೆಗೆದುಕೊಂಡು ಹಾಳು ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು.

ಇನ್ನೊಂದು ಹೊಸ ವಿಷಯ ಹೇಳುವುದಾದರೆ, ನಮ್ಮ ಹೈದರಾಬಾದ್ ಕರ್ಣಾಟಕದಲ್ಲಿ ಎಂಡೋವ್‌ಮೆಂಟ್ ಡಿಪಾರ್ಟ್‌ಮೆಂಟಿನಿಂದ ಈ ನರ್ತಕಿಯರಿಗೆ ಇನಾಂ ಕೊಟ್ಟಿದ್ದಾರೆ. ಇದು ಹಳೆಯ ರಾಜರ ಕಾಲದಿಂದ ಕೊಡುತ್ತಾ ಬಂದಿದ್ದಾರೆ. ಅವರಿಗೆಲ್ಲಾ 24 ಊರು ಎಲ್ಲಾ ಭೂಮಿಗಳು. ಪೂಜೆ ಮಾಡತಕ್ಕ ಪೂಜಾರಿಗಳಿಗೆ ಇನಾಂ ಇಲ್ಲ. ಇದರ ಬಗ್ಗೆ ಸರ್ಕಾರ ತೀವ್ರ ಗಮನಿಸಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಾಲ).—ಮಾನ್ಯ ಅಧ್ಯಕ್ಷರೇ, ನಾನು ರೆವೆನ್ಯೂ ಡಿಮಾಂಡನ್ನು ಸ್ವಾಗತಿಸುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಿನ್ನೆ ಮತ್ತು ಇವತ್ತಿನ ದಿವಸ ಎಲ್ಲಾ ನಮ್ಮ ಸ್ನೇಹಿತರನೇಕರು ಬಹಳವಾಗಿ ಮಾತನಾಡಿದ್ದಾರೆ. ಬಹಳ ಮಹನೀಯರು ಕಂದಾಯವನ್ನು ತೆಗೆದುಹಾಕಬೇಕೆಂದು ಹೇಳುತ್ತಿದ್ದಾರೆ. ನಮ್ಮ ಜಿಲ್ಲೆ ಬಹಳ ಬರಗಾಲಕ್ಕೆ ತುತ್ತಾದ ಜಿಲ್ಲೆ. ಅಲ್ಲಿ ಮಳೆ ಇಲ್ಲದೆ ಬಹಳ ಜನರು ತ್ರಾಸಪಡುತ್ತಿದ್ದಾರೆ. ನಾನಾದರೂ ಹೇಳುತ್ತೇನೆ, ಇದನ್ನು ತೆಗೆದುಹಾಕಬಾರದು ಎಂದು. ಈ ಕಂದಾಯವನ್ನು ತೆಗೆದುಹಾಕಿದರೆ ನಮ್ಮ ರೈತರಿಗೆ ಅಧಿಕಾರ ಎಲ್ಲಿ ಇರುತ್ತದೆ? ಅವರ ಹಕ್ಕುಬಾಧ್ಯತೆ ಎಲ್ಲಿ ಇರುತ್ತದೆ?

ಶ್ರೀ ಎಚ್. ಸಿದ್ದವೀರಪ್ಪ.—ಕಂದಾಯ ತೆಗೆದುಹಾಕಬೇಕು ಎಂದು ನಿಮ್ಮ ಮಂತ್ರಿಯವರೇ ಹೇಳಿದ್ದು. ಅವರಿಗೆ ಸ್ವಲ್ಪ ಸರಿಯಾದ ಬುದ್ಧಿ ಹೇಳಿ.

ಶ್ರೀಮತಿ ನಾಗಮ್ಮ.—ನೀವು ಮಂತ್ರಿಯಾಗಿದ್ದು ಅದಾದ ಮೇಲೆ, ಈಗ ಆ ಸಾಲಿನಲ್ಲಿ ಕೂತುಕೊಳ್ಳುತ್ತಿದ್ದೀರಿ.

(ಸಭೆಯಲ್ಲಿ ನಗು)

ಇವತ್ತಿನ ದಿವಸ ನಮ್ಮ ರೈತರಿಗೆ ಏನೇನು ಸೌಲಭ್ಯಗಳು ಬೇಕೋ, ಅದನ್ನು ನಮ್ಮ ಸರ್ಕಾರದವರು ಆಗಾಗ್ಯೆ ಕೊಟ್ಟು ಉತ್ತೇಜನ ಕೊಡಬೇಕೆಂದು ಮನವಿಮಾಡಿಕೊಳ್ಳುತ್ತೇನೆ. ಅವನಿಗೆ ಬೇಕಾದ ಗೊಬ್ಬರ, ಬೀಜ, ಕಾಲಕ್ಕೆ ಸರಿಯಾಗಿ ಸಾಲ ಮೊದಲಾದುವುಗಳನ್ನು ಅವನು ಕೇಳಿದ ತಕ್ಷಣ ಅವನಿಗೆ ಒದಗಿಸಿ, ಅದು ಅವನ ಮನೆ ಸೇರುವಂತೆ ಮಾಡಬೇಕು ನಮ್ಮ ಸರ್ಕಾರದವರು. ಅದರ ಸಲುವಾಗಿ ನಾನು ಹೇಳುವುದೇನೆಂದರೆ, ಹೆಚ್ಚು ಹೆಚ್ಚಾಗಿ ಟ್ರೈನಿಂಗ್ ಆದ ಜನರನ್ನು, ರೈತರುಗಳಿಗೆ ಚೆನ್ನಾಗಿ ತಿಳಿಯಪಡಿಸುವವರನ್ನು ನೇಮಿಸಬೇಕು ಎಂಬುದಾಗಿ ಕೇಳಿಕೊಳ್ಳುತ್ತೇನೆ. ಏಕೆಂದರೆ, ನಾವುಗಳೆಲ್ಲಾ ಇರುವುದು ಈ ರೈತರಿಂದಲೇ, ಈ ರೈತರ ದುಡಿದರೆ ಮಾತ್ರ ನಾವು ಸಾವುಕಾರರಾಗುತ್ತೇವೆ. ಕಾರುಗಳಲ್ಲಿ ತಿರುಗುತ್ತೇವೆ. ಅದರ ಸಲುವಾಗಿ ನಾನು ಕೇಳುವುದೇನೆಂದರೆ, ಈ ಬಡ ಜನರಿಗೆ ಭೂಮಿಯನ್ನು ಕೊಡಬೇಕು, ಜಮೀನು ಕೊಡಬೇಕೆಂದು ನಿಯಮವಿದ್ದರೂ ಸಹ ನೀವು ಎಷ್ಟು ಜಮೀನು ಹಂಚಿದ್ದೀರಿ ಎಂಬುದನ್ನು ಹೇಳಬೇಕು. ನಮ್ಮ ರೆವಿನ್ಯೂ ಮಂತ್ರಿಗಳು ನನ್ನ ಏರಿಯಾಕ್ಕೆ ಒಂದು ಸಾರಿಯೂ ಬಂದಿಲ್ಲ. ಅಲ್ಲಿಯ ಜನರ ಕಷ್ಟವನ್ನು ನೋಡಿಲ್ಲ. ದೊಡ್ಡ ದೊಡ್ಡ ಕುಲಕರ್ಣಿಗಳು, ಶಾನುಭೋಗರು, ಅಧಿಕಾರಿಗಳು ಹರಿಜನರಿಗೆ ಭೂಮಿಯನ್ನು ಕೊಡಿಸುತ್ತೇವೆಂದು 500 ರೂಪಾಯಿಗಳವರೆಗೆ ಲಂಚವನ್ನು ತೆಗೆದುಕೊಂಡಿದ್ದಾರೆಂಬ ವಿಷಯವನ್ನು ಮಂತ್ರಿಗಳಿಗೂ ಮತ್ತು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಇದನ್ನು ಸರ್ಕಾರದವರು ವಿಚಾರ ಮಾಡಬೇಕು. ಹರಿಜನರನ್ನು ಹಾಳುಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಗೌಡರ ಜಮೀನಿನ ಪಕ್ಕದಲ್ಲಿ ಸರ್ಕಾರಿ ಜಮೀನು ಇದ್ದರೆ, ಅದನ್ನು ಸಹ ಆ ದೊಡ್ಡ ದೊಡ್ಡ ಗೌಡರೇ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿದ್ದಾರೆಯೇ ವಿನಾ ಬಡವರನ್ನು ಕೇಳುವವರೇ ಇಲ್ಲ. ಇನ್ನು ಬಡವರನ್ನು ಯಾರು ಕೇಳಬೇಕು? ಈ ಹರಿಜನರು ಐದಾರು ವರ್ಷಗಳಿಂದ ಜಮೀನು ಕೊಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಂಡು ಬಂದಿದ್ದಾರೆ. ಆದ್ದರಿಂದ ಅವರಿಗೆ ಸರಿಯಾದ ಸವಲತ್ತನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಂತ್ರಿಗಳು ತಾವೇ ಒಂದು ಸಾರಿ ನಮ್ಮಲ್ಲಿಗೆ ಬಂದು ಹರಿಜನರಿಗೆ ಜಮೀನು

ಹಂಚಿಕೊಡಬೇಕು. ನಾಲ್ಕು ಎಕರೆಯಾಗಲೀ, ಎರಡು ಎಕರೆಯಾಗಲೀ ಕಾನೂನಿನಲ್ಲಿ ಎಷ್ಟು ಇದೆಯೋ ಅಷ್ಟನ್ನು ಹಂಚಿಕೊಡಬೇಕು. ಸರ್ಕಾರದವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಕಂದಾಯ ಇಲಾಖೆಯ ಸಿಬ್ಬಂದಿಗಳನ್ನು ಬಿಟ್ಟು ಇಡೀ ರಾಜ್ಯದಲ್ಲಿ ಸರ್ಕಾರೀ ಭೂಮಿ ಎಷ್ಟು ಇದೆ, ರೈತರ ಭೂಮಿ ಎಷ್ಟು ಇದೆ ಎಂಬುದನ್ನು ಸರ್ವೆ ಮಾಡಿಸಬೇಕು. ಈ ಕೆಲಸವನ್ನು ಇದುವರೆಗೆ ಮಾಡಿಸಿಲ್ಲ. ಈ ಡಿವಿಜನಲ್ ಕಮೀಷನರ್ ಅವರ ಹುದ್ದೆ ಏತಕ್ಕೆ ಇರಬೇಕೆಂದು ಕೇಳುತ್ತೇನೆ. ಈ ಹುದ್ದೆಯನ್ನು ರದ್ದು ಮಾಡಿ. ಇವರ ಕೆಲಸವನ್ನು ನಮ್ಮ ತಹಶಿಲ್‌ದಾರರು ಮತ್ತು ಅಸಿಸ್ಟೆಂಟ್ ಕಮೀಷನರ್ ಅವರು ನೋಡಿಕೊಳ್ಳುತ್ತಾರೆ. ಈ ಅಸಿಸ್ಟೆಂಟ್ ಕಮೀಷನರ್ ಅವರಿಗೆ ಮತ್ತು ತಹಶಿಲ್ ದಾರರಿಗೆ ಒಂದೊಂದು ಜೀಪನ್ನು ಕೊಡಬೇಕು. ಅವರಿಗೆ ಜೀಪನ್ನು ಸರ್ಕಾರದವರು ಕೊಟ್ಟರೆ ಅವರು ಪ್ರತಿ ಹಳ್ಳಿಗೂ ಹೋಗಿ ರೈತರ ಕಷ್ಟಸುಖಗಳನ್ನು ವಿಚಾರಿಸುತ್ತಾರೆ. ನನ್ನ ಏರಿಯಾದಲ್ಲಿ ಒಂದೂ ಸರಿಯಾದ ರಸ್ತೆ ಇಲ್ಲ. ರಸ್ತೆ ಸರಿಯಾಗಿ ಇಲ್ಲದಿದ್ದರೆ ಯಾವ ಅಧಿಕಾರಿಗಳು ಸಹ ರೈತರ ಕಷ್ಟ ಸುಖಗಳನ್ನು ವಿಚಾರಿಸಲು ಹಳ್ಳಿಗಳಿಗೆ ಬರುವುದಿಲ್ಲ. ಇದರ ಬಗ್ಗೆ ತನಿಖೆ ನಡೆಸಿ ಎಲ್ಲಾ ಕಡೆಗೂ ಸರಿಯಾದ ರಸ್ತೆಗಳನ್ನು ಮಾಡಿಸಬೇಕು. ಇದರಿಂದ ಅಧಿಕಾರಿಗಳು ರೈತರು ಬೆಳೆದ ಬೆಳೆಯನ್ನು ತನಿಖೆ ಮಾಡಲು ಅನುಕೂಲವಾಗುತ್ತದೆ. ಖಂಡಿತವಾಗಿ ಇವರಿಗೆ ಜೀಪ್‌ಗಳನ್ನು ಒದಗಿಸಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಅಧಿಕಾರಿಗಳಿಗೆ ಕುದುರೆ ಕೊಡುವಂತೆ ಹೇಳಿ.

ಶ್ರೀಮತಿ ನಾಗಮ್ಮ.—ನಿಮಗೆ ಬೇಕಾದರೆ ಕುದುರೆ ಕೊಡುತ್ತಾರೆ. ಆದ್ದರಿಂದ ಹರಿಜನರಿಗೆ ಒಳ್ಳೆಯ ಭೂಮಿಯನ್ನು ಹಂಚಿಕೊಡಬೇಕು. ಹರಿಜನರಿಗೇ ಎಂದು ನಾನು ಹೇಳುವುದಿಲ್ಲ, ಲಂಬಾಣಿ, ಕೊರಚ, ಕೊರಮ, ಕಲ್ಲುಕುಟಿಗರು, ಮುಂತಾದವರಿಗೂ ಸಹ ಭೂಮಿ ಇಲ್ಲದಿದ್ದರೆ ಭೂಮಿಯನ್ನು ಹಂಚಿಕೊಡಿ.

ಇನ್ನು ಅರಣ್ಯದ ವಿಚಾರವಾಗಿ ಅನೇಕ ಸ್ನೇಹಿತರು ಮಾತನಾಡಿದರು. ಕೆಲವರು ಅರಣ್ಯವನ್ನು ಕಡಿಯಬೇಡಿ ಎಂದು ಹೇಳಿದರು. ಅರಣ್ಯದ ಸಂಪತ್ತನ್ನು ಉಪಯೋಗಿಸಿಕೊಳ್ಳದಿದ್ದರೆ ಸರ್ಕಾರ ನಡೆಸುವುದಕ್ಕೆ ಹಣ ಎಲ್ಲಿಂದ ಬರಬೇಕು? ಕೆಲವರು ಕಂದಾಯವನ್ನು ರದ್ದು ಮಾಡಬೇಕೆಂದು ಹೇಳಿದರು, ಕಂದಾಯವನ್ನು ರದ್ದು ಮಾಡಿದರೆ, ಸೇತುವೆಗಳನ್ನು, ರಸ್ತೆಗಳನ್ನು ಮಾಡಿಸುವುದಕ್ಕೆ ಸರ್ಕಾರಕ್ಕೆ ಹಣ ಎಲ್ಲಿಂದ ಬರಬೇಕೆಂದು ಕೇಳುತ್ತೇನೆ. ಈ ರೀತಿಯೆಲ್ಲಾ ಸರ್ಕಾರದವರನ್ನು ಕೇಳುವುದು ಸರಿಯಲ್ಲ. ಸರ್ಕಾರಕ್ಕೆ ಕೊಡುವ ತೆರಿಗೆಗಳನ್ನೆಲ್ಲಾ ಕೊಡಬೇಕು. ರೈತರಿಗೆ ಬೇಕಾದ ಗೊಬ್ಬರ, ಬೀಜ ಮತ್ತು ಇತರ ಉಪಕರಣಗಳನ್ನು ಅವರು ಒದಗಿಸಿಕೊಡಬೇಕು. ರೈತರಿಗೆ ಒಳ್ಳೆಯ ಧೈರ್ಯ ಕೊಟ್ಟು ಹೆಚ್ಚು ಹೆಚ್ಚು ಬೆಳೆ ಬೆಳೆಯುವಂತೆ ಹೇಳಬೇಕು. ಸದಸ್ಯರು ಇಲ್ಲಿ ಬಂದು ಕುಳಿತು ಮಳೆಯಾಗಲಿಲ್ಲವೆಂದರೆ ಮಳೆ ಬರುವುದಿಲ್ಲ. ಮಳೆ ಬರಬೇಕಾದರೆ ಎಲ್ಲರೂ ದೇವರನ್ನು ಪ್ರಾರ್ಥನೆ ಮಾಡಬೇಕು. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಇನ್ನೊಮ್ಮೆ ಮಾತನಾಡಲು ಮೊದಲ ಅವಕಾಶ ಕೊಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಮುಂದೆ ಸರ್ಕಾರದವರು ಮಂಡಿಸಿರುವ ಭೂಕಂದಾಯ ಮತ್ತು ಇತರ ಬೇಡಿಕೆಗಳನ್ನು ವಿರೋಧಿಸಿ ಕೆಲವು ವಿಚಾರಗಳನ್ನು ತಿಳಿಸಬಯಸುತ್ತೇನೆ. ಹಿಂದೆ ಈ ಸಭೆಯ ಮುಂದೆ ಸರ್ಕಾರದವರು ಲ್ಯಾಂಡ್ ರೆವಿನ್ಯೂ ರಿವಿಜನ್ ಅಂಡ್ ಸೆಟಲ್‌ಮೆಂಟ್ ಆಕ್ಟನ್ನು ತಂದಾಗ ಕಾಂಗ್ರೆಸ್ ಸದಸ್ಯರು ಮತ್ತು ವಿರೋಧಪಕ್ಷದವರಲ್ಲಿ ಬಹುತೇಕ ಮಂದಿ ಸದಸ್ಯರು ಮಾತನಾಡುತ್ತಾ, ಈ ಭೂಕಂದಾಯ ಪದ್ಧತಿ ಬಹಳ ಪುರಾತನ ಕಾಲದಿಂದ ಬಂದಿದೆ, ಪುರಾತನ ಕಾಲದಿಂದ ಬಂದಿರುವ ಭೂಕಂದಾಯ ಪದ್ಧತಿ ರದ್ದಾಗಬೇಕೆಂದು ಒಮ್ಮತಾಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದೇ ಅಭಿಪ್ರಾಯವನ್ನು ಸರ್ಕಾರದವರು ಚುನಾವಣೆಗೆ ಮುಂಚೆ ಪರಿಶೀಲನೆ ಮಾಡಲು ಒಂದು ಮಂತ್ರಿಮಂಡಲದ ಉಪ ಸಮಿತಿಯನ್ನು ನೇಮಕ ಮಾಡಿದರು. ಆ ಉಪಸಮಿತಿಯವರು ತಮ್ಮ ವರದಿಯನ್ನು ಕೊಟ್ಟಿದ್ದಾರೆಂದು ಮಂತ್ರಿಗಳು ಹೇಳಿದರು. ಭೂಕಂದಾಯವನ್ನು ರದ್ದುಮಾಡುತ್ತೇವೆಂದು ಸರ್ಕಾರದವರು ಚುನಾವಣೆಗೆ ಮುಂಚೆ ಜನರಿಗೆ ಭರವಸೆಯನ್ನು ಕೊಟ್ಟರು. ಚುನಾವಣೆ ಮುಗಿದ ಮೇಲೆ, ಕಾಂಗ್ರೆಸ್ ಪಕ್ಷವೇ ಅಧಿಕಾರಕ್ಕೆ ಬಂದಮೇಲೆ, ಹಿಂದಿನ ಧೋರಣೆಗೆ ತದ್ವಿರುದ್ಧವಾಗಿ, ಕಾಂಗ್ರೆಸ್ ಪಕ್ಷದವರು ಭೂಕಂದಾಯ ರದ್ದು ಮಾಡುವುದನ್ನು ವಿರೋಧ ಮಾಡುವುದಕ್ಕೆ ಹೊರಟಿದ್ದಾರೆ. ಇದರಿಂದ ನನಗಾದರು ಅನ್ನಿಸುತ್ತದೆ, ಕಾಂಗ್ರೆಸ್ ಪಕ್ಷದವರಿಗೆ 1967ನೇ ಇಸವಿಯಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಇಡೀ ಹಿಂದೂಸ್ಥಾನದಲ್ಲಿ ಅನೇಕ ಕಡೇ ಪರಾಭವವಾಗಿದ್ದರೂ ಸಹ ಇನ್ನೂ ಜ್ಞಾನೋದಯವಾಗಿಲ್ಲ. ಜನತೆಯ ಹಿತಾಶಕ್ತಿಗಳಿಗೆ ವಿರೋಧವಾದ ನೀತಿಗಳನ್ನು ಮುಂದು

(ಶ್ರೀ ಪಿ. ವೆಂಕಟಗಿರಿಯಪ್ಪ)

ವರಿಸುವುದನ್ನು ಇನ್ನೂ ಇವರು ಕೈಬಿಟ್ಟಿಲ್ಲವೆನ್ನುವುದು ಖಚಿತವಾಗಿದೆ. ಭೂಕಂದಾಯವನ್ನು ರದ್ದು ಮಾಡುವುದಕ್ಕೂ ರೈತರ ಹಕ್ಕುಭಾಧ್ಯತೆಗಳ ರಕ್ಷಣೆಗೂ ಏನು ಸಂಬಂಧ? ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಇರುವ ರಿಜಿಸ್ಟ್ರೇಷನ್ ಆಫೀಸ್ ಆರ್. ಆರ್. ಆಫೀಸ್ ಇಂಡೆಕ್ಸ್ ಆಫೀಸಿನ ಅಧಿಕಾರಿಗಳು ರೈತರ ಹಕ್ಕುಗಳ ಲೆಖ್ಖಪತ್ರಗಳನ್ನು ಇಡುತ್ತಾರೆ. ಸುಮ್ಮನೆ ಇಲ್ಲದ ಕೆಲವು ಕಾರಣಗಳನ್ನು ಕೊಟ್ಟು ಭೂಕಂದಾಯವನ್ನು ರದ್ದು ಮಾಡುವ ವಿಚಾರವನ್ನು ಮುಂದಕ್ಕೆ ಹಾಕುತ್ತಿದ್ದಾರೆ. ಎಷ್ಟೋ ಕಾಲದಿಂದ ಸರ್ವೀಸ್ ಇನಾಂ ಜಮೀನುಗಳಿಗೆ ಕಂದಾಯವೇ ಇರಲಿಲ್ಲ. ಅವರಿಗೆ ಜಮೀನಿನ ಹಕ್ಕುಭಾಧ್ಯತೆಗಳಿಲ್ಲವೆ? ತೆರಿಗೆ ಹಾಕಬೇಕಾದರೆ ಮೂಲಭೂತವಾಗಿ ಅವರ ಆದಾಯವನ್ನು ಅನುಸರಿಸಬೇಕು. ಇನ್‌ಕಮ್ ಟ್ಯಾಕ್ಸ್ ಆಫೀಸಿನವರು ಸಹ ಆದಾಯದ ಮೇಲೆ ತೆರಿಗೆಯನ್ನು ವಸೂಲು ಮಾಡುತ್ತಾರೆ. ಆದರೆ ಭೂಕಂದಾಯ ಪದ್ಧತಿಯನ್ನು ತೆಗೆದುಕೊಂಡರೆ ಸಣ್ಣ ಸಣ್ಣ ಹಿಡುವಳಿದಾರರು ಸಹ ಬೆಳೆಯಾಗದಿದ್ದರೂ ಸಹ ಕಂದಾಯವನ್ನು ಕೊಡಬೇಕು. 5–10 ಎಕರೆ ಬರಡು ಭೂಮಿ ಇರುವವರು, ಆ ಒಂದು ಜಮೀನಿನಲ್ಲಿ ವರ್ಷವೆಲ್ಲಾ 5–6 ಜನರು ದುಡಿದರೆ ವರ್ಷದ ಆದಾಯ 500 ಅಥವಾ 600 ರೂಪಾಯಿಗಳು ಇರುತ್ತದೆ.

4-00 P.M.

ಎಷ್ಟೋ ಜನ ಸಣ್ಣ ರೈತರು ಜೀವನ ಮಾಡುವುದಕ್ಕಾಗದೆ ಬಹಳ ಕಷ್ಟಪಡುತ್ತಿದ್ದಾರೆ. ಅವರಿಂದ ಈಗ 25-30 ರೂಪಾಯಿಗಳವರೆಗೆ ಕಂದಾಯ ರೂಪದಲ್ಲಿ ವಸೂಲು ಮಾಡಬೇಕೆಂದು ಹೇಳಿದರೆ ಅದು ಸರ್ಕಾರದ ಯಾವ ಆರ್ಥಿಕ ನೀತಿ, ಯಾವ ಕಾರಣದಿಂದ ಅವರು ವ್ಯವಸಾಯವನ್ನು ಮುಂದುವರಿಸುವುದಕ್ಕೆ ಸಾಧ್ಯವೆಂದು ನಾನು ಕೇಳುತ್ತೇನೆ. ಈ ವರ್ಷದಲ್ಲಿ ರಾಜ್ಯಪಾಲರು ಹಿಂದೆ ಭಾಷಣ ಮಾಡಿದ ಕಾಲದಲ್ಲಿ ಅವರ ಭಾಷಣದ 24ನೇ ಪುಟದಲ್ಲಿ ಬಹಳ ಖಚಿತವಾಗಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ: "The feasibility of abolishing land revenue in its present form is under active consideration of the Government." ಇನ್ನು ಹಣಕಾಸಿನ ಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದ 46ನೇ ಪುಟದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದು ಈ ರೀತಿ ಇದೆ: "ಈಗಿನ ರೀತಿಯಲ್ಲಿರುವ ಭೂಕಂದಾಯವನ್ನು ರದ್ದುಗೊಳಿಸುವ ಬಗ್ಗೆ ಸರ್ಕಾರದವರು ನಿರ್ಧಾರವನ್ನು ಕೈಕೊಂಡಿರುವುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ" ಅಂದಮೇಲೆ ಈಗ ಕಾಂಗ್ರೆಸ್ ಸದಸ್ಯರು ಮಾತನಾಡುವ ಧಾಟಿಯೇ ಬೇರೆಯಾಗಿದೆ. ಮೊನ್ನೆ ನಮ್ಮ ಸ್ನೇಹಿತರು ಕೇಳಿದ ಪ್ರಶ್ನೆಗೆ ಕಂದಾಯ ಸಚಿವರು ಉತ್ತರ ಕೊಟ್ಟ ಧಾಟಿಯೇ ಬೇರೆಯಾಗಿದೆ. ಕಂದಾಯ ರದ್ದಿಯಾತಿಯ ಪ್ರಶ್ನೆಯನ್ನೇ ಕೈಬಿಡುವ ಪ್ರಸಂಗ ಕಾಣುತ್ತಾ ಇದೆ. ಅಂದರೆ ಈ ವಿಚಾರದಲ್ಲಿ ಒಂದು ಉಪಸಮಿತಿಯನ್ನು ರಚಿಸುತ್ತೇವೆಂದು ಜನತೆಗೆ ಕೊಟ್ಟ ಆಶ್ವಾಸನೆಗೆ ತದ್ವಿರುದ್ಧವಾಗಿದೆ. ನಾನು ಹೇಳುವುದೇನೆಂದರೆ ನೀವು ಜನತೆಗೆ ಕೊಟ್ಟ ಆಶ್ವಾಸನೆಯನ್ನು ನೀವೇ ಅಲ್ಲಗಳೆಯಬೇಡಿ. ಬಡಜನರಿಗೆ ಹೆಚ್ಚಿನ ರೀತಿಯಲ್ಲಿ ಆರ್ಥಿಕ ಸಹಾಯವಾಗುವ ಭೂಕಂದಾಯವನ್ನು ರದ್ದುಮಾಡಬೇಕು. ಭೂಕಂದಾಯವನ್ನು ರದ್ದುಮಾಡಿದರೆ ರೈತರು ಮತ್ತೆ ಬೇರೆ ವಿಧವಾದ ಕಂದಾಯ ಕೊಡಬೇಕೆಂದು ಮಾಡಬಾರದು. ಸರ್ಕಾರಕ್ಕೆ ಹೆಚ್ಚಿಗೆ ಆದಾಯ ಬರತಕ್ಕ ಮಾರಾಟ ತೆರಿಗೆಯಲ್ಲಿ ಮುಕ್ಕಾಲು ಪಾಲಿನಷ್ಟು ರೈತರೇ ಕಂದಾಯ ರೂಪದಲ್ಲಿ ಅದನ್ನೂ ಕೊಡುತ್ತಿದ್ದಾರೆ. ಕೆಲವು ಶ್ರೀಮಂತ ರೈತರು ಅದರಲ್ಲೂ ಭೂಸ್ವಾಮ್ಯಗಳು ಈ ಭೂಕಂದಾಯವನ್ನು ರದ್ದುಮಾಡುವುದರಿಂದ ಅವರು ವ್ಯವಸಾಯ ವರಮಾನ ತೆರಿಗೆಯನ್ನು ಹೆಚ್ಚಿಗೆ ಕೊಡಬೇಕಾಗಬಹುದೆಂದು ಮುಂದುವರಿಕೆಗೆ ಒತ್ತಾಯ ಮಾಡುತ್ತಿದ್ದಾರೆ. ಮತ್ತು ಅವರು ಒಂದು ಹಿತಾಸಕ್ತಿಯ ದೃಷ್ಟಿಯಿಂದ ಭೂಕಂದಾಯ ರದ್ದಾತಿಯನ್ನು ಅವರು ವಿರೋಧಮಾಡುತ್ತಿದ್ದಾರೆ. ವ್ಯವಸಾಯ ವರಮಾನ ತೆರಿಗೆಯನ್ನು ಸರಿಯಾಗಿ ವಸೂಲು ಮಾಡುತ್ತಾ ಇಲ್ಲ. ಸುಮಾರು ಒಂದೆರಡು ಲಕ್ಷ ರೂಪಾಯಿಗಳ ಆದಾಯವಿರುವವರು ಅಧಿಕಾರಿಗಳ ಮೇಲೆ ಪ್ರಭಾವ ಇಟ್ಟು ಈ ದಿವಸ ಒಂದು ಕಾಸೂ ಕೊಡದೆ ಸರ್ಕಾರಕ್ಕೆ ದ್ರೋಹ ಮಾಡುತ್ತಿದ್ದಾರೆ. ಅದನ್ನು ವಸೂಲು ಮಾಡುವುದಕ್ಕೆ ಶಕ್ತಿ ಇಲ್ಲದ ಸರ್ಕಾರ ಲ್ಯಾಂಡ್ ರೆವಿನ್ಯೂವನ್ನು ಮುಂದುವರಿಸಿಕೊಂಡು ಹೋಗಬೇಕು ಎಂಬುದಾಗಿ ಹೇಳುವುದರಲ್ಲಿ ಏನೂ ಅರ್ಥವಿಲ್ಲ. ಶ್ರಮಜೀವಿ ರೈತರ ಹಿತಾಸಕ್ತಿ ಇರುವುದು ಒಳ್ಳೆಯದು. ಇಲ್ಲದಿದ್ದರೆ ಅವರ ವಿಶ್ವಾಸವನ್ನು ಕಳೆದುಕೊಳ್ಳುವಿರಿ ಎಂದು ಸರ್ಕಾರಕ್ಕೆ ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ.

ಶ್ರೀ ಎ. ಮುನಿಯಪ್ಪ.—ವ್ಯವಸಾಯ ವರಮಾನ ತೆರಿಗೆ ಯಾವಾಗ ಬಂತೋ ಅಂದಿನಿಂದ ರೈತರು ಲಾಯರುಗಳ ಮನೆಯಲ್ಲಿ ಅಲೆದಾಡುವುದಕ್ಕೆ ಮಾನ್ಯ ಸದಸ್ಯರು ಸಲಹೆ ಕೊಡುತ್ತಿದ್ದಾರೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಭೂ ಸುಧಾರಣೆ ಜಾರಿಗೆ ಬಂದರೂ ರೈತರು ಲಾಯರುಗಳಲ್ಲಿ ಹೋಗಬೇಕಾಗುತ್ತದೆ ! ಅದಕ್ಕೋಸ್ಕರ ಭೂ ಸುಧಾರಣೆಗಳೇ ಬೇಡವೆ !

ಶ್ರೀ ಎ. ಮುನಿಯಪ್ಪ.—ಸಾಮಾನ್ಯ ರೈತ ವ್ಯವಸಾಯ ವರಮಾನವನ್ನು ಕೊಡದಿದ್ದರೆ ಅವನು ಅನೇಕ ಸಂದರ್ಭಗಳಲ್ಲಿ ಲಾಯರ್ ಹತ್ತಿರ ಹೋಗಬೇಕಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—15-20 ಎಕರೆಗಳಿಗಿಂತ ಕಡಿಮೆ ಜಮೀನು ಹೊಂದಿರತಕ್ಕ ಸಣ್ಣ ರೈತರ ಹತ್ತಿರ ಯಾರೂ ವ್ಯವಸಾಯ ವರಮಾನ ತೆರಿಗೆಯನ್ನು ಕೊಡಿ ಎಂದು ಬರುವುದಿಲ್ಲ.

ಇನ್ನು ನಾನು ರೆವಿನ್ಯೂ ಇಲಾಖೆಯ ಬಗ್ಗೆ ಹಿಂದಿನಿಂದಲೂ ಒತ್ತಾಯ ಮಾಡುತ್ತಿದ್ದೇನೆ. ಈಗ ಅನಾವಶ್ಯಕವಾಗಿರುವ ಸಬ್ ಡಿವಿಜನ್ ಆಫೀಸರ್ಸ್, ಡಿವಿಜನಲ್ ಕಮಿಷನರ್ಸ್ ಇವರ ಅಧಿಕಾರಗಳನ್ನು ಕೂಡಲೇ ರದ್ದುಮಾಡಬೇಕು. ಕೇವಲ ಎರಡು ಎಕರೆ ಭೂಮಿಯನ್ನು ಮಂಜೂರು ಮಾಡುವುದಕ್ಕೆ ಅಸಿಸ್ಟೆಂಟ್ ಕಮಿಷನರ್, ಡಿವಿಜನಲ್ ಕಮಿಷನರ್ ಮುಂದೆ ಅಪೀಲು ಹೋಗುವುದನ್ನು ಪೂರ್ತಿಯಾಗಿ ತೆಗೆದುಹಾಕಬೇಕು. ಅದಕ್ಕಾಗಿ ಐದಾರು ಆಫೀಸರುಗಳ ಹತ್ತಿರ ಹೋಗುವ ಪದ್ಧತಿ ಬೇಡ. ತಹಸೀಲ್ದಾರ್, ಡೆಪ್ಯುಟಿ ಕಮಿಷನರ್ ಸರ್ಕಾರ ಅಥವಾ ರೆವಿನ್ಯೂ ಟ್ರಿಬ್ಯೂನಲ್—ಇವು ಇವೆ. ಅಷ್ಟು ಇರುವುದೇ ಸಾಕು ಎಂದು ಮೊದಲಿನಿಂದಲೂ ಸರ್ಕಾರಕ್ಕೆ ಒತ್ತಾಯ ಮಾಡಿದ್ದೇನೆ. ಆದರೂ ಕೂಡ ಇನ್ನೂ ಈ ಹುದ್ದೆಗಳನ್ನು ಸರ್ಕಾರದವರು ಮುಂದುವರಿಸುತ್ತಿದ್ದಾರೆ. ಅಡಿಷನಲ್ ಡೆಪ್ಯುಟಿ ಕಮಿಷನರುಗಳನ್ನು ಬೇರೆ ನೇಮಕ ಮಾಡುತ್ತಿದ್ದಾರೆ. ಅವರಿಗೆ ಕೆಲಸಗಳು ಅಷ್ಟಾಗಿ ಇಲ್ಲದಿದ್ದರೂ ಕೂಡ ಯಾರಿಗೋ ತಮಗೆ ಬೇಕಾದವರಿಗೆ ಈ ಹುದ್ದೆಗಳನ್ನು ರಚನೆ ಮಾಡಿಕೊಡುತ್ತಿದ್ದಾರೆ. ಇದು ಮಿತವ್ಯಯವನ್ನು ಜಾರಿಗೆ ತಂದಂತಾಗುವುದಿಲ್ಲವೆಂದು ನಾನು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಇನ್ನು ಮುಜರಾಯಿ ಇಲಾಖೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ದೇವಸ್ಥಾನಗಳಿಗೆ ಸೇರಿದ ಇನಾಂತಿಗಳಿಗೆ ಭೂಸುಧಾರಣಾ ಮಸೂದೆಯಲ್ಲಿ ಯಾವ ರೀತಿಯ ಭದ್ರತೆಯೂ ಇಲ್ಲವೇ ಇಲ್ಲ. ದೇವಸ್ಥಾನದ ಧರ್ಮದರ್ಶಿಗಳಾಗಿರತಕ್ಕವರು ಸುಮಾರು 100-150 ವರ್ಷಗಳಿಂದಲೂ ಇರತಕ್ಕ ಜಮೀನುಗಳನ್ನು ಇತ್ತೀಚೆಗೆ ಹರಾಜು ಮಾಡುತ್ತಿದ್ದಾರೆ. ಇದು ಸರಿಯಲ್ಲ. ದೇವಸ್ಥಾನಗಳ ಜಮೀನನ್ನು ನಂಬಿಕೊಂಡು ನೂರಾರು ವರ್ಷಗಳಿಂದ ಅವುಗಳ ಜೀರ್ಣೋದ್ಧಾರ ಮಾಡಿ, ಆ ಜಮೀನುಗಳಲ್ಲಿ ಬಾವಿಗಳನ್ನು ತೆಗೆಸಿ ಅವನ್ನು ಚೆನ್ನಾಗಿಟ್ಟಿರುವಾಗ ಆ ಜಮೀನುಗಳನ್ನು ಅವರಿಂದ ಕೈಬಿಡಿಸುವುದು ನ್ಯಾಯವಲ್ಲ. ಧರ್ಮವೂ ಅಲ್ಲ. ಅವರಿಗೆ ಆ ಜಮೀನುಗಳ ಭದ್ರತೆ, ದೇವಸ್ಥಾನಗಳ ಜಮೀನು ಮಾಡುವ ರೈತರಿಗೆ ಭೂ ಸುಧಾರಣೆಯ ಮಸೂದೆಯಲ್ಲಿರುವ ಎಲ್ಲಾ ಭದ್ರತೆಯನ್ನು ಕೂಡಲೇ ದೊರಕಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಅರಣ್ಯ ಇಲಾಖೆ ಈಗ ಬಹಳ ನಿವ್ರಾಸ್ಥಿತಿಯಲ್ಲಿದೆ. ಇನ್ನು ಇದುವರೆಗೆ ಫಾರೆಸ್ಟ್ ಆಕ್ಟಿಗೆ ಫಾರೆಸ್ಟ್ ರೂಲ್ಸ್ ತಯಾರಾಗಿಲ್ಲ. ಇತ್ತೀಚೆಗೆ ಶ್ರೀಗಂಧದ ಮರಗಳು ಕಳ್ಳತನದಲ್ಲಿ ಬೇಕಾದಷ್ಟು ಮಾರಾಟವಾಗುತ್ತಿದೆ. ಅರಣ್ಯ ಇಲಾಖೆಯವರಿಗೆ ಖಾಸಗಿಯವರು ಮರಗಳನ್ನು ಕೊಟ್ಟರೆ ಸರ್ಕಾರ ಅದರಿಂದ ಬರತಕ್ಕ ವರಮಾನದಲ್ಲಿ ಅರ್ಧ ಭಾಗ ಕೊಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ಖಾಸಗಿಯಾಗಿ ಬೆಳೆದಂಥ ಮರಗಳನ್ನು ಸರ್ಕಾರಕ್ಕೆ ಕೊಟ್ಟಿದ್ದರೆ ಸರ್ಕಾರ ಸೂಕ್ತ ಪರಿಹಾರ ಕೊಡಬೇಕು. ಫಾರೆಸ್ಟ್ ಆಕ್ಟಿಗೆ ರೂಲ್ಸನ್ನು ಜಾಗ್ರತೆ ಮಾಡಬೇಕು. ಶ್ರೀಗಂಧದ ಮರಗಳನು ಖಾಸಗಿಯಾಗಿ ಬೆಳೆದವರಿಗೆ ಸರ್ಕಾರದವರು ಸೂಕ್ತ ಪರಿಹಾರ ಕೊಡಬೇಕೆಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಅಲ್ಲಂ ಕರಿಬಸಪ್ಪ (ಕುರುಗೋಡು).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಮಂತ್ರಿಗಳು ಮಂಡಿಸಿದ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಬಳ್ಳಾರಿ ಜಿಲ್ಲೆಯಲ್ಲಿ ಹಾಸ್ಪೇಟ್, ಬಳ್ಳಾರಿ, ಸಾಂಡೂರು ಈ 3 ತಾಲ್ಲೂಕುಗಳಲ್ಲಿ ಮೈನಿಂಗ್ ಬಹಳ ಹೆಚ್ಚಾಗಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಇಡೀ ಪ್ರಪಂಚಕ್ಕೇ ಗೊತ್ತಿದೆ. ಅದರಲ್ಲಿಯೂ ಬಹಳವಾಗಿ ರಿಚ್ ಏರಿಯಾಗಳಲ್ಲಿ ಬಂದು ಅರಣ್ಯ ಇಲಾಖೆಯವರು ಆ ಪ್ರದೇಶಗಳನ್ನು ರಿಜರ್ವ್ ಮಾಡುತ್ತಿದ್ದಾರೆ. ನಮ್ಮಲ್ಲಿ ಅಫಾರೆಸ್ಟೇಷನ್ ಮಾಡುವುದಕ್ಕೆ ನಾವು ಸಂಪೂರ್ಣ ಬೆಂಬಲ ಮಾಡುತ್ತೇವೆ. ಇಲ್ಲದಿದ್ದರೆ ನಮಗೆ ಮಳೆ ಬರುವುದಕ್ಕೆ ತೊಂದರೆಯಾಗುತ್ತದೆ. ಅದಕ್ಕಾಗಿ ಅರಣ್ಯ ಇಲಾಖೆಯವರು ಆಗಾಗ್ಗೆ ನಮ್ಮ ಪ್ರದೇಶಕ್ಕೆ ಬಹಳವಾಗಿ ಬಂದು ಪರ್ಸನಲ್ ಇನ್‌ಸ್ಪೆಕ್ಷನ್ ಮಾಡದೇ ಸುಮ್ಮನೆ ಆಫೀಸಿನಲ್ಲಿ ಕುಳಿತರೆ ಏನು ಪ್ರಯೋಜನ ?

ಅಧ್ಯಕ್ಷರು.—ಬಳ್ಳಾರಿ ಜಿಲ್ಲೆಯಲ್ಲಿ ಅಲ್ಲವೇ ?

ಶ್ರೀ ಅಲ್ಲಂ ಕರಿಬಸಪ್ಪ.—ಹೌದು. ಇಲ್ಲದಿದ್ದರೆ ಬೇರೆ ಜಿಲ್ಲೆಗೆ ಇಕ್ಸ್‌ಪೋರ್ಟ್‌ಗೆ ಹೋಗುತ್ತಾರೆ. ನಮ್ಮಲ್ಲಿ ಇರತಕ್ಕ ಮೈನಿಂಗ್ ಏರಿಯಾವನ್ನು ವಿಶೇಷವಾಗಿ ರಿಜರ್ವ್ ಮಾಡುತ್ತಿದಾರೆ. ಎಲ್ಲೆಲ್ಲಿ ಇಂತಹ ಏರಿಯಾಗಳಿವೆಯೋ ಅಂತಹ ಏರಿಯಾಗಳ ಸುತ್ತುಮುತ್ತಲೂ ಜನರು ವಾಸಿಸುವುದಕ್ಕೆ ಕೊಡುತ್ತಿದ್ದಾರೆ. ಇಂಥಿಂಥ ಪ್ರದೇಶಗಳು ರಿಜರ್ವ್ ಆಗಿವೆಯೆಂದು ಹೇಳುತ್ತಾರೆ. ಇದರಿಂದ ನಮ್ಮ ಮಿನರಲ್ ವೆಲ್ತ್ ಬಹಳವಾಗಿ ವ್ಯರ್ಥ ಆಗುತ್ತಿದೆ. ಫಾರೆನ್ ಎಕ್ಸ್‌ಚೇಂಜ್ ಪಡೆಯುವುದರಲ್ಲಿಯೂ ನಷ್ಟವಾಗುತ್ತಿದೆ. ಸಂಬಂಧಪಟ್ಟ ಮಂತ್ರಿಗಳು ಈ ವಿಚಾರವನ್ನು ಖುದ್ದಾಗಿ ಬಂದು ನೋಡಲಿ. ನಾನು ಬೇಕಾದರೆ ಎಲ್ಲೆಲ್ಲಿ ನ್ಯೂನತೆಗಳು ಇವೆ ಎಂಬುದನ್ನು ಅವರಿಗೆ ತೋರಿಸುತ್ತೇನೆ. ನಾನು ಹೇಳಿದ ವಿಷಯಗಳು ಎಲ್ಲೆಲ್ಲಿ ಯಾವ ರೀತಿಯಲ್ಲಿವೆ ಎಂಬುದನ್ನು ತಿಳಿಯಬಹುದು. ಅಂತಹ ಪ್ರದೇಶಗಳನ್ನು ಕೂಡಲೇ ರಿಲೀಜ್ ಮಾಡಬೇಕೆಂದು ನಾನು ಅರಣ್ಯ ಇಲಾಖೆಯವರನ್ನು ಬೇಡಿಕೊಳ್ಳುತ್ತೇನೆ. ಬಹಳ ಕಡೆಗಳಲ್ಲಿ ಅರಣ್ಯ ಪ್ರದೇಶದಲ್ಲಿ ಏನೂ ಬೆಳೆಯುವುದಿಲ್ಲ. ಯಾವ ಪ್ಲಾಂಟೇಷನ್ ಸಹ ಇರುವುದಿಲ್ಲ. ಸುಮ್ಮನೆ ನಮ್ಮ ಪ್ರದೇಶದ ಗಣಿಯ ಭಾಗವನ್ನು ರಿಜರ್ವ್ ಮಾಡಿಕೊಂಡಿದ್ದಾರೆ. ಅಂತಹ ಪ್ರದೇಶಗಳನ್ನು ಏತಕ್ಕಾಗಿ ವ್ಯವಸಾಯಕ್ಕಾಗಿ ಕೊಡಬಾರದು ಅದನ್ನು ಮಂತ್ರಿಗಳು ಕೂಡಲೇ ಗಮನಿಸಬೇಕು. ಕೆಲವು ಸ್ನೇಹಿತರು ಡಿವಿಜನಲ್ ಕಮಿಷನರ್ ವಿಚಾರ ಹೇಳಿ ಅವರು ಇರಬೇಕಾದುದು ನ್ಯಾಯ ಎಂಬುದಾಗಿ ಅಭಿಪ್ರಾಯಪಟ್ಟರು. ಆದರೆ ಡಿವಿಜನಲ್ ಕಮಿಷನರ್ ಆಫೀಸ್ ಸೂಪರ್ ಫ್ಲುಯಸ್ ಎಂದು ನನ್ನ ಅಭಿಪ್ರಾಯವಿದೆ ಈ ದೃಷ್ಟಿಯಿಂದ ಡೆಪ್ಯುಟೀ ಕಮೀಷನರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಡಿವಿಜನಲ್ ಕಮೀಷನರ ಫೀಸನ್ನು ಅಬಾಲಿಷ್ ಮಾಡುವುದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇದನ್ನು ಸರ್ಕಾರದವರು ಆಲೋಚನೆ ಮಾಡಬೇಕು ಎಂದು ನನ್ನ ಸಲಹೆ.

ಇನ್ನು ಭೂಕಂದಾಯದ ವಸೂಲಿಯ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಬಳ್ಳಾರಿ ಮತ್ತು ಶಿರಗುಪ್ಪಾ ತಾಲ್ಲೂಕುಗಳಲ್ಲಿ ಕಂದಾಯವನ್ನು ವಸೂಲು ಮಾಡತಕ್ಕ ವಿಚಾರ ಒಂದು ದೊಡ್ಡ ಸಮಸ್ಯೆಯಾಗಿದೆ. ಈ ತಾಲ್ಲೂಕುಗಳು ಕ್ಷಾಮ ಪೀಡಿತ ಪ್ರದೇಶಗಳು. ಆದ್ದರಿಂದ ಈ ಎರಡು ತಾಲ್ಲೂಕುಗಳು ಮದ್ರಾಸ್ ಸರ್ಕಾರದ ಆಡಳಿತದಲ್ಲಿದ್ದಾಗ ತುಂಗಭದ್ರಾ ಪ್ರಾಜೆಕ್ಟಿನಲ್ಲಿ ಡ್ರೈ-ಕಂ-ವೆಟ್ ಕಲ್ಟಿವೇಷನ್ ಎಂದು ಒಂದು ಹೊಸದಾಗಿ ಯೋಜನೆಯನ್ನು ಮಾಡಿದ್ದರು. ಇದರಲ್ಲಿ ಉದಾಹರಣೆಗೆ ಹೇಳುವುದಾದರೆ ಒಬ್ಬ ರೈತನಿಗೆ 100 ಎಕರೆ ಡ್ರೈ-ಕಂ-ವೆಟ್ ಲ್ಯಾಂಡ್ ಕೊಟ್ಟಿದ್ದರೆ ಅವನು ಅದರಲ್ಲಿ ನೀರಾವರಿಗೆ 10-15 ಎಕರೆಯನ್ನು ಮಾತ್ರ ತೆಗೆದುಕೊಂಡು ಉಪಯೋಗ ಮಾಡಿಕೊಂಡಿರುತ್ತಾನೆ. ಆದರೆ ಸರ್ಕಾರದ ಆಜ್ಞೆಯ ಪ್ರಕಾರ 100 ಎಕರೆಗೂ ವಾಟರ್ ರೇಟ್ ಕೊಡಬೇಕೆಂದಿದೆ. ಇದು ಸರಿಯಲ್ಲ. ಇದನ್ನು ಸರ್ಕಾರದವರು ಸ್ವಲ್ಪ ಆಲೋಚನೆ ಮಾಡಬೇಕಾಗುತ್ತದೆ. ರೈತ ಎಷ್ಟು ಎಕರೆ ಜಮೀನನ್ನು ನೀರಾವರಿ ವ್ಯವಸಾಯಕ್ಕೆ ಉಪಯೋಗಿಸಿಕೊಂಡಿರುತ್ತಾನೆಯೋ ಅಷ್ಟಕ್ಕೆ ಮಾತ್ರ ವಾಟರ್ ರೇಟ್ ಹಾಕಬೇಕೆಂದು ಬಳ್ಳಾರಿ ಮತ್ತು ಶಿರಗುಪ್ಪ ತಾಲ್ಲೂಕಿನ ಜನಗಳ ಅಜಿಟೇಷನ್ ಇದೆ. ಆದ್ದರಿಂದ ಈ ವಿಷಯವನ್ನು ಸರ್ಕಾರದವರು ತಕ್ಷಣ ತೀರ್ಮಾನ ಮಾಡಿ ರೈತರಿಗೆ ಕಷ್ಟವನ್ನು ಕಡಿಮೆಮಾಡಬೇಕು ಎಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರೈತ 10-15 ಎಕರೆ ನೀರಾವರಿ ಮಾಡಿದ್ದರೂ 100 ಎಕರೆಗೆ ವಾಟರ್ ರೇಟ್ ಹಾಕತಕ್ಕಂಥ ಸರ್ಕಾರದ ಆಜ್ಞೆ ಏನಿದೆ ಇದು ತಪ್ಪಾಗುತ್ತದೆ. ಇದನ್ನು ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಸ್ವಲ್ಪ ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡಬೇಕು ಎಂದು ನನ್ನ ಸಲಹೆ.

ಇನ್ನು ಬಳ್ಳಾರಿ ಮತ್ತು ಶಿರಗುಪ್ಪಾ ತಾಲ್ಲೂಕುಗಳಲ್ಲಿ ಈಗ ನಾಲ್ಕೈದು ವರ್ಷಗಳಿಂದಲೂ ಸರಿಯಾಗಿ ಮಳೆ ಬೆಳೆ ಆಗಿಲ್ಲ. ಅಲ್ಲಿ ಬರಗಾಲ ಬಂದಿದೆ ಎರಡು ಮೂರು ವರ್ಷದ ಭೂಕಂದಾಯವನ್ನು ಸಸ್‌ಪೆಂಡ್ ಮಾಡಿ ಪೋಸ್ಟ್ ಪೋನ್ ಮಾಡಿದರು. ಆದರೆ ಈ ವರ್ಷ ಎಲ್ಲಾ ಕಂದಾಯವನ್ನೂ ಒಂದೇ ಬಾರಿಗೆ ವಸೂಲು ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಎಷ್ಟು ಕಷ್ಟವಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ಬಳ್ಳಾರಿ ಟೌನಿಗೆ ಕಡಲೇಕಾಯನ್ನು ತುಂಬಿಕೊಂಡು ಬಂದಂಥ ಬಂಡಿಗಳನ್ನು ತಹಶೀಲ್ದಾರರು ಸೀಜ್ ಮಾಡಿಕೊಂಡು ಬಂದು ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಅವರು ತೀರಾ ಹೈ ಹ್ಯಾಂಡೆಡ್ ವರ್ತನೆ ಮಾಡುತ್ತಾರೆ. ರೈತರಿಗೆ ಸರಿಯಾದ ಮರ್ಯಾದೆಯನ್ನು ಕೊಡುವುದಿಲ್ಲ. ಈ ರೀತಿ ತಹಶೀಲ್ದಾರರು ಕಂದಾಯವನ್ನು ವಸೂಲು ಮಾಡಬೇಕೆಂದು ಯಾವ ರೂಲ್ಸಿನಲ್ಲಿದೆ ಎಂಬುದನ್ನು ಕೇಳಬೇಕು. ಇದನ್ನು ಸರ್ಕಾರದವರು ಪರಿಶೀಲನೆ ಮಾಡಿ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಮತ್ತು ರೈತರಿಗೆ ಹೆಚ್ಚು ತೊಂದರೆ ಆಗದ ಹಾಗೆ ನೋಡಿಕೊಳ್ಳಬೇಕು. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕೆ ಅವರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಕಂದಾಯ ಹಾಗೂ ಅರಣ್ಯ ಶಾಖಾ ಮಂತ್ರಿಗಳು ಈ ಸಭೆಯ ಮುಂದಿಟ್ಟಿರುವ ಬೇಡಿಕೆಗಳನ್ನು ವಿರೋಧಿಸುವುದಕ್ಕೆ ನಾನು ತಮ್ಮ ಅನುಮತಿಯನ್ನು ಕೇಳುತ್ತೇನೆ. ಈಗ ನಮ್ಮ ಅರಣ್ಯ ಶಾಖಾ ಮಂತ್ರಿಗಳು ವನಸಂಪತ್ತಿನಿಂದ ಉತ್ಪತ್ತಿ ಬರತಕ್ಕ 10 ಕೋಟಿ 80 ಸಾವಿರ ರೂಪಾಯಿಗಳ ಅಂದಾಜನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದಕ್ಕಾಗಿ ತಗಲತಕ್ಕ ಖರ್ಚು 6 ಕೋಟಿ 21 ಲಕ್ಷ 85 ಸಾವಿರ ರೂಪಾಯಿಗಳು. ಇದರಲ್ಲಿ ಉಳಿಯತಕ್ಕಂಥಾದ್ದು ಕೇವಲ 4 52,15,000 ರೂಪಾಯಿಗಳು ಮಾತ್ರ. ಅರಣ್ಯ ಇಲಾಖೆಯಲ್ಲಿ ಉತ್ಪತ್ತಿ ಆಗತಕ್ಕಂಥಾದ್ದನ್ನು ನೋಡಿದರೆ ಬಹಳ ದೊಡ್ಡದಾಗಿ ಕಾಣುತ್ತದೆ. ಆದರೆ ಉಳಿಯತಕ್ಕಂಥಾದನ್ನು ನೋಡಿದರೆ ಕೇವಲ 4,52,15,000 ರೂಪಾಯಿಗಳು ಮಾತ್ರ ಉಳಿತಾಯವಾಗುತ್ತದೆ. ಅರಣ್ಯ ಇಲಾಖೆಯಿಂದ ಇಷ್ಟು ಕಡಿಮೆ ಉತ್ಪತ್ತಿ ಬರುವುದಕ್ಕೆ ಕಾರಣವೇನು ಎಂದು ನಾನು ಮಂತ್ರಿವರ್ಯರಿಗೆ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ. ಈ ಇಲಾಖೆಯಲ್ಲಿರತಕ್ಕ ಅಧಿಕಾರಿಗಳು ಎಂದರೆ ಚೀಫ್ ಕನ್‌ಸರ್‌ವೇಟರ್, ಕನ್‌ಸರ್‌ವೇಟರ್ ಏನಿದ್ದಾರೆ ಅವರ ಇಂಟರ್ ಸೀನಿಯಾರಿಟಿ ಲಿಸ್ಟನ್ನು ಇಲ್ಲಿಯವರೆಗೂ ಕೂಡ ತೀರ್ಮಾನ ಮಾಡದೇ ಅದು ಒಂದು ಜಂಜಾಟವಾಗಿ ಉಳಿದುಕೊಂಡಿದೆ. ಅದು ಸುಪ್ರೀಂ ಕೋರ್ಟಿಗೆ ಹೋಗಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈ ಇಂಟರ್ ಸೀನಿಯಾರಿಟಿಯ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ 10 ವರ್ಷಗಳನ್ನು ತೆಗೆದುಕೊಂಡರೂ ಸಹ ಏತಕ್ಕೆ ವಿಳಂಬವಾಗಿದೆ ಎಂಬ ಪ್ರಶ್ನೆಯನ್ನು ಸರ್ಕಾರದ ಮುಂದೆ ಕೇಳುತ್ತೇನೆ. ಸೀನಿಯಾರಿಟಿ ವಿಷಯದಲ್ಲಿ ಅಧಿಕಾರಿಗಳು ಬೇಸತ್ತು ಈ ಇಲಾಖೆಯಲ್ಲಿರತಕ್ಕವರು ಕೆಲಸಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಮಾಡದೆ ಇಲ್ಲಿ ಎಲ್ಲಾ ಕೆಲಸಕಾರ್ಯಗಳೂ ಕುಂಠಿತವಾಗಿ, ದಕ್ಷತೆಯೇ ಇಲ್ಲದಂತಾಗಿದೆ ಎಂದು ನನಗೆ ಕಂಡು ಬರುತ್ತಿದೆ. ಅಲ್ಲದೆ ಅರಣ್ಯ ಇಲಾಖೆಯಲ್ಲಿರತಕ್ಕಂಥವನ ಸಂಪತ್ತನ್ನು ನಮ್ಮ ಅರಣ್ಯ ಇಲಾಖೆಯವರು ಯಾವ ರೀತಿ ವಿಲೇವಾರಿ ಮಾಡಿದ್ದಾರೆ ಎಂಬ ವಿಷಯವನ್ನು ನಾನು ಮಂತ್ರಿವರ್ಯರ ಗಮನಕ್ಕೆ ತರುತ್ತೇನೆ. ಅರಣ್ಯದಲ್ಲಿರತಕ್ಕವೆಂದು (Soft-wood) ಮರವನ್ನು ಕೆಲವು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಬಹಳ ಕಡಿಮೆ ಬೆಲೆಯಲ್ಲಿ ಕೊಟ್ಟಿದ್ದಾರೆ. ಅವರು ಈ ಬೆಲೆಗೆ ಕೊಟ್ಟಿರತಕ್ಕದ್ದು ಕೈಗಾರಿಕೆಯ ಉತ್ಪನ್ನಕ್ಕಾಗಿ ಕೊಟ್ಟಿದ್ದೇವೆ, ಕೈಗಾರಿಕೆಗಳನ್ನು ಬೆಳೆಸುವುದಕ್ಕೋಸ್ಕರ ಕೊಟ್ಟಿದ್ದೇವೆಂದು ಅವರು ಉತ್ತರವನ್ನು ಕೊಡಬಹುದು. ಆದರೆ ಇವರು ಕೊಟ್ಟಿರತಕ್ಕ ಯಾವ ಯಾವ ಕೈಗಾರಿಕೋದ್ಯಮಿಗಳ ಕಂಪೆನಿಗಳು ಏನಿವೆ ಆ ಕಂಪೆನಿಗಳ ಹೆಸರನ್ನು ನಾನು ಹೇಳುತ್ತೇನೆ. ವೆಸ್ಟ್ರನ್ ಇಂಡಿಯನ್ ಮ್ಯಾಚಿಂಗ್ ಕಂಪೆನಿ ಲಿಮಿಟೆಡ್, ಕಮರ್ಷಿಯಲ್ ಯೂನಿಯನ್ ಫ್ಯಾಕ್ಟರಿ, ದಾಂಡೇಲಿ ಪ್ಲೈವುಡ್ ಫ್ಯಾಕ್ಟರಿ ಈ ಫ್ಯಾಕ್ಟರಿಗಳಿಗೆ 30 ಸಾವಿರ ಟನ್. ಮೆದು ಮರ ಕೇವಲ ಒಂದು ಟನ್ನಿಗೆ 100 ರೂಪಾಯಿಗಳಿಂದ 120 ರೂಪಾಯಿಗಳವರೆಗೆ ಮಾರಿ, ಅವರು ಅದನ್ನು ಕಡಿದು ತೆಗೆದುಕೊಂಡು ಹೋಗಬಹುದು ಎನ್ನತಕ್ಕ ತೀರ್ಮಾನವನ್ನು ಕೊಟ್ಟಿದ್ದಾರೆ. ಇವರು ಆ ಕಂಪೆನಿಗಳವರಿಗೆ ಕೊಟ್ಟಿರತಕ್ಕ 30 ಸಾವಿರ ಟನ್ ಮೆದು ಮರದಿಂದ 35 ಲಕ್ಷ ರೂಪಾಯಿಗಳು ಮಾತ್ರ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನೊಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ನಾನು ಇಚ್ಛಿಸುತ್ತೇನೆ. ಈ ಮರವನ್ನು ಯಾವ ಉದ್ಯಮಿಗಳಿಗೆ ಕೊಟ್ಟಿದಾರೆಯೋ ಅವರಿಗೆ ಯಾವುದಾದರೂ ಒಂದು ಸರ್ವೆ ನಂಬರು, ಒಂದು ಏರಿಯಾವನ್ನು ಗೊತ್ತುಮಾಡಿ ಕಂಟ್ರಾಕ್ಟ್ ಕೊಟ್ಟಿದ್ದರೆ ಸರಿಹೋಗುತ್ತಿತ್ತು, ಆದರೆ ನಮ್ಮ ಅರಣ್ಯ ಇಲಾಖೆಯವರು ಕೊಟ್ಟಿರತಕ್ಕ ಆರ್ಡರು ಬಹಳ ವಿಚಿತ್ರವಾಗಿದೆ ಇಡೀ 8 ಜಿಲ್ಲೆಗಳಲ್ಲಿರತಕ್ಕಂಥ ಕಾಡಿನಲ್ಲಿ ಸ್ಟೇಟ್ ಫಾರೆಸ್ಟಿನಲ್ಲಿ ಎಲ್ಲಿ ಬೇಕಾದರೂ ಈ ಕೈಗಾರಿಕೋದ್ಯಮಿಗಳು ಮರವನ್ನು ಕಡಿದುಕೊಂಡು ತೆಗೆದುಕೊಂಡು ಹೋಗಬಹುದು ಎನ್ನುವಂಥ ಒಂದು ಅವಕಾಶವನ್ನೂ ಒದಗಿಸಿ ಕೊಟ್ಟಿದ್ದಾರೆ. ಇದರಿಂದ ಏನಾಗಿದೆ ಎಂದರೆ ಬರೀ ಮೆದು ಮರವನ್ನು ಮಾತ್ರ ಇವರು ತೆಗೆದುಕೊಂಡು ಹೋಗುತ್ತಿಲ್ಲ. ಅದರ ಜೊತೆಯಲ್ಲಿ ಬೆಲೆಬಾಳುವ ಮರಗಳು ಹೋಗುತ್ತವೆಯೋ ಏನೋ ನನಗೆ ಗೊತ್ತಾಗುವುದಿಲ್ಲ. ಏತಕ್ಕೆಂದರೆ 30 ಸಾವಿರ ಟನ್ ಮರವನ್ನು ಅವರು ಸಾಗಿಸಬೇಕಾದರೆ ಅದರಲ್ಲಿ ಸಾವಿರಾರು ಸಿ.ಎಫ್.ಟಿ. ಬೇರೆ ಉತ್ತಮ ಜಾತಿ ಮರವನ್ನ ಸೇರಿಸಿ ಸಾಗಿಸುತ್ತಾರೆ ಎಂದು ನನಗೆ ಕಂಡು ಬರುತ್ತಿದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿವರ್ಯರು ಇದನ್ನು ಕಡಿಮೆಮಾಡಿದರೆ ನಮ್ಮ ಸರ್ಕಾರಕ್ಕೆ ಬರುವ ಉತ್ಪತ್ತಿಯು ದ್ವಿಗುಣಗೊಳ್ಳುವುದು ಎಂದು ಸೂಚಿಸ ಬಯಸುತ್ತೇನೆ.

ಇನ್ನೊಂದು ಮುಖ್ಯ ವಿಷಯವನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬೇಕೆಂದಿದ್ದೇನೆ. ನಮ್ಮ ವನ ಸಂಪತ್ತಿನಲ್ಲಿ ಬಹಳ ಮುಖ್ಯವಾದುದು ಶ್ರೀಗಂಧ. ಇದನ್ನು ನಮ್ಮ ಸರ್ಕಾರದವರು ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿಗೆ ಒಂದು ವರ್ಷಕ್ಕೆ 2,400 ಟನ್‌ನ್ನು ಕೊಡುತ್ತಿದ್ದಾರೆ. ಈ ರೇಟನ್ನು ನೋಡಿದರೆ ಒಂದು ಟನ್ ಶ್ರೀಗಂಧವನ್ನು ಏಳು ಸಾವಿರ ಇಲ್ಲವೇ ನಾಲ್ಕು ಸಾವಿರ

(ಶ್ರೀ ಸಿ. ಎಂ. ಎಸ್. ಶಾಸ್ತ್ರಿ)

ರೂಪಾಯಿಗಳಿಗೆ ಫ್ಯಾಕ್ಟರಿಗೆ ಒದಗಿಸಿ ಕೊಡುತ್ತೀರಿ. ಇದು ಸರಿಯಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮದ್ರಾಸ್ ರಾಜ್ಯ ಸರಕಾರದವರು ಶ್ರೀಗಂಧದ ಮರವನ್ನು ಒಂದು ಟನ್ನಿಗೆ ಹನ್ನೊಂದು ಸಾವಿರ ರೂಪಾಯಿಗೆ ಮಾರಾಟ ಮಾಡುತ್ತಾರೆ. ಈ ಒಂದು ವ್ಯತ್ಯಾಸ ನೋಡಿದ್ದಾದರೆ ನಾವು ಮಾರಾಟ ಮಾಡತಕ್ಕಂಥ ಸುಮಾರು 2500 ಟನ್‌ಗಳಿಗೆ ಲೆಕ್ಕಮಾಡಿ ನೋಡಿದರೆ ಒಂದು ಕೋಟಿ ರೂಪಾಯಿಗಳು ಈ ಒಂದು ಬಾಬಿನಲ್ಲಿ ನಮಗೆ ನಷ್ಟವಾಗುತ್ತಾ ಇದೆ. ಫ್ಯಾಕ್ಟರಿ ಇಟ್ಟುಕೊಳ್ಳಲಿ, ಬೇಕಾಗಿರತಕ್ಕಂಥ ಸಿಬ್ಬಂದಿ ಇಟ್ಟುಕೊಳ್ಳಲಿ ಕೋಟ್ಯಾನುಕೋಟಿ ರೂಪಾಯಿ ಶ್ರೀಗಂಧದ ಮರವನ್ನು ಹರಾಜು ಮುಖಾಂತರ ವಿಲೇವಾರಿ ಮಾಡಿದರೆ ಒಂದು ಕೋಟಿ ರೂಪಾಯಿ ಹೆಚ್ಚಿಗೆ ಉತ್ಪತ್ತಿಯಾಗುತ್ತದೆ. ಮುಂದೆಯಾದರೂ ಕೂಡ ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಗಮನಕೊಟ್ಟು ಉತ್ಪತ್ತಿ ಸರಿಪಡಿಸಿಕೊಳ್ಳಲಿ ಎಂದು ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ.

ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿದೆ. ನಮ್ಮ ಮಲೆನಾಡಿನ ವನಸಂಪತ್ತು ಶ್ರೇಷ್ಠವಾಗಿರತಕ್ಕಂಥಾದ್ದು ಎಂದು ಹೇಳುತ್ತೇನೆ. ಚಿಕ್ಕಮಗಳೂರು ಶಿವಮೊಗ್ಗ ಮಂಗಳೂರು ಕೊಡಗು ಹಾಗು ಉತ್ತರ ಕನ್ನಡ ಜಿಲ್ಲೆ ಬೆಳಗಾಂ ಈ ಜಿಲ್ಲೆಗಳಿರತಕ್ಕ ವನಸಂಪತ್ತನ್ನು ವೃದ್ಧಿಮಾಡಿ ರಕ್ಷಿಸಿ, ರಾಷ್ಟ್ರೀಯ ಆದಾಯ ಹೆಚ್ಚಿಸಿಕೊಳ್ಳಬಹುದು. ಈ ವನಸಂಪತ್ತನ್ನು ಬೆಳೆಸಲು ಮಾನ್ಯ ಮಂತ್ರಿಗಳು ಗಮನ ಕೊಡುವರೆಂದು ನಂಬಿದ್ದೇನೆ. ಈ ದಿಸೆಯಲ್ಲಿ ನಮ್ಮ ಜಿಲ್ಲೆಯಲ್ಲೂ ಪ್ಲಾಂಟೇಶನ್ ಕೆಲಸ ತೆಗೆದುಕೊಂಡು ಅಲ್ಲಿ ಯುಕ್ಲಿಪ್ಟಿಸ್ ಮರಗಳನ್ನು ಬೆಳೆಸುತ್ತಿದ್ದಾರೆ. ಅದರಿಂದ ಅಷ್ಟಾಗಿ ಪ್ರಯೋಜನವಾಗುತ್ತಿಲ್ಲ. ಇದರಲ್ಲಿ ಲಾಭವಿಲ್ಲ. ಇದೇ ರೀತಿ ಯೋಜನೆ ಅಳವಡಿಸಿಕೊಂಡರೆ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ರಬ್ಬರ್ ಪ್ಲಾಂಟೇಷನ್ ಹೆಚ್ಚಿನ ರೀತಿಯಲ್ಲಿ ಬೆಳೆಸಿದರೆ ಸರಕಾರಕ್ಕೆ ಕೋಟ್ಯಾಂತರ ರೂಪಾಯಿ ಉತ್ಪತ್ತಿ ಬಂದು ಸರಕಾರಕೆ ಇರತಕ್ಕ ಹಣದ ಕೊರತೆ ನಿವಾರಣೆಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಆದರೆ ಮಲೆನಾಡಿನಲ್ಲಿ ವನಸಂಪತ್ತನ್ನು ಸಾಗಿಸುವುಕ್ಕೆ ಬೇಕಾಗಿರತಕ್ಕಂಥ ರೋಡ್ಸ್ ಅಂದರೆ ಸಾರಿಗೆ ವ್ಯವಸ್ಥೆಯನ್ನು ಫಾರೆಸ್ಟ್ ಡಿಪಾರ್ಟಮೆಂಟಿನವರು ಬೆಳೆಸಿಕೊಂಡಿಲ್ಲ. ಬಹು ದಟ್ಟವಾದ ಕಾಡಿನಿಂದ ಸಾವಿರಾರು ರೂಪಾಯಿ ಬೆಲೆ ಬಾಳತಕ್ಕಂಥ ಮರಗಳನ್ನು ತರುವುದಕ್ಕೆ ಕಷ್ಟವಾಗಿದೆ. ಇಂಥ ಮರ ತರುವುದಕ್ಕೆ ಆಗದೇ ಮಳೆಯಲ್ಲಿ ನೆನೆದು ಹಾಳಾಗಿ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಿದೆ. ಮಲೆನಾಡಿನ ಒಳ ಪ್ರದೇಶದಲ್ಲಿ ರೋಡ್ ವ್ಯವಸ್ಥೆ ಸರಿಯಾಗಿ ಮಾಡಬೇಕು. ಈ ರೋಡ್ ವ್ಯವಸ್ಥೆ ಮಾಡುವ ಬಗ್ಗೆ ಪಿ. ಡಬ್ಲ್ಯೂ. ಡಿ. ಯನ್ನು ಕೇಳಿದರೆ ಇದು ನಮಗೆ ಸಂಬಂಧಪಟ್ಟದ್ದಲ್ಲ, ಇದು ಅರಣ್ಯ ಇಲಾಖೆಯ ಕರ್ತವ್ಯ, ಈ ರೋಡ್ ವ್ಯವಸ್ಥೆ ಅವರು ಮಾಡಬೇಕು ಎಂಬುದಾಗಿ ಹೇಳುತ್ತಾರೆ. ಆದುದರಿಂದ ಸಂಬಂಧಪಟ್ಟ ಇಲಾಖೆಯವರು ಈ ವನಸಂಪತ್ತನ್ನು ಕಡಿದು ಸಾಗಿಸುವುದಕ್ಕೆ ರೋಡ್ ವ್ಯವಸ್ಥೆ ಕೂಡಲೇ ಮಾಡಬೇಕೆಂದು ನಾನು ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದೇ ಒಂದು ವಿಷಯದ ಬಗ್ಗೆ ಮಾತನಾಡಿ ನನ್ನ ಭಾಷಣ ಮುಕ್ತಾಯಗೊಳಿಸುತ್ತೇನೆ. ನಮಗೆ ಹಿರಿಯರಾಗಿರತಕ್ಕಂಥ ಮಾನ್ಯ ಚನ್ನಬಸಪ್ಪನವರು ಪೆರಿಯಾಪಟ್ಟಣ ತಾಲ್ಲೂಕಿನಲ್ಲಿ 3,000 ಎಕರೆ ಕಾಡನ್ನು ಇಲ್ಲೀಗಲ್ ಆಗಿ ಒಬ್ಬ ದೊಡ್ಡ ಕೈಗಾರಿಕೋದ್ಯಮಿಗೆ ವಹಿಸಿಕೊಟ್ಟಿರತಕ್ಕಂಥ ವಿಷಯವನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಅಲ್ಲಿ ಇರತಕ್ಕಂಥ ಮರಗಳ ಪರಿಸ್ಥಿತಿ ಏನಾಯಿತು ಗೊತ್ತಾಗುವುದಿಲ್ಲ. ಅಲ್ಲಿಯ ಮರ ಯಾವ ರೀತಿ ಕಳ್ಳ ಸಾಗಾಣಿಕೆಯಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವ ಹಾಗೆ ಇಲ್ಲ. ಈ ರೀ' ಒಂದು ಕಳ್ಳ ಸಾಗಾಣಿಕೆ ಏನು ಇದೆ ಇದನ್ನು ಸಂಬಂಧಪಟ್ಟ ಇಲಾಖೆಯವರು, ಮಂತ್ರಿಗಳು ತಡೆಗಟ್ಟುವುದಕ್ಕೆ ಪ್ರಯತ್ನಮಾಡಿ ಈ ಒಂದು ಲೋಪದೋಷವನ್ನು ಕಡಿಮೆ ಮಾಡುವುದಾದರೆ ನಮಗೆ ಹಣದ ಕೊರತೆಯೇ ಇರಲಾರದು. ಸರಕಾರಕ್ಕೆ ಉತ್ಪತ್ತಿ ಜಾಸ್ತಿಯಾಗುತ್ತದೆ. ನಮ್ಮಲ್ಲಿ ಇರತಕ್ಕಂಥ ವನಸಂಪತ್ತು ಖನಿಜ ಸಂಪತ್ತು ಇದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡು ರಾಜ್ಯದ ಸಂಪತ್ತು ಬೆಳೆಯುವ ಯೋಜನೆ ಮಾಡಬೇಕೆಂದು ಒತ್ತಾಯಮಾಡಿ, ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿರುವ ಸಭಾಧ್ಯಕ್ಷರನ್ನು ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಡಿ. ಪರಮೇಶ್ವರಪ್ಪ (ಹೊನ್ನಾಳಿ).—ಸನ್ಮಾನ್ಯ ಸಭಾಧ್ಯಕ್ಷರೇ, ಸ್ವಾಮಿ, ಭೂಕಂದಾಯವನ್ನು ರದ್ದು ಮಾಡುತ್ತೇವೆಂದು ಚುನಾವಣೆಯ ಮುನ್ನ ಈ ಮಂತ್ರಿ ಮಂಡಳದವರು ಜನತೆಗೆ ವಚನ ಕೊಟ್ಟರು. ಈ ಸಂದರ್ಭದಲ್ಲಿ ಕಂದಾಯ ರದ್ದು ಮಾಡತಕ್ಕಂಥ ವಿಚಾರವಿಲ್ಲ. ಅದನ್ನು ಬೇರೆ ರೀತಿ ಒಂದು ಬದಲಾವಣೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿರತಕ್ಕಂಥ ಅನೇಕ ಮಾನ್ಯ ಸ್ನೇಹಿತರು ಕಂದಾಯ ರದ್ದು ಮಾಡಬೇಕೆಂದು ಹೇಳುತ್ತಾರೆ, ರದ್ದು ಮಾಡಬಾರದು

ಎಂದು ಕೆಲವರು ಹೇಳುತ್ತಾರೆ. ಜನತೆಗೆ ಕೊಟ್ಟಂಥ ವಚನವನ್ನು ಯಾವ ಸರಕಾರವೇ ಆಗಲಿ ಯಾವ ಮುಖಂಡರೇ ಆಗಲಿ ಆಡಿದಂತೆ ಮಾಡಿ ತೋರಿಸಬೇಕು. ಮನಸ್ಸಿನಲ್ಲಿ ಇರದಿದ್ದರೆ ಭರವಸೆ ಕೊಡಬಾರದು. ಭರವಸೆ ಕೊಟ್ಟು ಮಾತನಾಡುವ ಸಮಯದಲ್ಲಿ ಪೂರ್ವಭಾವಿ ಆಲೋಚನೆ ಮಾಡಿ ಭರವಸೆ ಕೊಡಬೇಕು. ಆ ರೀತಿ ಪೂರ್ವಭಾವಿ ಆಲೋಚನೆ ಮಾಡದೇ ಅಧಿಕೃತ ಭರವಸೆ ಕೊಟ್ಟು ಅದನ್ನು ಉಳಿಸಿಕೊಳ್ಳಲು ಆಗುವುದಿಲ್ಲ ಎಂದು ಅಂದರೆ ಅನರ್ಥ ಯಾರಿಗೆ ಆಗುತ್ತದೆ? ಆಡಿದ ಮಾತನ್ನು ನಡೆಸದೇ ಹೋದರೆ ನೀವಾಗಿಯೂ ಯಾವದೇ ಸರಕಾರವಿರಲಿ ಘನತೆ ಗೌರವ ಹೋಗುತ್ತದೆ, ಮಾತಿಗೆ ಚ್ಯುತಿ ಬರುತ್ತದೆ, ಇದರಿಂದ ಅನರ್ಥವಾಗುತ್ತದೆ. ಆದುದರಿಂದ ಕಂದಾಯ ರದ್ದು ಮಾಡಬೇಕು. ಆಡಿದಂತೆ ಮಾಡುವುದು ಕರ್ತವ್ಯ. ನೀವು ಆಡಿದ ಮಾತನ್ನು ಉಳಿಸಿಕೊಳ್ಳಿರಿ ಎಂದು ಸ್ನೇಹಿತರಿಗೆ ಒತ್ತಾಯ ಮಾಡುತ್ತೇನೆ. ಇದನ್ನು ನಿಜವಾಗಿಯೂ ಯೋಚನೆ ಮಾಡಿ. ಇದು ಜೀವಾಳದ ಪ್ರಶ್ನೆಯಾಗಿದೆ. ಮದ್ಯಪಾನ ಕಾನೂನು ರದ್ದು ಮಾಡುವುದರಿಂದ ಬರತಕ್ಕ ಆದಾಯ ವನ್ನು ಅದಕ್ಕೂ ಇದಕ್ಕೂ ಹೊಂದಿಸಿಕೊಂಡು ಸರಿದೂಗಿಸಬಹುದು. ಮದ್ಯಪಾನ ನಿರೋಧವನ್ನು ಸಂಪೂರ್ಣವಾಗಿ ನಡಿಸಲು ಮಾಡಿ. ಇದರಿಂದ ಬರತಕ್ಕ ಆದಾಯವನ್ನು ತುಂಬಿಕೊಂಡು ಕಂದಾಯ ರದ್ದು ಮಾಡುತ್ತೇವೆ ಎಂಬ ಹೇಳಿಕೆ ಈ ಸಭೆಗೆ ಕೊಡಬೇಕೆಂದು ಬಯಸುತ್ತೇನೆ. ಇದರ ಜೊತೆಗೆ ರಿಲೀಫ್ ಕಾಮಗಾರಿ. ಕ್ಷಾಮ ಬಂದಾಗ ಜನತೆಗೆ ನಾವು ಪರಿಹಾರವನ್ನು ಒದಗಿಸು ತ್ತೇವೆಂದು ಅನೇಕ ಸಂದರ್ಭಗಳಲ್ಲಿ ಕಾಮಗಾರಿಗಳನ್ನು ಪ್ರಾರಂಭ ಮಾಡುವಾಗ ಬರ ಬಂತು ಎಂದರೆ ಕೆಲಸ ಪ್ರಾರಂಭ ಮಾಡುವುದಿಲ್ಲ. ಜನತೆ ಹೊಟ್ಟೆಗೆ ಹಿಟ್ಟಿಲ್ಲ, ಕೆಲಸ ಮಾಡುವುದಕ್ಕೆ ಕೆಲಸವಿಲ್ಲ ಎಂದರೆ ಇದನ್ನು ಆಲೋಚನೆ ಮಾಡುತ್ತೇವೆ, ವಿಚಾರ ಮಾಡುತ್ತೇವೆ ಎಂದು ಸರ್ಕಾರದಿಂದ ಡಿವಿಜನಲ್ ಕಮಿಷನರ್, ಡೆಪ್ಯುಟಿ ಕಮಿಷನರ್, ಸಬ್‌ಡಿವಿಜನ್ ಆಫೀಸರ್, ತಹಸೀಲ್ದಾರ್ ತನಕ ಆ ವಿಚಾರ ಮುಟ್ಟಿ ಕೆಲಸ ಮಾಡಿ ಎಂದು ಆರ್ಡರ್ ಮಾಡುವುದರೊಳಗಾಗಿ ಮಳೆ ಬಂತು ಎಂದು ಅಲ್ಲಿಗೇ ಕೆಲಸವನ್ನು ನಿಲ್ಲಿಸುತ್ತಾರೆ. ಕೆಲವು ಕಡೆ ಹತ್ತು ಬುಟ್ಟಿ ಮಣ್ಣು ಹಾಕಿರುತ್ತಾರೆ, ಕೆಲವು ಕಡೆ ಏನೂ ಮಾಡಿರುವುದಿಲ್ಲ. ಇದರಿಂದ ಕ್ಷಾಮ ಪರಿಹಾರವಾಗುವುದಿಲ್ಲ. ಈ ರೀತಿಯಾಗಿ ಅನೇಕ ವರ್ಷಗಳಿಂದ ನಡೆಯುತ್ತಿದೆ. ಜನತಾ ಪ್ರತಿನಿಧಿಗಳು ಸರ್ಕಾರದ ಗಮನಕ್ಕೆ ತಂದರೂ ಕೂಡ ಅರ್ಧಮರ್ಧವಾಗಿರುವ ಕೆಲಸಗಳನ್ನು ಪೂರ್ಣ ಮಾಡದೆ ಇರುವುದರಿಂದ ಅವು ಏತಕ್ಕೂ ಪ್ರಯೋಜನಕ್ಕೆ ಬಾರದೆ ನಿಂತಿವೆ. ಯಾವ ಸಂದರ್ಭದಲ್ಲಿ ಕೆಲಸ ಮಾಡಬೇಕು ಎಂದು ಜನತಾ ಪ್ರತಿನಿಧಿಗಳು ಹೇಳಿದಾಗ ತಕ್ಷಣ ಪರಿಹಾರ ವನ್ನು ಒದಗಿಸದೆ ಕೆಲವು ಕಾಲವಾದ ನಂತರ ಮಾಡಿದರೆ ಅದಕ್ಕೆ ಕ್ಷಾಮ ಪರಿಹಾರ ಕಾರ್ಯವೆಂದು ಹೇಳುವುದರಲ್ಲಿ ಅರ್ಥವಿಲ್ಲ ಎಂದು ನಾನು ಹೇಳಬೇಕಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಹತ್ತು ಕೆಲಸ ಗಳನ್ನು ತೆಗೆದುಕೊಂಡಿದ್ದಾರೆ. ಅವು ಇನ್ನೂ ಪೂರ್ತಿಯಾಗಬೇಕಾಗಿವೆ. ಡಿವಿಜನಲ್ ಕಮಿಷನರ್ ನಮ್ಮ ಜಿಲ್ಲೆಗೆ ಬಂದಾಗ ಅವರಿಗೂ ಇದರ ಬಗ್ಗೆ ಮನವರಿಕೆ ಮಾಡಿದ್ದೇನೆ. ಯಾವ ಕೆಲಸವೂ ಪೂರ್ತಿಯಾಗಿಲ್ಲ. ಇಂಥ ಹತ್ತಾರು ನಿದರ್ಶನಗಳನ್ನು ಬೇಕಾದರೂ ಕೊಡಬಹುದು.

4-30 P.M.

ರೈತರಿಗೆ ರೆವೆನ್ಯೂ ಇಲಾಖೆಯಿಂದ ಬೇಕಾದಷ್ಟು ಉಪಕಾರ ಮಾಡುತ್ತೇವೆಂದು ಹೊಸ ಹೊಸ ವಿಧಾನಗಳನ್ನು ತರುತ್ತಾರೆ. ಪಂಪ್‌ಸೆಟ್‌ಗಳಿಗೆ ಆಯಿಲ್ ಎಂಜಿನ್ ಉಪಯೋಗಿಸುವವರಿಗೆ ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತಾರೆ. ಯಾರು ಯಾರಿಗೆ ಎಷ್ಟು ಕೊಡುತ್ತಾರೆ ಒಂದು ತಾಲ್ಲೂಕಿನಲ್ಲಿ ಹಾಕಿರುವ ಅರ್ಜಿದಾರರಿಗೆಲ್ಲಾ ಕೊಡುವ ಶಕ್ತಿ ಇರುವುದಿಲ್ಲ. ನೂರು ಜನ ಅರ್ಜಿ ಹಾಕಿದರೆ ಐದು ಜನರಿಗೆ ಕೊಡತಕ್ಕ ಶಕ್ತಿ ಇದೆ. ಆಯಿಲ್ ಎಂಜಿನ್‌ಗೆ ಸಬ್ಸಿಡಿ ಕೊಡುತ್ತೇವೆಂದು ಈಗ ಹೊರಟಿದ್ದಾರೆ. ಪಂಪ್‌ಸೆಟ್ ತೆಗೆದುಕೊಳ್ಳಲು ಸಾಲ ಕೊಡಿ ಎಂದರೆ ಸಬ್ಸಿಡಿ ಆಯಿಲ್ ಎಂಜನ್‌ಗೆ ಕೊಡುತ್ತೇವೆಂದು ಹೇಳುತ್ತಾರೆ. ಇಂಥ ಹೊಸ ವಿಧಾನವನ್ನು ಕಂಡು ಹಿಡಿದು ಜನರಿಗೆ ಆಸೆ ತೋರಿಸತಕ್ಕ ವ್ಯವಸ್ಥೆಗೆ ಹೋಗಬಾರದು. ಆಯಿಲ್ ಎಂಜಿನ್‌ಗೆ ಸಬ್ಸಿಡಿ ಕೊಡುತ್ತೇವೆಂದು ಹೇಳುವಾಗ, ಪಂಪ್‌ಸೆಟ್ಟಿಗೆ ಸಬ್ಸಿಡಿ ಕೊಡುತ್ತಿಲ್ಲ. ಬೇರೆ ಪಂಪ್‌ಸೆಟ್‌ಗಳನ್ನು ಉಪಯೋಗಿಸಿ ಬೆಳೆಯುವ ಫಸಲು ಜನಗಳಿಗೆ ಉಪಯೋಗವಾಗುವುದಿಲ್ಲ. ಆಯಿಲ್ ಎಂಜಿನ್ ಉಪಯೋಗಿಸಿದಂಥ ರೈತ ಬೆಳೆದ ಫಸಲು ಮಾತ್ರ ಜನರಿಗೆ ಉಪಯೋಗ ಆಗುತ್ತದೆಯೇ? ಇಂಥ ತಾರತಮ್ಯ ಮನೋಭಾವ ಇರಬಾರದು.

ಅಮೃತಮಹಲ್ ಇಲಾಖೆಯಲ್ಲಿ ಇವತ್ತು ಸೇರುವೆಗಾರರ ಕೈಯಲ್ಲಿ ನಾಲ್ಕಾರು ಸಾವಿರ ಎಕರೆ ಭೂಮಿ ನಮ್ಮ ತಾಲ್ಲೂಕಿನಲ್ಲಿದೆ. ಈ ಜಮೀನನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಭೂಮಿ ಇಲ್ಲದೆ ಇರುವವರಿಗೆ ಕೊಟ್ಟು ಅದರ ಮೂಲಕ ನಮ್ಮ ಆಹಾರದ ಉತ್ಪತ್ತಿಯನ್ನು ಹೆಚ್ಚು ಮಾಡ ಬೇಕು ಎನ್ನುವ ಯೋಚನೆ ಇದೆ ಎಂದು ತಿಳಿದಿದ್ದೇನೆ. ಆದರೆ ನಮ್ಮ ಮಾನ್ಯ ಸಚಿವರಾಗಿರತಕ್ಕ ದೇವರಾಜ ಅರಸಿನವರು, ಭೂಮಿಯನ್ನು ವಾಪಸು ತೆಗೆದುಕೊಂಡು ಅಮೃತಮಹಲ್ ಡಿಪಾರ್ಟ್

(ಶ್ರೀ ಡಿ. ಪರಮೇಶ್ವರಪ್ಪ)

ಮೆಂಟ್ ವಶದಲ್ಲಿ ಇದ್ದ ಭೂಮಿಯನ್ನು ತಾಲ್ಲೂಕು ಬೋರ್ಡ್‌ಗೆ, ಪಂಚಾಯಿತಿಗಳಿಗೆ ಕೊಟ್ಟು ಅವರಿಂದ ಏನೋ ಕೆಲಸ ಮಾಡಿಸುತ್ತೇವೆ ಎನ್ನುವ ಹೊಸ ವಿಧಾನದ ಮಾತನ್ನು ಹೇಳಿದ್ದಾರೆ. ತಾಲ್ಲೂಕು ಬೋರ್ಡ್, ವಿಲೇಜ್ ಪಂಚಾಯಿತಿಗಳೇನಾದರೂ ಭೂಮಿಯನ್ನು ತೆಗೆದುಕೊಂಡು ಅವರೇ ಅದನ್ನು ಬೇಸಾಯ ಮಾಡಿ ಆಹಾರದ ದುಸ್ಥಿತಿಯನ್ನು ರಾಜ್ಯದಲ್ಲಿ ಹೋಗಲಾಡಿಸುತ್ತಾರೆ ಎಂದರೆ ಅಡ್ಡಿ ಇಲ್ಲ. ಆದರೆ ಇದು ಸಾಧ್ಯವಾಗದ ವಿಷಯ. ಒಬ್ಬ ಪಡೆದಿರತಕ್ಕ ನಾಲ್ಕಾರು ಸಾವಿರ ಎಕರೆ ಭೂಮಿಯನ್ನು ಭೂಮಿ ಇಲ್ಲದವರಿಗೆ ನಾಲ್ಕು, ಐದು, ಆರು ಎಕರೆಗಳಂತೆ ಕೊಟ್ಟರೆ ಅನುಕೂಲ ವಾಗುತ್ತದೆ. ನಿಜವಾಗಿ ಯಾರು ಭೂಮಿ ಇಲ್ಲದವರಿದ್ದಾರೆ ಎನ್ನುವುದನ್ನು ಪರಿಶೀಲನೆ ಮಾಡಿ, ನ್ಯಾಯವಾಗಿರುವುದಕ್ಕೆ ಮನ್ನಣೆಯನ್ನು ಕೊಟ್ಟು, ಅಂಥವರಿಗೆ ಭೂಮಿಯನ್ನು ಒದಗಿಸಿಕೊಡಬೇಕು, ಈ ಮೂಲಕ ಸರ್ಕಾರ ಸಹಾಯ ಮಾಡಬೇಕು ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[Mr. DEUPTY SPEAKER in the Chair]

† ಶ್ರೀ ಬಿ. ರಾಚಯ್ಯ.—ಸನ್ಮಾನ್ಯ ಸಭಾಪತಿಗಳೇ, ಕಳೆದ ಎರಡು ದಿವಸಗಳಿಂದ ರಾಜಸ್ವ ಮತ್ತು ಅರಣ್ಯ ಇಲಾಖೆಗಳಿಗೆ ಸಂಬಂಧಪಟ್ಟ ಮುಂಗಡ ಪತ್ರದ ಮೇಲೆ ಮಾತನಾಡಿಥಂಥ ಮಾನ್ಯ ಸದಸ್ಯರೆಲ್ಲರಿಗೂ ಕೂಡ ಮೊದಲನೆಯದಾಗಿ ನಾನು ಕೃತಜ್ಞನಾಗಿದ್ದೇನೆ. ಈ ಮುಂಗಡ ಪತ್ರದ ಮೇಲೆ ಬಹಳ ಉಪಯುಕ್ತವಾಗಿರುವ, ರಚನಾತ್ಮಕವಾಗಿರುವ ಟೀಕೆಗಳನ್ನು ಮಾಡಿದ್ದಾರೆ. ಅವುಗಳಲ್ಲಿ ಕೆಲವನ್ನು ಯೋಗ್ಯರೀತಿಯಲ್ಲಿ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತೆ ಕೆಲವು ತಪ್ಪು ಭಾವನೆಗಳಿಂದ ಮಾಡಿದಂಥ ಟೀಕೆಗಳಾಗಿವೆ. ಈ ಮನವಿಗಳ ಮೇಲೆ ಮಾನ್ಯ ಸದಸ್ಯರು ಮಂಡಿಸಿರತಕ್ಕ ಖೋತಾ ಸೂಚನೆಗಳು ಮತ್ತು ಮಾಡಿರತಕ್ಕ ಭಾಷಣಗಳು ಇವುಗಳನ್ನು ಸ್ಥೂಲವಾಗಿ ನಾನು ವಿಂಗಡಣೆ ಮಾಡಿಕೊಂಡಿದ್ದೇನೆ. ಅದರಲ್ಲಿ ಪ್ರಾಮುಖ್ಯವಾಗಿ ಕಂಡುದು, ಭೂಕಂದಾಯವನ್ನು ರದ್ದು ಮಾಡಬೇಕು ಮತ್ತೆ ಕಳೆದ ಎರಡು ವರ್ಷಗಳಲ್ಲಿ ಎಲ್ಲಿ ಬೆಳೆ ನಾಲ್ಕಾಣೆ ಗಿಂತ ಕಡಮೆ ಇದೆ ಅಂಥ ಕಡೆ ಕಂದಾಯವನ್ನು ಪೂರ್ತಿ ಮಾಫಿ ಮಾಡಬೇಕು, ಹಾಗೆಯೇ ಜಮೀನು ಗಳನ್ನು ವಿಲೇವಾರಿ ಮಾಡತಕ್ಕ ಕಾಲದಲ್ಲಿ ಸ್ವಲ್ಪಮಟ್ಟಿಗೆ ಅಧಿಕಾರವನ್ನು ಬಿಟ್ಟು ತಮಗೆ ಬೇಕಾದ ವರಿಗೆ ಮಾಡಿಕೊಂಡಿರತಕ್ಕುದು ಒಂದು ಟೀಕೆ; ಕೆಲವು ಕಡೆ ಹಳ್ಳಿಗಳಲ್ಲಿ ಸರ್ವೆ ಆಗಬೇಕಾಗಿದೆ ಮತ್ತು ಅಕ್ರಮವಾಗಿ ಪ್ರವೇಶ ಮಾಡಿಕೊಂಡಿರುವ ಭೂಮಿಯ ಸರ್ವೆ ನಡೆಸಬೇಕಾಗಿದೆ; ಇನ್ನು ಕೆಲವು ಸಂದರ್ಭಗಳಲ್ಲಿ ಅನೇಕ ಉದ್ದೇಶಗಳಿಗೆ ಬೇಕಾಗಿರತಕ್ಕ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳ ತಕ್ಕ ಕಾನೂನು ಬಹಳ ಹಳೆಯ ಕಾಲದ ಕಾನೂನಾಗಿ ಎಷ್ಟು ತ್ವರಿತವಾಗಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳಬೇಕಾಗಿತ್ತೋ ಅಷ್ಟು ತ್ವರಿತವಾಗಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಮತ್ತೆ ಭೂಮಿಯನ್ನು ಉಳುಮೆ ಮಾಡುವವರಿಗೇ ಕೊಡುತ್ತೇವೆ ಎಂದು ವಿಫಲರಾಗಿದ್ದಾರೆ. ರೆವೆನ್ಯೂ ಇಲಾಖೆ ಭಾರವಾಗಿದೆ; ಅದರಲ್ಲೂ ಡಿವಿಜನಲ್ ಕಮಿಷರ್ ಆಫೀಸು, ಸಬ್‌ಡಿವಿಜನ್ ಆಫೀಸರುಗಳ ಹುದ್ದೆಗಳನ್ನು ರದ್ದು ಮಾಡಬೇಕು ಎನ್ನುವುದು; ರಿಜಿಸ್ಟ್ರೇಷನ್‌ಗೆ ಸಂಬಂಧಪಟ್ಟ ಹಾಗೆ ಸ್ಟಾಂಪ್‌ಗಳು ಸಾಕಷ್ಟು ಮಟ್ಟದಲ್ಲಿ ಸಿಕ್ಕುತ್ತಿಲ್ಲ, ನಾನ್ ಜುಡಿಷಿಯಲ್ ಸ್ಟ್ಯಾಂಪ್ಸ್ ಅಥವಾ ಕಾಪಿ ಮಾಡತಕ್ಕ ಕಾಗದಗಳಾಗಲೀ ಸಾಕಷ್ಟು ಪ್ರಮಾಣದಲ್ಲಿ ಕ್ಕುತ್ತಿಲ್ಲ ಎನ್ನುವುದು; ರಿಜಿಸ್ಟ್ರೇಷನ್ ಮಾಡತಕ್ಕ ಕಾಲದಲ್ಲಿ ಬಹಳ ನಿಧಾನವಾಗುತ್ತಿದೆ ಎನ್ನುವುದು, ಅಲ್ಲದೆ ಎಲ್ಲೆಲ್ಲಿ ಪರಿಹಾರ ಕಾರ್ಯಗಳನ್ನು ತೆಗೆದು ಕೊಳ್ಳಬೇಕಾಗಿತ್ತೋ ಅಂಥ ಕಡೆ ಸಾಕಷ್ಟು ಪ್ರಮಾಣದಲ್ಲಿ ತೆಗೆದುಕೊಂಡಿರುವುದಿಲ್ಲ, ತೆಗೆದು ಕೊಂಡರೂ ಕೂಡ ಕೆಲವು ಕಡೆ ದುರುಪಯೋಗವಾಗಿದೆ ಎನ್ನುವುದು, ಮುಜರಾಯಿಗೆ ಸಂಬಂಧಪಟ್ಟ ಹಾಗೆ ಆ ಇಲಾಖೆಗೆ ಒಳಪಟ್ಟ ದೇವಸ್ಥಾನಗಳಲ್ಲಿ ಸಾಕಷ್ಟು ಉತ್ಪತ್ತಿಯನ್ನು ಪಡೆಯುತ್ತಿಲ್ಲ, ಅದಕ್ಕೆ ಸಂಬಂಧಪಟ್ಟ ಜಮೀನುಗಳೇನಿವೆ ಆ ಗೇಣಿದಾರರಿಗೆ ಸಾಕಷ್ಟು ರಕ್ಷಣೆ ಕೊಟ್ಟಿಲ್ಲ ಎಂದು ಸುಮಾರು 12 ಭಾಗಗಳಾಗಿ ಈ ಭಾಷಣಗಳನ್ನು, ಖೋತಾ ಸೂಚನೆಗಳನ್ನು ವಿಂಗಡಣೆ ಮಾಡಿಕೊಂಡಿದ್ದೇನೆ. ಬಹುಶಃ ಚುನಾವಣೆ ನಡೆಯುವುದಕ್ಕೆ ಮುಂಚೆ ಭೂಕಂದಾಯವನ್ನು 1965-66 ಮತ್ತು 1966-67 ನೆಯ ಸಾಲುಗಳಿಗೆ ವಸೂಲುಮಾಡಬಾರದೆಂದು ಹೇಳಿದ್ದರೆ, ಚುನಾವಣೆ ಉದ್ದೇಶದಿಂದಲೇ ಅದನ್ನು ಮಾಡಿದ್ದರೇನೋ, ಚುನಾವಣೆಯಾದನಂತರ ಈಗ ಒಮ್ಮೆಲೆ ಭೂಕಂದಾಯ ವಸೂಲುಮಾಡಿ ಎಂದು ಸರಕಾರದವರು ಹುಕುಂ ಕೊಟ್ಟಿದ್ದಾರೆ ಎಂದು ಹೇಳಿದರು. ಇದರಿಂದ ನಿಜವಾಗಿಯೂ ಕೂಡ ಅವರ ಮಾತನ್ನು ಕಳೆದುಕೊಂಡಿದ್ದಾರೆ ಎಂದು ಹೇಳಿದರು. ಬಹುಶಃ 1965-66 ರಲ್ಲಿ ಮಳೆಯಾಗಿಲ್ಲ, ಕೆಲವು ಕಡೆ ನಾಲ್ಕಾಣೆಗಿಂತ ಬೆಳೆ ಕಡಮೆಯಾಗಿದೆ, ಕೆಲವು ಕಡೆ 6 ಆಣೆ ಬೆಳೆಯಾಗಿರಬಹುದು, ಹೀಗೆ

ಸ್ವಲ್ಪಮಟ್ಟಿಗೆ ಬೆಳೆಗೆ ನಷ್ಟವಾಗಿದೆ, ಅಂಥ ಸಂದರ್ಭಗಳಲ್ಲಿ ಆಯಾ ಭಾಗಗಳಲ್ಲಿರುವ ಕಾನೂನನ್ನು ಅನುಸರಿಸಿ ರಿಯಾಯಿತಿ ಕೊಟ್ಟಿದ್ದೇವೆ. ಬಹುಶಃ ಹಿಂದೆ ಹೇಳಿದಹಾಗೆ ಹೈದರಾಬಾದು ಮತ್ತು ಮುಂಬಯಿ ಕರ್ಣಾಟಕಗಳಲ್ಲಿ ಏನು ಇದಕ್ಕೆ ಸಂಬಂಧಪಟ್ಟ ನಿಯಮಾವಳಿ ಇವೆ, ಅವುಗಳ ಪ್ರಕಾರ ಖುಷ್ಕಿ ಜಮೀನಿನಲ್ಲಿ 4 ಆಣೆಗಿಂತ ಕಡಮೆ ಇದ್ದರೆ ಕಂದಾಯದ ಸ್ವಲ್ಪ ಭಾಗವನ್ನು ವಜಾಮಾಡುವುದಕ್ಕೆ ಅವಕಾಶವಿದೆ. ಇದೇ ರೀತಿಯಾದ ಕಾನೂನನ್ನು ಅನುಸರಿಸಿ ಹಳೇ ಮೈಸೂರು ಭಾಗದಲ್ಲಿ 4 ಆಣೆಗಿಂತ ಕಡಮೆ ಬೆಳೆಯಾಗಿರುವುದಕ್ಕೆ ರಿಯಾಯಿತಿ ತೋರಿಸಬೇಕೆಂದು ಕೇಳಿದರು. ಬಹುಶಃ ಈಗಾಗಲೇ ಇದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಈ ವಿಷಯದಲ್ಲಿ ವಿವರ ಕಳಿಸುವಂತೆ ಹೇಳಿದೆ. ಎಲ್ಲಿ ಸಾಧ್ಯವಿದೆ ಅಲ್ಲಿ ಇದೇ ರೀತಿ ರಿಯಾಯಿತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಭೂಕಂದಾಯವನ್ನು ರದ್ದು ಮಾಡಬೇಕೆಂಬ ಸೂಚನೆ ಇದೆ. ಇದು ಬಹುಶಃ ಬಹಳ ವರ್ಷಗಳಿಂದಲೂ ಕೂಡ ಅನೂಚಾನವಾಗಿ ನಡೆದುಬಂದ ಒಂದು ಪದ್ಧತಿ. ಭೂಮಿಯಿಂದ ಬರುವ ಉತ್ಪತ್ತಿ ಸರಕಾರಕ್ಕೆ ಹೆಚ್ಚಿನ ಆದಾಯವಾಗಿದ್ದ ಕಾಲದಲ್ಲಿ ಒಂದು ದೃಷ್ಟಿಯಿಂದ ಅದನ್ನು ಬಹಳಮಟ್ಟಿಗೆ ಉಳಿಸಿಕೊಂಡು ಬಂದಿದ್ದಾರೆ. ಈಗ ಈ ಕಂದಾಯವನ್ನು ವಜಾಮಾಡುವುದರಿಂದ ಸರಕಾರಕ್ಕೆ ಅಷ್ಟೇನೂ ನಷ್ಟವಾಗುವುದಿಲ್ಲ. ಆದುದರಿಂದ ಈ ಹಳೆಯ ಪದ್ಧತಿಯನ್ನು ತೆಗೆದುಹಾಕಿ ಬೇರೆ ರೂಪದಲ್ಲಿ ಕಂದಾಯದ ನಷ್ಟವೇನಿದೆ ಅದನ್ನು ಸರಿದೂಗಿಸಬೇಕು ಎಂಬುದು ಸರಕಾರದ ಉದ್ದೇಶ. ಎಂದು ಅನೇಕ ಸದಸ್ಯರು ಹೇಳಿದ ಹಾಗೆ ಇದನ್ನು ಪೂರ್ಣವಾಗಿ ತೆಗೆಯಬಾರದು ಎಂದು ಕಂಡುಬಂದಿದೆ, ಮತ್ತು ಈಗಿರುವ ರೀತಿಯಲ್ಲಿ ಸ್ವಲ್ಪ ಮಾರ್ಪಾಡುಮಾಡಿ ಇದೇ ಹಣವನ್ನು ಸರಿದೂಗಿಸುವುದಕ್ಕೆ ವ್ಯವಸಾಯದ ವರಮಾನ ತೆರಿಗೆ ಹಾಕಬಹುದು ಎಂದು ಕೆಲವು ಸೂಚನೆಗಳು ಕೂಡ ಬಂದಿವೆ. ಒಟ್ಟಿನಲ್ಲಿ ಈ ಒಂದು ಪದ್ಧತಿಯನ್ನು ತೆಗೆದರೆ ಸಾಕಷ್ಟು ಬೇರೆ ರೀತಿಯಲ್ಲಿ ಪರಿಹಾರ ನೀಡಬೇಕೆಂಬುದು ನಮ್ಮ ಆಶಯವಾಗಿದೆ. ಈ ದೃಷ್ಟಿಯಿಂದ ಮಂತ್ರಿಮಂಡಲದ ಉಪಸಮಿತಿಯ ವರದಿಯನ್ನು ಗಮನಿಸಿ ಸರಕಾರ ಸೂಕ್ತ ಕ್ರಮ ಕೈಕೊಳ್ಳಬೇಕಾಗಿದೆ. ಬಹುಶಃ ಇದು ಮಂತ್ರಿಮಂಡಲದ ಮುಂದೆ ಬರಬೇಕಾದರೆ ಕೆಲವಾರು ಪ್ರೊಸೀಜರಲ್ ಮ್ಯಾಟರ್ಸ್‌ನಿಂದ ನಿಧಾನವಾಗಿದೆಯೇ ವಿನಾ ಕೇವಲ ಚುನಾವಣೆಗೆ ಅಥವಾ ಜನರ ಮನಸ್ಸನ್ನೊಲಿಸಿಕೊಳ್ಳುವುದಕ್ಕೆ ಒಂದು ಆಶ್ವಾಸನೆ ಕೊಟ್ಟರು ಎಂದು ಭಾವಿಸಬಾರದು. ಹಿಡುವಳಿದಾರರಿಗೆ ಅದರಲ್ಲೂ ಕೂಡ ಸಮಾಜವಾದದಲ್ಲಿ ನಂಬಿಕೆ ಇರುವವರಿಗೆ ಯಾರಿಗೆ ಈ ತೆರಿಗೆಯನ್ನು ಹೊರುವುದಕ್ಕೆ ಸಾಧ್ಯವಿಲ್ಲ ಎಂದು ನಾವು ಭಾವಿಸಿದ್ದೇವೆ ಮತ್ತು ತಾವು ಹೇಳುತ್ತಿದ್ದೀರಿ ಅಂಥವರಿಗೆ ಇದರಿಂದ ರಿಯಾಯಿತಿ ಕೊಡಬೇಕು ಎಂಬುದೇ ಸರಕಾರದ ಉದ್ದೇಶವಾಗಿದೆ. ಇದನ್ನು ಇವತ್ತು ತೆಗೆಯುತ್ತೇವೆ ಎಂದು ಹೇಳುವುದಕ್ಕೆ ಬದಲಾಗಿ ಇದು ಮಂತ್ರಿಮಂಡಲದ ಮುಂದಿರುವುದರಿಂದ ಇಲ್ಲಿ ಕೊಟ್ಟಿರುವ ಸೂಚನೆಯನ್ನು ಗಮನಿಸಿ ಬಹುಶಃ ಆದಷ್ಟು ಬೇಗ ಇರುವ ಹಳೆಯ ಪದ್ಧತಿಯನ್ನು ರದ್ದುಮಾಡಲು ಸರಕಾರ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತದೆ, ಅದರಲ್ಲೇನೂ ಅನುಮಾನಪಡಬೇಕಾಗಿಲ್ಲ ಎಂದು ವಿರೋಧ ಪಕ್ಷದ ನಾಯಕರಿಗೆ ಅಧ್ಯಕ್ಷರ ಮೂಲಕ ತಿಳಿಸುತ್ತಿದ್ದೇನೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ತೀರ್ಮಾನ ತೆಗೆದುಕೊಳ್ಳುವವರೆಗೆ ಈಗ ಕಂದಾಯ ಯಾವುದನ್ನೂ ಹಿಂದಿನಿಂದ ವಸೂಲುಮಾಡುವುದಿಲ್ಲ ಎಂದು ಆಶ್ವಾಸನೆ ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಯಾವ ದಿವಸದಿಂದ ಕಾನೂನು ಜಾರಿಗೆ ಬರುತ್ತದೆ ಆ ದಿವಸದಿಂದ ಆದರ ಪ್ರಕಾರ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈಗಿರುವ ನಿಯಮಗಳ ಪ್ರಕಾರ ಹಳೆಯ ಬಾಕಿಯೇನಿದೆ ಅದನ್ನು ಮೊದಲೇ ಹೇಳಿದಂತೆ ಎಲ್ಲಿ ಬೆಳೆಗೆ ಮಳೆ ಅಭಾವದಿಂದ ಕಾನೂನು ಪ್ರಕಾರ ರಕ್ಷಣೆ ಕೊಡಬೇಕು ಅಂಥಕಡೆ ಬಿಟ್ಟು ಉಳಿದ ಕಡೆ ಬಾಕಿಯಿರುವುದನ್ನು ಎಲ್ಲರೂ ಕೊಡಬೇಕು, ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ. ಯಾರು ಹಳೇಬಾಕಿಯನ್ನು ಬೇಗ ಕೊಡುವರೋ ಅವರಿಗೆ ಮುಂದೆ ಬರುವ ಸೌಲಭ್ಯವನ್ನು ಮೊದಲು ಅವರಿಗೆ ಸಂಬಂಧಪಟ್ಟ ತಾಲ್ಲೂಕುಗಳು ಮತ್ತು ಜಿಲ್ಲೆಗಳಲ್ಲಿ ಕೊಡಬೇಕೆಂದಿದೆ.

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮೊದಲಿದ್ದಷ್ಟೇ ಇಡುವುದಕ್ಕೆ ಪ್ರಯತ್ನ ಮಾಡಿದೆಯೋ ಅಥವಾ ಹೆಚ್ಚು ಮಾಡಿದೆಯೋ ?

ಶ್ರೀ ಬಿ. ರಾಚಯ್ಯ.—ರಿವೈಜ್ಡ್ ರೇಟ್ ಇರುವುದನ್ನು ಸರ್ವೆ ಸೆಟ್ಲಮೆಂಟ್ ಆಕ್ಟ್ ಆದಮೇಲೆ ಈ ಸಭೆ ಒಪ್ಪಿದೆ ಮತ್ತು ಅದು ಜಾರಿಯಲ್ಲಿದೆ. ಮತ್ತೊಂದು ರೀತಿಯ ಕಾನೂನು ಬರುವವರೆಗೆ ಈಗಿರುವ ಕಾನೂನು ಜಾರಿಯಲ್ಲಿರುವುದರಿಂದ ಈಗ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ನಾಗಪ್ಪ ಬಸಪ್ಪ.—ರೀಕ್ಲಾಸಿಫಿಕೇಷನ್ ಪ್ರಕಾರ ಹಾಕಿರುವ ಕಂದಾಯ ವಸೂಲು ಮಾಡಬೇಕೆಂದಿದೆಯೋ ?

ಶ್ರೀ ಬಿ. ರಾಚಯ್ಯ.—ಅದು 1-7-65 ರಿಂದ ಜಾರಿಗೆ ಬಂದಿದೆ, ಅದರಂತೆಯೇ ವಸೂಲು ಮಾಡುವುದು. ಅದರ ಜೊತೆಗೆ ಮೂವತ್ತಮೂರನೆಯ ಒಂದು ಭಾಗ ಸರ್ಛಾರ್ಜ್ ವಸೂಲು ಮಾಡಬೇಕು ಎಂದು ಈ ಸಭೆ ತೀರ್ಮಾನದ ಪ್ರಕಾರ ಜಾರಿಗೆ ಕೊಡಲಾಗಿದೆ.

ಶ್ರೀ ಟಿ. ಪಿ. ಬೋರಯ್ಯ (ಬನ್ನೂರು).—ಈಗ ಜಿಲ್ಲಾಧಿಕಾರಿಗಳಿಂದ ವರದಿ ಕೇಳಿದೆ, ಅದು ಬಂದಮೇಲೆ ತೀರ್ಮಾನಮಾಡಲಾಗುವುದು ಎಂದು ಹೇಳಿದ. 4 ಆಣೆಗಿಂತ ಕಡಮೆ ಬೆಳೆಯಾಗಿರುವ ಕಡೆ ಆ ವರದಿ ಬರುವವರೆಗೆ ಕಂದಾಯದ ವಸೂಲಿಯನ್ನು ತಡೆಹಿಡಿಯುತ್ತೀರಾ ?

ಶ್ರೀ ಬಿ. ರಾಚಯ್ಯ.—ಕೆಲವು ಕಡೆ 4 ಆಣೆಗಿಂತ ಕಡಮೆ ಬೆಳೆಯಾಗಿರುವುದನ್ನು ಡೆಪ್ಯುಟಿ ಕಮೀಷನರು ನೋಟಿಫೈ ಮಾಡಿದ್ದಾರೆ. ಮುಂದಿನವರ್ಷ ಅದನ್ನು ವಸೂಲುಮಾಡಬೇಕು. ಇದು ಹಳೇ ಮೈಸೂರಿನಲ್ಲಿರುವ ಪದ್ಧತಿ. ಮದ್ರಾಸು ಮತ್ತು ಹೈದರಾಬಾದುಗಳಲ್ಲಿರುವ ನಿಯಮಗಳನ್ನು ಹಳೆಯ ಮೈಸೂರಿಗೂ ಅನ್ವಯಿಸಿ ಕೊಡುವುದಕ್ಕೆ ಸಾಧ್ಯವಿರುವ ಸೌಲಭ್ಯವನ್ನು ಕೊಡುವುದಾಗಿ ಹೇಳಿದೆ.

Sri DIGAMBER RAO BALAWANT RAO (Aland).—It has appeared in the papers that land revenue will be collected this year also. May I know whether it is a fact ?

Sri B. RACHAIAH.—Yes. Till it is abolished, the land revenue will have to be collected.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಇಡೀ ತಾಲ್ಲೂಕಿನಲ್ಲೇ ಕಂದಾಯ ವಸೂಲಾಗದಿದ್ದರೆ ಆ ತಾಲ್ಲೂಕಿಗೆ ಸೌಲತ್ತು ದೊರಕುವುದಿಲ್ಲವೇ ?

ಶ್ರೀ ಬಿ. ರಾಚಯ್ಯ.—ಮುಂದೆ ಕೊಡಬೇಕೆಂದಿರುವ ಕಂದಾಯದ ರಿಯಾಯಿತಿ ಹಳೆಯ ಬಾಕಿ ಕೊಡುವವರೆಗೆ ಸಿಕ್ಕುವುದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ (ಪಾಂಡವಪುರ).—ರೀ ಸೆಟ್ಲಮೆಂಟ್ ಆದಮೇಲೆ ಸರ್ಛಾರ್ಜ್ ಸೇರಿಸಿ ವಸೂಲು ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮೂವತ್ತಮೂರನೆಯ ಒಂದುಭಾಗ ಸರ್ಛಾರ್ಜನ್ನು 66-67 ನೆಯ ಸಾಲಿಗೆ ವಿರೋಧ ಪಕ್ಷದ ನಾಯಕರು ಒಪ್ಪಿದಂತೆ ವಸೂಲುಮಾಡುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ನಾವು ಸಭಾತ್ಯಾಗ ಮಾಡಿದ್ದಾಗ ಆದುದಕ್ಕೆ ನಾವು ಭಾಗಿಗಳಲ್ಲ.

ಶ್ರೀ ಬಿ. ರಾಚಯ್ಯ.—ಈಗ ತೀರ್ಮಾನ ಆದಷ್ಟು ಬೇಗ ತೆಗೆದುಕೊಳ್ಳಬೇಕು, ಎಂಬುದು ಸರಕಾರದ ಉದ್ದೇಶವಾಗಿರುವುದರಿಂದ ಮಾನ್ಯ ಸದಸ್ಯರಷ್ಟು ಕಾತುರರಾಗಿ ಬಡವರಿಗೆ, ರೈತರಿಗೆ ಕಂದಾಯ ಕೊಡಲು ಸಾಧ್ಯವಿಲ್ಲದಿರುವವರಿಗೆ ರಿಯಾಯಿತಿ ಕೊಡಬೇಕು ಎಂದು ಹೇಳುತ್ತಿದ್ದಾರೋ ಸರಕಾರವೂ ಕೂಡ ಅಷ್ಟೇ ಕಾತರವಾಗಿದೆ ಎಂದು ಹೇಳಿದರೆ ಸಾಕು ಎಂದು ಮಾನ್ಯ ಸಭೆಯಲ್ಲಿ ನಿವೇದಿಸುತ್ತಿದ್ದೇನೆ.

ಶ್ರೀ ಪಿ. ವೆಂಕಟಗಿರಿಯಪ್ಪ.—65-66 ಮತ್ತು 66-67 ಇವೆರಡು ಸಾಲುಗಳ ಕಂದಾಯವನ್ನೂ ಒಟ್ಟಿಗೆ ಒಂದೇ ಸಾರಿ ವಸೂಲು ಮಾಡಬೇಕೆಂದು ಹೇಳುವುದರ ಬದಲು ಒಂದು ವರ್ಷದ ಕಂದಾಯವನ್ನು ಮಾತ್ರ ವಸೂಲು ಮಾಡಿ ಬಾಕಿ ಉಳಿದದ್ದನ್ನು ಮುಂದಿನ ಸಾಲಿನಲ್ಲಿ ವಸೂಲು ಮಾಡುವಂತೆ ಸರಕಾರ ಸೂಚನೆ ಏಕೆ ಕೊಡಬಾರದು ?

ಶ್ರೀ ಬಿ. ರಾಚಯ್ಯ.—ಒಂದೇಸಾರಿ ವಸೂಲು ಮಾಡಬೇಕೆಂದು ಹೇಳುತ್ತಿಲ್ಲ. ಇದನ್ನು ನಾಲ್ಕು ಕಂತುಗಳಲ್ಲಿ ಕೊಡಬಹುದು ಎಂದು ಈಗಾಗಲೇ ಸರಕಾರದವರು ಸೂಚನೆಗಳನ್ನು ಕಳುಹಿಸಿದ್ದಾರೆ.

ಶ್ರೀ ಹೆಚ್. ಎನ್. ನಂಜೇಗೌಡ.—ಸರಕಾರ ಕಂದಾಯವನ್ನು ಮಾಫಿ ಮಾಡುತ್ತಾರೆಂದು ಹಳ್ಳಿಗಳಲ್ಲಿರುವ ಜನರೆಲ್ಲ ನಂಬಿದ್ದಾರೆ. ಹೀಗಿರುವ ಕಾಲದಲ್ಲಿ ಎರಡು ವರ್ಷಗಳ ಕಂದಾಯವನ್ನೂ ಒಟ್ಟಿಗೆ ವಸೂಲು ಮಾಡುತ್ತೇವೆಂದು ಹೇಳಿದರೆ ಜನರಿಗೆ ತೊಂದರೆಯಾಗುವುದಿಲ್ಲವೇ ಎಂದು ಸರಕಾರದ ಗಮನಕ್ಕೆ ಇಲ್ಲಿ ತರಬೇಕಾಗಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಜನರಿಂದ ಓಟು ಪಡೆಯಲು ಚುನಾವಣೆಗೆ ಮುಂಚೆ ಸರಕಾರ ಹೇಳುತ್ತಿತ್ತು.

ಶ್ರೀ ಬಿ. ರಾಚಯ್ಯ.—ಓಟು ಕ್ಯಾಚು ಮಾಡುವುದಕ್ಕಾಗಿ ಕಾಂಗ್ರೆಸ್ಸಿನವರು ಎಂದೂ ಕಂದಾಯ ರದ್ದು ಮಾಡುತ್ತೇವೆಂದು ಹೇಳಿರಲಿಲ್ಲ.

ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ರೆವಿನ್ಯೂ ಮಂತ್ರಿಗಳು ನಾಲ್ಕು ಕಂತುಗಳಲ್ಲಿ ಕಂದಾಯ ವಸೂಲು ಮಾಡುತ್ತೇವೆ ಎಂದು ಹೇಳಿದರು. ಈಗಾಗಲೇ ರೈತರು ಬಹಳ ಕಂಗೆಟ್ಟಿದ್ದಾರೆ. ನಾಲ್ಕು ಕಂತುಗಳು ಎಂದರೆ ಆರು ತಿಂಗಳಿಗೊಂದು ಕಂತೇ ಅಥವಾ ವರ್ಷಕ್ಕೆ ಒಂದು ಕಂತೇ ಎನ್ನುವುದನ್ನು ತಾವು ಇಲ್ಲಿ ಸ್ವಲ್ಪ ಸ್ಪಷ್ಟಪಡಿಸಬೇಕು.

ಶ್ರೀ ಬಿ. ರಾಚಯ್ಯ.—ನಾಲ್ಕು ಕಂತುಗಳು ಎಂದರೆ ಜನವರಿ, ಫೆಬ್ರವರಿ, ಮಾರ್ಚಿ ಹಾಗೂ ಏಪ್ರಿಲ್ ತಿಂಗಳ ಕಂತುಗಳು. ಇವು ಮಾಮೂಲಿ ಕಂತುಗಳು ಈ ರೀತಿ ನಾಲ್ಕು ಕಂತುಗಳಲ್ಲಿ ವಸೂಲು ಮಾಡಿ ತೆಗೆದುಕೊಳ್ಳಬೇಕೆಂದು ಇದೆ.

ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಸರ್‌ಚಾರ್ಜು ಶೇಕಡಾ ಮೂವತ್ತು ಮೂರು ವರೆಯಷ್ಟು ಎಂದು ಇರುವುದರಿಂದ ಇದರಮೇಲೆ ಕಂದಾಯವನ್ನೂ ವಸೂಲು ಮಾಡುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಬಹುಶಃ ಎರಡುವರ್ಷಗಳ ಕಂದಾಯವನ್ನೂ ಒಟ್ಟಿಗೆ ವಸೂಲು ಮಾಡುತ್ತೇವೆ ಎಂದು ಹೇಳುತ್ತಿರುವುದರಿಂದ ಇದನ್ನು ಸರಕಾರ ಸರಿಯಾಗಿ ಭರ ವಸೆಕೊಟ್ಟು ಯಾವ ರೀತಿ ವಸೂಲು ಮಾಡುತ್ತಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಸರಕಾರಕ್ಕೆ ಕಂದಾಯವಾಗಿ ರೈತರಿಂದ ಸುಮಾರು ಆರೂವರೆ ಕೋಟಿಯಷ್ಟು ಮಾತ್ರ ಬರಬೇಕಾಗಿದೆ. ಅದರಲ್ಲೂ ಕೆಲವು ಕಡೆ ನಮ್ಮಲ್ಲಿರುವ ರೈತರು ಬಹಳ ಒಳ್ಳೆಯವರು ಅನೇಕರಿದ್ದಾರೆ. ಆದರೆ ಕಂದಾಯ ವಸೂಲಿ ಮಾಡುವಾಗ ಎಲ್ಲಿ ಜನರಿಗೆ ಕಷ್ಟವಿದೆ ಎನ್ನುವುದು ನಮ್ಮ ಅಧಿಕಾರಿಗಳು ತಿಳಿದುಕೊಂಡಿರುತ್ತಾರೆ. ಅಂತಹ ಕಡೆಗಳಲ್ಲಿ ಈ ಸಾಲಿನಲ್ಲಿ ವಸೂಲು ಮಾಡುವುದು ಬೇಡ ಸುಗ್ಗಿಯಲ್ಲಿ ವಸೂಲಿ ಮಾಡಿ ಕಳುಹಿಸುತ್ತೇವೆ ಎಂದು ಸರಕಾರಕ್ಕೆ ವರದಿ ಮಾಡುತ್ತಾರೆ, ಅಲ್ಲಿ ಕಡ್ಡಾಯವಾಗಿ ವಸೂಲು ಮಾಡುವುದಿಲ್ಲ. ಈ ದೃಷ್ಟಿಯಿಂದ ನಾವು ಮಾನಪ್ರತ್ಯತ್ವವಿಲ್ಲದೆ ಎಲ್ಲ ಕಡೆಯಲ್ಲಿಯೂ ಒಂದೇ ರೀತಿಯಾಗಿ ಕಂದಾಯ ವಸೂಲಿ ಮಾಡುವುದಿಲ್ಲ.

(*Interruption*)

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ರೂರಲ್).—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಮಾನ್ಯ ಮಂತ್ರಿಗಳು ಇಲ್ಲಿ ಉತ್ತರ ಕೊಡುತ್ತಿರುವಾಗ ಈ ಪ್ರಕಾರ ಇಲ್ಲಿರುವ ಸದಸ್ಯರು ಮೇಲಿಂದ ಮೇಲೆ ಅವರಿಗೆ ಪ್ರಶ್ನೆ ಹಾಕಿ ಉತ್ತರ ಪಡೆಯುತ್ತ ಹೋದರೆ ಅವರು ಸದಸ್ಯರು ಹೇಳಿರುವ ಬೇಡಿಕೆಗಳಿಗೆ ಉತ್ತರ ಕೊಡಲಿಕ್ಕೆ ಆಗುವುದಿಲ್ಲ. ಇದರ ಬಗ್ಗೆ ಅವರು ಉತ್ತರ ಕೊಡಲು ತಾವು ಸರಿಯಾದ ವ್ಯವಸ್ಥೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಹೆಚ್. ಸಿದ್ಧವೀರಪ್ಪ.—ಇದರ ಬಗ್ಗೆ ತಮ್ಮ ರೂಲಿಂಗು ಏನು ?

ಉಪಾಧ್ಯಕ್ಷರು.—ಇದರಲ್ಲೇನೂ ಪಾಯಿಂಟ್ ಆಫ್ ಆರ್ಡರಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಮಾತನಾಡುವಾಗ ನಾನು ಗಂಭೀರವಾಗಿ ಹಾಗೂ ಸಾವಧಾನದಿಂದ ಎಲ್ಲ ವಿಚಾರಗಳನ್ನೂ ಕೇಳುತ್ತ ಕುಳಿತಿದ್ದೆ. ಆದುದರಿಂದ ನಾನು ಈಗ ಹೇಳುವ ವಿಚಾರಗಳಲ್ಲಿ ಏನಾದರೂ ವಿವರಣೆಗಳು ಬೇಕಾಗಿದ್ದರೆ ಅದನ್ನು ನಾನು ಭಾಷಣ ಮುಗಿಸಿದನಂತರ ಕೊನೆಯಲ್ಲಿ ಕೇಳಬಹುದು. ಈಗ ನಾನು ಸಾವಧಾನದಿಂದ ಉತ್ತರ ಕೊಡಲು ಅವಕಾಶ ಮಾಡಿ ಕೊಡಬೇಕೆಂದು ತಮ್ಮನ್ನು ಕೇಳುತ್ತೇನೆ. ರೈತರಿಗೋಸ್ಕರ ನಾವು ತಗಾವಿ ಲೋನುಗಳು ಹಾಗೂ ಲ್ಯಾಂಡ್ ಇಂಪ್ರೂವ್‌ಮೆಂಟು ಲೋನುಗಳು ಹೀಗೆ ಕೆಲವಾರು ಸಾಲಗಳನ್ನು ಕೊಡುತ್ತಿದ್ದೇವೆ. ಮತ್ತು ಬಾವಿಗಳನ್ನು ತೋಡಿಸುವುದಕ್ಕಾಗಿ ಸಾಕಷ್ಟು ಸಾಲಗಳನ್ನು ರೈತರಿಗಾಗಿ ಕೊಡುತ್ತಿ ದ್ದೇವೆ. ಇದರಲ್ಲಿ 65ನೇ ಇಸವಿಯವರೆಗೆ ಸಾಕಷ್ಟು ಮಟ್ಟಿಗೆ ಎಂದರೆ ಸುಮಾರು 85 ಸಾವಿರ ಬಾವಿ ಗಳನ್ನು ತೋಡಲು ಸರಕಾರ ಸಹಾಯ ಮಾಡಿದೆ 65–66 ನೇ ಸಾಲಿನಿಂದ ಈ ಕೆಲಸವನ್ನು ಲ್ಯಾಂಡ್ ಇಂಪ್ರೂವ್‌ಮೆಂಟು ಬ್ಯಾಂಕಿನವರು ಮಾಡಲು ಅವರಿಗೆ ಹಣ ಒದಗಿಸಿಕೊಟ್ಟಿದೆ. ಇವರು ಈಗಾಗಲೇ ಹತ್ತು ಸಾವಿರ ಬಾವಿಗಳಿಗೆ ಹಣ ಮಂಜೂರು ಮಾಡಿದ್ದಾರೆ. ಬಹುಶಃ ರೈತರ ಕಷ್ಟ ವೇನು ಎನ್ನುವುದು ಸರಕಾರಕ್ಕೂ ಗೊತ್ತಿದೆ.

ಶ್ರೀ ಹೆಚ್. ಸಿದ್ಧವೀರಪ್ಪ.—ಇವೆಲ್ಲ ಸೆಂಟ್ರಲ್ ಸ್ಟಾನ್‌ಸರ್ಡ್ ಸ್ಕೀಂ ಅಲ್ಲವೇ ? ಅವರಿಂದ ತರಿಸಿ ನೀವು ಕೊಟ್ಟಿರಿ, ಇದರಲ್ಲೇನು ಮಹತ್ವವಿದೆ ?

ಶ್ರೀ ಬಿ. ರಾಚಯ್ಯ.—ಕೇಂದ್ರ ಸರ್ಕಾರದವರ ಸಹಾಯ ಪಡೆದು ನಮ್ಮ ಸರಕಾರದವರೂ ಅವರಿಗೆ ತಮ್ಮ ಸಹಾಯವನ್ನು ಮಾಡಿಕೊಟ್ಟಿದ್ದಾರೆ, ಅವರಿಗೆ ಬೇಕಾದ ಕೆಲಸಗಳನ್ನೂ ಮಾಡಿದ್ದಾರೆ. ಇದರಂತೆ ಸುಮಾರು ನಾಲ್ಕುಕೋಟಿ ರೂಪಾಯಿಗಳಷ್ಟನ್ನು ಈ ಒಂದು ತಿಂಗಳ ಒಳಗೆ ಖರ್ಚು ಮಾಡಿದೆ. ಒಟ್ಟಿನಲ್ಲಿ ರೈತರಿಗೆ ಬರುವ ಕಷ್ಟ ಕಾಲದಲ್ಲಿ ಎಂದರೆ, ಮಳೆ ಬಾರದೆ ತೊಂದರೆಗೆ ಸಿಕ್ಕಿದಾಗ, ಪ್ರವಾಹಗಳಿಂದ ತೊಂದರೆಯಾದಾಗ, ಬೆಂಕಿ ಅನಾಹುತಗಳಾದಾಗ, ಕೆಲವಾರು ರಿಯಾಯಿತಿಗಳನ್ನು ಅವರಿಗೆ ಕೊಟ್ಟು ಸರಕಾರ ಕೆಲಸ ಮಾಡುತ್ತಿದ್ದಾರೆ. ಕಷ್ಟಕ್ಕೆ ಸಿಕ್ಕಿದ ರೈತರುಗಳ ಕಷ್ಟವನ್ನು ಪರಿಹರಿಸಬೇಕು ಎನ್ನುವುದೇ ಸರಕಾರದ ಉದ್ದೇಶ. ನಾನಾದರೂ ಕೂಡ ಭಾವಿಸಿಕೊಂಡಿರುವುದು ನಮ್ಮ ಸರಕಾರ ಈ ಒಂದು ವರ್ಷದೊಳಗೆ ಶಕ್ಯವಿದ್ದಷ್ಟು, ಎಷ್ಟು ಕೆಲಸ ಮಾಡಬಹುದಾಗಿತ್ತೋ ಅಷ್ಟನ್ನೂ ಮಾಡಿ ರೈತರಿಗೆ ಸಹಾಯ ಒದಗಿಸಿಕೊಟ್ಟಿದ್ದೇವೆ. ನಾವೂ ಕೂಡ ರೈತರು ಸುಖವಾಗಿರಬೇಕು ಮತ್ತು ಅವರಿಂದ ದೇಶದ ಸಂಪತ್ತು ಹೆಚ್ಚುತ್ತದೆ ಮತ್ತು ನಮಗೆ ಬೇಕಾಗುವ ಆಹಾರದ ಕೊರತೆಯನ್ನು ಅವರು ನೀಗಿಸುತ್ತಾರೆ ಎಂದು ನಾವೂ ಕೂಡ ತಿಳಿದುಕೊಂಡಿದ್ದೇವೆ. ಒಂದು ವರ್ಷದೊಳಗೆ ನಾನಾ ರೀತಿಯ ಸೌಲಭ್ಯಗಳನ್ನು ಸಹಕಾರ ಇಲಾಖೆಯ ಮುಖಾಂತರ ಮತ್ತು ಬೇರೆ ಇಲಾಖೆಗಳ ಮುಖಾಂತರ ಕೆಲಸಕಾರ್ಯಗಳನ್ನು ಮಾಡಿಕೊಂಡು ಬಂದಿದ್ದೇವೆ. ಆದರೆ ನಾಲ್ಕುಕೋಟಿ ರೂಪಾಯಿಗಳ ಉತ್ಪತ್ತಿಯನ್ನೂ ನಾವು ಬಿಟ್ಟು ಬಿಟ್ಟಿದ್ದೇವೆ. ಇಲ್ಲಿ 4.42 ಲಕ್ಷ ರೂಪಾಯಿಗಳಷ್ಟು ಎಂದು ಏನು ಹೇಳಿದ್ದೇವೆ ಅದು ಬರೀ ಐನ್ ಕಂದಾಯ. ಇದರ ಜೊತೆಗೆ ಸುಮಾರು ಶೇಕಡಾ 45 ರಷ್ಟು ಸೆಸ್ಸುಗಳ ಮೂಲಕ ಎಂದರೆ ಎಜುಕೇಷನ್ ಸೆಸ್ಸು, ಹೆಲ್ತ್ ಸೆಸ್, ಇತ್ಯಾದಿ ಸೆಸ್‌ಗಳು ಬೇರೆ ಬರುತ್ತದೆ. ಅಲ್ಲದೆ ಈಗ ನಮ್ಮ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ತಾಲ್ಲೂಕು ಬೋರ್ಡುಗಳು ಹಾಗೂ ಪಂಚಾಯಿತಿಗಳು ಬಂದಿವೆ. ಇವರಿಗಾಗಿ ಸುಮಾರು ಶೇಕಡಾ 60 ರಷ್ಟು ಲ್ಯಾಂಡ್ ರೆವಿನ್ಯೂ ಅಸೆಸ್‌ಮೆಂಟಿನಲ್ಲಿ ಹಣ ಒದಗಿಸಿಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಇದು ಸ್ವಲ್ಪ ಮಟ್ಟಿಗೆ ನಿಧಾನವಾಗಿದೆ. ಇದಕ್ಕೋಸ್ಕರ ತಾಲ್ಲೂಕ ಬೋರ್ಡುಗಳ ಪರಿಸ್ಥಿತಿ ಏನಾಗಬಹುದು, ಪಂಚಾಯಿತಿಗಳ ಪರಿಸ್ಥಿತಿ ಏನಾಗಬಹುದು, ಅವರಿಗೆ ಯಾವರೀತಿ ಹಣ ಒದಗಿಸಿಕೊಡಬೇಕು, ಹಳ್ಳಿಗಾಡಿನಲ್ಲಿರತಕ್ಕ ಈ ಜನರಿಗೆ ಯಾವ ರೀತಿಯಾದ ಸೌಕರ್ಯಗಳನ್ನು ಒದಗಿಸಿಕೊಡಬೇಕು, ಬೇರೆ ರೀತಿಯಲ್ಲಿ ಹೇಗೆ ಕೊಡಬಹುದು, ಎನ್ನುವುದನ್ನೆಲ್ಲಾ ನೋಡಿ ಇಲ್ಲಿ ಕೆಲಸ ಹೆಚ್ಚು ಮಾಡಬೇಕಾಗಿದೆ.

ಅಲ್ಲದೆ ಲ್ಯಾಂಡು ರಿಕಾರ್ಡಿನ ಬಗ್ಗೆ ಶ್ರೀಮಾನ್ ವೆಂಕಟಗಿರಿಯಪ್ಪನವರು ಇಲ್ಲಿ ಹೇಳಿದರು: ಈಗಿರುವ ತಳವಾರರು ಹಾಗೂ ತೋಟಿಗಳು ಹಾಗೇ ಉಳಿಯುತ್ತಾರೆಯೇ ಅಲ್ಲದೆ ಅವರುಗಳು ಕೂಡ ಕಂದಾಯವನ್ನು ಕೊಡುತ್ತಾ ಬರುತ್ತಿದ್ದಾರೆ. ನಮಲ್ಲಿ ಒಂದು ಭಾವನೆ ಏನಿದೆ ಎಂದರೆ ಎಷ್ಟರ ಮಟ್ಟಿಗೆ ರೈತರ ಹಕ್ಕು ಬಾಧ್ಯತೆಗಳನ್ನು ಕಾಪಾಡುವುದಕ್ಕೆ ನಮಗೆ ಎಷ್ಟು ಮಿನಿಮಂ ಸ್ಟಾಫ್ ಅಗತ್ಯವೋ ಅಷ್ಟನ್ನು ಮಾತ್ರ ಉಳಿಸಿಕೊಂಡು ಬರುವುದಕ್ಕೆ ಸಾಧ್ಯ ಎಂದು ಸರಕಾರ ಯೋಚನೆ ಮಾಡುತ್ತಿದ್ದಾರೆ. ಈ ಒಂದು ದೃಷ್ಟಿಯಿಂದ ರೆವಿನ್ಯೂ ಇಲಾಖೆಯಲ್ಲಿ ಬಹುಶಃ ಈಗಿರತಕ್ಕ ಕೆಲಸಗಳು ಬಹುಶಃ ಕಡಿಮೆಯಾಗಬಹುದು ಮತ್ತು ಅದರಿಂದ ಒಂದು ತರಹದ ಭಾರ ಏನಿತ್ತು ಆ ಭಾರವನ್ನು ಕಡಿಮೆ ಮಾಡಿ ವೆಚ್ಚವನ್ನೂ ಕಡಿಮೆ ಮಾಡಿ ಎಂದು ಅನೇಕರು ಇಲ್ಲಿ ಹೇಳಿದರು.

5-00 P.M.

ಇದರಲ್ಲಿ ಮುಖ್ಯವಾಗಿ ರೆವಿನ್ಯೂ ಕಮಿಷನರನ್ನು ತೆಗೆಯಬೇಕು, ಸಬ್ ಡಿವಿಜನ್ ಆಫೀಸರುಗಳನ್ನು ತೆಗೆಯಬೇಕು ಅದರಿಂದ ವೆಚ್ಚ ಕಮ್ಮಿಯಾಗುತ್ತದೆ, ಹಾಗೂ ಸ್ವಲ್ಪ ಮಟ್ಟಿಗೆ ನಮಗೆ ಉಳಿತಾಯವಾಗುತ್ತದೆ ಎಂದು ಹೇಳಿದರು. ಬಹುಶಃ ತಮಗೆ ತಿಳಿದ ಹಾಗೆ ಹಿಂದೆ ರೆವಿನ್ಯೂ ಕಮಿಷನರು ಎಂದು ಒಬ್ಬರು ಇದ್ದರು. ಆ ಮೇಲೆ 4 ಭಾಗಗಳಿಂದ ಬಂದಿರತಕ್ಕ 4 ಭಾಗಗಳಿಗೆ 4 ಜನ ಡಿವಿಜನಲ್ ಕಮಿಷನರುಗಳು ಇದ್ದರು. ಸರ್ಕಾರಕ್ಕೂ ಮತ್ತು ಜಿಲ್ಲೆಗಳಿಗೂ ಮಧ್ಯೆ ಯಾವ ಉನ್ನತ ಅಧಿಕಾರಿಯೂ ಕೂಡ ಆ ಮಟ್ಟದಲ್ಲಿ ಇಲ್ಲದೇ ಒಂದೊಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಹೊಂದಾಣಿಕೆ ಮಾಡುವುದು ಮತ್ತು ಅವರಿಗೆ ಬೇಕಾಗಿರತಕ್ಕ ಸರ್ಕಾರದ ಪ್ರತಿನಿಧಿಯಾಗಿ ಅವರಿಗೆ ಬೇಕಾಗಿರತಕ್ಕ ಕೆಲವು ನಿರ್ದೇಶನಗಳನ್ನು ಕೊಡುವುದಕ್ಕೆ ಮತ್ತು ಕೆಲಸದ ಅಭಿವೃದ್ಧಿ ಪ್ರಗತಿಯನ್ನು ಸಾಧಿಸುವುದಕ್ಕೆ ಈ ಎಲ್ಲಾ ಕಾರಣದಿಂದ ಬೆಂಗಳೂರು ಕೇಂದ್ರೀಕೃತವಾಗಬಾರದು ಅದು 4 ಭಾಗಗಳಲ್ಲೇ ಇರಬೇಕೆಂಬ ದೃಷ್ಟಿಯಿಂದ ಹಿಂದೆ ಇದ್ದುದನ್ನೇ ಉಳಿಸಿಕೊಂಡು ಬಂದು ಅದಕ್ಕೆ ತಕ್ಕ ಹಾಗೆ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಮತ್ತು ಇತರ ಕಾನೂನುಗಳಲ್ಲಿ ಕೆಲವಾರು ಅಧಿಕಾರಗಳನ್ನು ಡಿವಿಜನಲ್ ಕಮಿಷನರಿಗೆ ಕೊಡಲಾಯಿತು. ಒಂದು ವೇಳೆ ಇದನ್ನು ತೆಗೆಯಬೇಕೆಂದು ತೀರ್ಮಾನ ಮಾಡಿದಾಗ ಆ ಕಾನೂನುಗಳಿಗೂ ಕೂಡ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ಮತ್ತು ಡಿವಿಜನಲ್ ಕಮಿಷನರು ಏನು ಕೆಲಸ ಮಾಡುತ್ತಾ ಇದ್ದಾರೆ ಆ ಕೆಲಸವನ್ನು

ನಿರ್ವಹಿಸುವುದಕ್ಕೆ ಮದರಾಸಿನಲ್ಲಿ ಮತ್ತು ಆಂಧ್ರದಲ್ಲಿ ಇರತಕ್ಕ ಪದ್ಧತಿ ಪ್ರಕಾರ ಬೋರ್ಡ್ ಆಫ್ ರೆವಿನ್ಯೂ ಅಂತ ಇದೆ. ಅಲ್ಲಿ ರೆವಿನ್ಯೂ ಕಮಿಷನರು ಅಥವಾ ಎಲ್. ಎಸ್. ಜಿ. ಕಮಿಷನರು ಇದ್ದು ಅವರು ಸರ್ಕಾರದ ಮಟ್ಟದಲ್ಲಿ ಸರ್ಕಾರಕ್ಕೆ ಮತ್ತು ಜಿಲ್ಲೆಗಳಿಗೆ ಮಧ್ಯೆ ಇದ್ದುಕೊಂಡು ಕೆಲವು ಅಪೀಲುಗಳನ್ನು ಮತ್ತು ಇನ್ನು ಕೆಲವು ವಿಷಯಗಳನ್ನು ತೀರ್ಮಾನ ಮಾಡತಕ್ಕ ಸ್ಥಿತಿಯಲ್ಲಿ ಇದ್ದಾರೆ. ಆ ರೀತಿ ಒಂದು ಪದ್ಧತಿಯನ್ನು ತರುವುದಾದರೆ ಮತ್ತೆ ಬೆಂಗಳೂರಿನಲ್ಲೇ ಈ ಅಧಿಕಾರವನ್ನು ಕೇಂದ್ರೀಕೃತ ಮಾಡಿದ ಹಾಗಾಗುತ್ತದೆ. ಈ ಎರಡು ವಿಷಯಗಳನ್ನೂ ಕೂಡ ನೋಡಿ ಯಾವುದು ಸೂಕ್ತವಾಗಿದೆ, ಜನರಿಗೆ ಅತ್ಯಂತ ಶೀಘ್ರವಾಗಿ ನ್ಯಾಯ ದೊರಕಬೇಕು, ಜಿಲ್ಲೆಯಲ್ಲಿರತಕ್ಕ ಅಧಿಕಾರವನ್ನು ಒಂದು ಹೊಂದಾಣಿಕೆಯನ್ನು ಮಾಡಿ ಅಭಿವೃದ್ಧಿ ಕೆಲಸಕಾರ್ಯಗಳ ಚುರುಕಾಗಿ ಆಗಬೇಕೆಂಬ ದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ಈ ಪದ್ಧತಿ ಹೋಗಬೇಕೆ ಇರಬೇಕೇ ಎಂಬುದನ್ನು ಈಗ ಸರ್ಕಾರ ಅತ್ಯಂತ ಆಸಕ್ತಿಯಿಂದ ಯೋಚನೆ ಮಾಡುತ್ತಾ ಇದೆ ಎಂದು ಮಾತ್ರ ಈ ಸಂದರ್ಭದಲ್ಲಿ ತಿಳಿಸುತ್ತಾ ಇದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ತಾವು ಏನು ಹೇಳಿದ ಹಾಗೆ ಆಯಿತು ? ರದ್ದು ಮಾಡುತ್ತೀರಾ ಇಲ್ಲವೇ ಎಂಬುದನ್ನು ಹೇಳಿದ ಹಾಗೆ ಆಗಲಿಲ್ಲ.

ಶ್ರೀ ಬಿ. ರಾಚಯ್ಯ.—ಡಿವಿಜನಲ್ ಕಮಿಷನರುಗಳ ಹುದ್ದೆಗಳನ್ನು ಈಗ ತೆಗೆದು ಹಾಕಿದರೆ ಇರತಕ್ಕ ಅಧಿಕಾರಿಗಳನ್ನೇನೂ ಮನೆಗೆ ಕಳುಹಿಸುವುದಕ್ಕಾಗುವುದಿಲ್ಲ, ಅವರು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಹುದ್ದೆಯ ಕೆಲಸಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗುತ್ತಾ ಇರುತ್ತಾರೆ. ಆದ್ದರಿಂದ ಇದರಿಂದ ಏನು ಉಳಿತಾಯವಾಯಿತು ಎಂಬುದು ನಾವು ಯೋಚನೆ ಮಾಡತಕ್ಕ ವಿಷಯ. ಒಂದು ವೇಳೆ ಹೆಚ್ಚು ಉಳಿತಾಯವಾಗಿ ಶೀಘ್ರವಾಗಿ ನ್ಯಾಯ ದೊರಕುವುದಾದರೆ ಇದನ್ನು ತೆಗೆದು ಬೇರೆ ಮಾರ್ಗವನ್ನು ಹುಡುಕುವುದು ಸಾಧುವಾದುದು. ಬೇರೆ ಮಾರ್ಗ ಎಂದರೆ ರೆವಿನ್ಯೂ ಬೋರ್ಡು. ಬಹುಶಃ ಅದರಿಂದ ಬೆಂಗಳೂರು ಮಟ್ಟದಲ್ಲೇ ಎಲ್ಲಾ ಅಧಿಕಾರಿಗಳೂ ಇರಬೇಕಾಗುತ್ತದೆ. ಎಂದರೆ ಎಲ್ಲಾ ಅಧಿಕಾರಿಗಳೂ ಬೆಂಗಳೂರಿಗೆ ಬಂದು ಇಲ್ಲೇ ವಾಸ ಮಾಡಬೇಕೆನ್ನುವ ಆಶೆ ಸಾಧಾರಣವಾಗಿ ಈ ಸಂಸ್ಥಾನದಲ್ಲಿ ಒಂದೇ ಕಡೆ ಅಲ್ಲ, ಹೊರಗಿನ ಸಂಸ್ಥಾನಗಳಲ್ಲೂ ಕೂಡ ಇದೆ. ನಿವೃತ್ತಿಯಾದ ಅಧಿಕಾರಿಗಳು ಇಲ್ಲೇ ಬಂದಿರುವುದಕ್ಕೆ ಆಶೆಪಡುತ್ತಾರೆ. ಆದ್ದರಿಂದ ಈ ಹುದ್ದೆಗಳನ್ನು ತೆಗೆದುಹಾಕಬೇಕೇ ಅಥವಾ ಉಳಿಸಿಕೊಂಡು ಹೋಗಬೇಕೇ ಅನ್ನುವುದನ್ನೂ ಕೂಡ ಸರ್ಕಾರ ಅತ್ಯಂತ ಆಸಕ್ತಿಯಿಂದ ಯೋಚನೆ ಮಾಡುತ್ತಾ ಇದೆ ಎಂದು ಈ ಸಂದರ್ಭದಲ್ಲಿ ತಿಳಿಸುತ್ತಾ ಇದ್ದೇನೆ. ಮತ್ತು ಹಳೇ ಮೈಸೂರು ಭಾಗದಲ್ಲಿ ಮತ್ತು ಸೌತ್ ಕೆನರಾ, ಬಳ್ಳಾರಿ, ಕೊಳ್ಳೇಗಾಲ, ಕೊಡಗು ಈ ಭಾಗಗಳಲ್ಲಿ ರೆಕಾರ್ಡ್ ಆಫ್ ರೈಟ್ಸ್ ಕೂಡ ಇರಲಿಲ್ಲ ಸರ್ವೆ ಆಗಬೇಕೆಂದು ಶ್ರೀ ಎಂ. ಆರ್. ಪಾಟೀಲ್‌ರವರು ತಿಳಿಸಿದರು ಮತ್ತು ಇನ್ನೂ ಅನೇಕ ಸದಸ್ಯರು ಒತ್ತಾಯ ಪಡಿಸಿದರು. ಅದಕ್ಕೋಸ್ಕರ ಆ ಭಾಗಗಳಲ್ಲಿ ರೆಕಾರ್ಡ್ ಆಫ್ ರೈಟ್ಸ್ ಮೇನ್‌ಟೇನ್ ಮಾಡುವುದಕ್ಕೆ ಮತ್ತು ಸರ್ವೆ ಮಾಡಿಸುವುದಕ್ಕೆ ಹೊಸದಾಗಿ ಬೇಕಾಗಿರತಕ್ಕ ಸಿಬ್ಬಂದಿಯನ್ನು ಮಂಜೂರು ಮಾಡಿ ಅವರು ಈ ಕೆಲಸಗಳನ್ನು ಪ್ರಾರಂಭಮಾಡಿದ್ದಾರೆ, ಪ್ಲಾಂಟೇಷನ್ ಸರ್ವೆ ಕೂಡ ಪೂರೈಸುತ್ತಾ ಇದೆ, ಪೆಡೆಸ್ಟ್ರಿಯಲ್ ಸರ್ವೆ ಕೂಡ ಪೂರೈಸುತ್ತಾ ಇದೆ. ಬೆಂಗಳೂರು ಸಿಟಿ ಸರ್ವೆ ಈಗ ಪ್ರಾರಂಭವಾಗಿದೆ. ಹಳೇ ಮೈಸೂರಿನಲ್ಲಿ ಎಷ್ಟೋ ಪೋಡಿ ಕೆಲಸಕಾರ್ಯಗಳು ಉಳಿದು ಹೋಗಿವೆ. ರೈತರಿಗೆ ಬೇಕಾಗಿರತಕ್ಕ ಎನ್‌ಕಂಬರೆನ್ಸ್ ಸರ್ಟಿಫಿಕೇಟುಗಳು ಮತ್ತು ಎಲಿನೇಷನ್ ಸರ್ಟಿಫಿಕೇಟುಗಳು ಮತ್ತು ಇತರ ದಾಖಲೆಗಳು ಸಿಕ್ಕುವುದು ಬಹಳ ನಿಧಾನವಾಗಿ ಅವರಿಗೆ ಸರ್ಕಾರದಿಂದ ಸಾಲ ಮತ್ತು ಇತರ ಸೌಲಭ್ಯಗಳು ದೊರಕುವುದು ಕಷ್ಟವಾಗಿರುವುದರಿಂದ ಅದನ್ನು ಅತಿ ಶೀಘ್ರವಾಗಿ ಪೂರೈಸಬೇಕೆಂದು ಅದಕ್ಕೆ ಬೇಕಾಗಿರತಕ್ಕ ಸಿಬ್ಬಂದಿಯನ್ನು ಮಂಜೂರು ಮಾಡಿ ಈ ಕೆಲಸಕಾರ್ಯಗಳು ತ್ವರಿತವಾಗಿ ನಡೆಯುತ್ತಾ ಇವೆ. ಬಹುಶಃ ಇನ್ನು ಒಂದು ವರ್ಷದಲ್ಲಿ ಮ್ಯುಟೇಷನ್ ಮತ್ತು ಪೋಡಿ ಕೆಲಸಕಾರ್ಯಗಳು ಏನು ಬಾಕಿ ಉಳಿದಿವೆಯೋ ಅವುಗಳನ್ನು ಪೂರೈಸುತ್ತಾರೆ ಎಂದು ಸರ್ಕಾರದ ಆಶಯವಾಗಿದೆ. ಮತ್ತು ಈ ಸರ್ವೆ ಆದಮೇಲೆ ಸುಮಾರು 1 ಲಕ್ಷ 27 ಸಾವಿರ ಎಕರೆಗಿಂತ ಮಿಗಿಲಾಗಿ ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಪಟ್ಟ ಭೂಮಿ ಇವತ್ತು ಅನ್ ಆಥರೈಸ್ಡ್ ಕಲ್ಟಿವೇಷನ್‌ನಲ್ಲಿ ಇದೆ ಅದನ್ನೂ ಕೂಡ ಸರ್ವೆ ಮಾಡಿಸಿ, ಎಲ್ಲೆಲ್ಲಿ ಜನರಿಗೆ ಕೊಡಬಹುದೋ ಅಲ್ಲಿ ಅವುಗಳನ್ನು ಕೊಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆ. ಅಕ್ರಮಸಾಗುವಳಿ ಎಲ್ಲಿ ಮಾಡಿದ್ದಾರೆ ಎಲ್ಲಿ ಅವರನ್ನು ದೂಡುವುದಕ್ಕೆ ಸಾಧ್ಯವಿದೆ ಅಂತಹ ಕಡೆ ನಿರ್ದಾಕ್ಷಿಣ್ಯವಾಗಿ ಹೊರದೂಡುವುದಕ್ಕೂ ಕೂಡ ಪ್ರಯತ್ನ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಭೂಮಿಯನ್ನು ಕೊಡತಕ್ಕ ಕಾಲದಲ್ಲಿ ಸರ್ಕಾರದವರು ಸ್ವಜನಪಕ್ಷಪಾತ ಮತ್ತು ಇದ್ದವರಿಗೇ ಹೆಚ್ಚಾಗುವ ರೀತಿಯಲ್ಲಿ ಭೂಮಿಯನ್ನು ಕೊಡುತ್ತಾ

(ಶ್ರೀ ಬಿ. ರಾಚಯ್ಯ)

ಇದ್ದಾರೆ, ಬಡವರಿಗೆ ಸಿಕ್ಕುತ್ತಿಲ್ಲ ಎಂದು ಅಪಾದನೆಗಳನ್ನು ಮಾಡಿದ್ದಾರೆ. ಬಹುಶಃ ಈ ಭೂಮಿಗಳನ್ನು ಕೊಡತಕ್ಕ ನಿಯಮಾವಳಿಗಳ ಪ್ರಕಾರ ಮಂತ್ರಿಗಳಿಗೆ ಭೂಮಿಯನ್ನು ಕೊಡುವುದಕ್ಕೆ ಬರುವುದಿಲ್ಲ,

ಶ್ರೀ ಎಚ್. ಸಿದ್ದವೀರಪ್ಪ.—ಹೇಳಿ ಕೊಡಿಸುತ್ತೀರಿ ಅಷ್ಟೆ.

ಶ್ರೀ ಬಿ. ರಾಚಯ್ಯ.—ತಹಸೀಲ್ದಾರರುಗಳಿಗೆ, ಅಸಿಸ್ಟೆಂಟ್ ಕಮಿಷನರುಗಳಿಗೆ ಜಿಲ್ಲಾ ಅಧಿಕಾರಿಗಳಿಗೆ ಈ ಭೂಮಿಯನ್ನು ಕೊಡತಕ್ಕ ಹಕ್ಕನ್ನು ಕಾನೂನು ಪ್ರಕಾರ ಕೊಟ್ಟಿದೆ. ಭೂಮಿಯನ್ನು ಕೊಡತಕ್ಕ ಕಾಲದಲ್ಲಿ ಸಾಗುವಳಿಗೆ ಲಗತ್ತಾಗಿರತಕ್ಕ ಸರ್ಕಾರದ ಭೂಮಿ ಎಷ್ಟಿದೆ ಎಂಬ ಒಂದು ಪಟ್ಟಿಯನ್ನು ಪ್ರತಿಯೊಂದು ತಾಲ್ಲೂಕಿನಲ್ಲೂ ಸರ್ವೆ ಮಾಡಿಸಿ ಇಡಬೇಕೆಂಬ ಉದ್ದೇಶವನ್ನು ಸರ್ಕಾರ ಇಟ್ಟುಕೊಂಡಿದೆ. ಆದ್ದರಿಂದ ಅರಣ್ಯ ಭೂಮಿ ಆಗಲಿ ಅಥವಾ ಸೇಂದಿ ವನ ಇರತಕ್ಕ ಭೂಮಿ ಆಗಲಿ, ಕೆರೆ ಅಂಗಳ ಆಗಲಿ, ಗೋಮಾಳ ಇರತಕ್ಕದ್ದು ಆಗಲಿ ಅಂತಹ ಕಡೆ ರೈತರು ಜಾಗ್ರತೆ ಭೂಮಿಯನ್ನು ಪಡೆಯುವುದಕ್ಕೆ ಅನುಕೂಲವಾಗುತ್ತದೆ. ಈಗ ಅವಕ್ಕೆ ಅರ್ಜಿ ಹಾಕಿಕೊಂಡು 6 ವರ್ಷವಾದರೂ ಸಿಕ್ಕದೆ ಅಲೆಯುತ್ತಾ ಇದ್ದಾರೆ. ಇನ್ನು ಮುಂದೆ ಆ ರೀತಿ ಆಗುವುದಿಲ್ಲ. ಸುಮಾರು 6 ಲಕ್ಷ ಚಿಲ್ಲರೆ ಭೂಮಿ ಸಾಗುವಳಿಗೆ ಸಿಕ್ಕುತ್ತದೆ ಎಂದು ಹೇಳಿ ಅಂಕಿಅಂಶಗಳಿಂದ ತಿಳಿದು ಬರುತ್ತಾ ಇದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಎಷ್ಟೋ ಜನ ರೈತರು ಅರ್ಜಿಗಳನ್ನು ಹಾಕಿ ಅವರಿಗೆ ಲ್ಯಾಂಡ್ ರಿಲೀಸ್ ಮಾಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ರಾಚಯ್ಯ.—ಅನೇಕ ಜನರು ಅವಿದ್ಯಾವಂತರು ಇರುವುದರಿಂದ, ಬಹಳ ಹಿಂದುಳಿದಿರುವುದರಿಂದ ಯಾವ ಭೂಮಿ ಸಾಗುವಳಿಗೆ ಲಗತ್ತಾಗಿದೆ ಎಂದು ಅವರಿಗೆ ಗೊತ್ತಿಲ್ಲದೇ ಇರುವುದರಿಂದ ಅವರು ಯಾವ ಭಾಗದಲ್ಲೋ ಭೂಮಿ ಬೇಕೆಂದು ಅರ್ಜಿ ಹಾಕಿ ಸಿಕ್ಕದೇ ಹೋಗಿರಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ರೈತರು ಅದರಲ್ಲೂ ಹರಿಜನರು ಗಿರಿಜನರು ಅರ್ಜಿ ಹಾಕಿರುವುದಕ್ಕೆ ಕೊಡದೆ ನಿಮ್ಮ ಕಾಂಗ್ರೆಸ್ ಪಾರ್ಟಿಯಲ್ಲಿ ಯಾರು ಮುಖಂಡರು ಅಂತ ಇದ್ದಾರೆ ಅಂತಹವರಿಗೆ ಕೊಟ್ಟಿರುವುದನ್ನು ತೋರಿಸಿಕೊಟ್ಟರೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ? ಎರಡು ಲಕ್ಷ ಹದಿನೈದು ಸಾವಿರ ಎಕರೆ ನೀರಾವರಿಯಾಗತಕ್ಕ ಜಮೀನು ಇದೆ.

ಶ್ರೀ ಬಿ. ರಾಚಯ್ಯ.—ಸ್ವಾಮಿ, ಹಿಂದೆ ಎಲ್ಲೆಲ್ಲಿ ಕಾನೂನನ್ನು ಬಿಟ್ಟು ಜಮೀನನ್ನು ಸಾಗುವಳಿಗೆ ಕೊಟ್ಟಿದ್ದಾರೆ ಅಂತಹ ಕಡೆ ಬಹುಶಃ ಜಿಲ್ಲಾಧಿಕಾರಿಗಳ ಆರ್ಡರ್ ಮೇಲೆ ರೆವಿನ್ಯೂ ಟ್ರಿಬ್ಯೂನಲ್‌ಗೆ ಹೋಗಿ ನ್ಯಾಯವನ್ನು ದೊರಕಿಸಿಕೊಳ್ಳಬೇಕು. ಅಂತಹ ಒಂದು ಅವಕಾಶವನ್ನು ಕಾನೂನಿನಲ್ಲಿ ಕಲ್ಪಿಸಿಕೊಟ್ಟಿದ್ದೇವೆ; ಬಡವರಾಗಿರತಕ್ಕವರು ನ್ಯಾಯಾಲಯಕ್ಕೆ ಹೋಗಿ ನ್ಯಾಯವನ್ನು ದೊರಕಿಸಿಕೊಳ್ಳುವುದೂ ಕೂಡ ಬಹಳ ಕಷ್ಟ ಎಂಬುದು ನಮಗೆ ಗೊತ್ತಿದೆ. ಆದುದರಿಂದಲೇ ಇನ್ನು ಮೇಲೆ ಪ್ರತಿಯೊಂದು ತಾಲ್ಲೂಕ್ ಆಫೀಸುಗಳಲ್ಲಿಯೂ ಸಾಗುವಳಿಗೆ ಲಗತ್ತಾದ ಭೂಮಿ ಎಷ್ಟಿರುತ್ತದೆ ಎಲ್ಲಿರುತ್ತದೆ ಎಂಬುದರ ಬಗ್ಗೆ ಒಂದು ಪಟ್ಟಿಯನ್ನು ಬರೆದು ಅವುಗಳ ಸರ್ವೆ ನಂಬರನ್ನೂ ಸಹ ನಮೂದಿಸಿ ಆ ಪಟ್ಟಿಯನ್ನು ಬಹಿರಂಗವಾಗಿ ಪ್ರಕಟಿಸುವಂತೆ ಮಾಡಿದ್ದೇವೆ. ದರಖಾಸ್ತುಗಳನ್ನು ಹಾಕತಕ್ಕ ನಿಯಮಾವಳಿಗಳನ್ನೂ ಕೂಡ ಮಾಡಲಾಗಿದೆ. ಆ ನಿಯಮಾವಳಿಗಳ ಪ್ರಕಾರವೇ ಭೂಮಿಯನ್ನು ಸಾಗುವಳಿದಾರರಿಗೆ ವಿಲೇವಾರಿ ಮಾಡಬೇಕೆಂದು ತಿಳಿಸಲಾಗಿದೆ. ಹೀಗೆ ನಿಯಮಗಳನ್ನು ಮಾಡಿ ಅವುಗಳನ್ನು ಸರಿಯಾಗಿ ಅನುಸರಿಸಲಾಗುತ್ತಿದೆಯೋ ಇಲ್ಲವೇ ಎಂಬುದನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಮಾಡಿ ಅದಕ್ಕೆ ಒಬ್ಬ ಇವಾಲ್ಯುಯೇಷನ್ ಆಫೀಸರನ್ನು ನೇಮಕ ಮಾಡಿದ್ದೇವೆ. ಎಲ್ಲಿಯಾದರೂ ಅಂಥಾ ಅಕ್ರಮ ನಡವಳಿಕೆಗಳು ನಡೆದಿದ್ದರೆ ಅವರು ತಪ್ಪಿತಸ್ಥರಿಗೆ ಶಿಕ್ಷೆಯನ್ನು ವಿಧಿಸುವುದಕ್ಕೂ ಅಧಿಕಾರವನ್ನು ಹೊಂದಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಅಧಿಕಾರಿಗಳನ್ನು ಏಕೆ ದೂರುತ್ತೀರಿ ವೃಥಾ; ನೀವು ಅವರನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ.

ಶ್ರೀ ಬಿ. ರಾಚಯ್ಯ.—ಎಲ್ಲಾ ಸಂದರ್ಭಗಳಲ್ಲಿಯೂ ಕಾಂಗ್ರೆಸ್ಸಿನವರೇ ಹೇಳಿಕೊಟ್ಟಿದ್ದಾರೆ ಎಂಬುದನ್ನು ನಾನು ಒಪ್ಪುವುದಿಲ್ಲ.

ಶ್ರೀ ಜಿ. ದುಗ್ಗಪ್ಪ (ಭರ್ಮ ಸಾಗರ).—ಇಲ್ಲಿಯವರೆಗೂ ಜಮೀನಿನ ವಿಲೇವಾರಿಯಲ್ಲಿ ಮಂತ್ರಿಗಳು ಪ್ರವೇಶಮಾಡಿಲ್ಲವೆಂದು ತಾವು ಹೇಳಬಹುದು ಆದರೆ ಈ ಹಿಂದೆ ಶ್ರೀ ಕಡಿದಾಳ್ ಮಂಜಪ್ಪನವರು ಇದ್ದ ಕಾಲದಲ್ಲಿ ಒಂದು ವಿಚಾರ ನಡೆಯಿತು. ನಮ್ಮ ಚಿತ್ರದುರ್ಗ ಜಿಲ್ಲೆಯ ಹಿರಿಯೂರು

ತಾಲ್ಲೂಕಿನಲ್ಲಿ ತಮಗೆಲ್ಲರಿಗೂ ಗೊತ್ತಿರುವಂತೆ ಗಾಯತ್ರಿ ಪ್ರಾಜೆಕ್ಟ್ ಎಂಬುದು ಇದೆ. ಆ ಪ್ರಾಜೆಕ್ಟಿನ ಕೆಳಗೆ ಬರತಕ್ಕ ಅಚ್ಚುಕಟ್ಟನ್ನು ಶ್ರೀಮಾನ್ ಮಂಜಪ್ಪನವರು ಒಬ್ಬ ಪ್ರತ್ಯೇಕವಾದ ಅಧಿಕಾರಿಯನ್ನು ನೇಮಕ ಮಾಡಿ ಅಲ್ಲಿದ್ದ ಜಮೀನನ್ನೆಲ್ಲಾ ಒಂದೊಂದು ಎಕರೆಯಂತೆ ಪ್ರತ್ಯೇಕ ಪ್ರತ್ಯೇಕವಾಗಿ ಪೋಡಿಮಾಡಿಸಿ ಅದನ್ನು ಹಂಚಬೇಕೆನ್ನುವುದರಲ್ಲೇ ಅವರ ಅಧಿಕಾರ ಮುಗಿಯಿತು. ಇಲ್ಲಿಗೆ ಆ ಜಮೀನನ್ನು ಪೋಡಿ ಮಾಡಿ ಎಷ್ಟು ವರ್ಷಗಳಾಯಿತು? ಏತಕ್ಕೆ ಆ ಜಮೀನನ್ನ ತಾವು ಇನ್ನೂ ವಿಲೇವಾರಿ ಮಾಡಿಲ್ಲ? ಇದಕ್ಕೆ ಯಾರು ಕಾರಣರು? ನಿಧಾನವೇಕಾಗಿದೆ! ಎನು ಅಡ್ಡಿ ಇತ್ತು! ಹಾಗೆ ನೀವು ಅಡ್ಡಿ ಬಾರದಿದ್ದರೆ ಇದು ಏತಕ್ಕೆ ಇನ್ನೂ ವಿಲೇವಾರಿಯಾಗಲಿಲ್ಲಾ? ಸುಮ್ಮನೆ ಆ ಅಧಿಕಾರಿಗಳನ್ನು ಏಕೆ ದೂರುತ್ತೀರಿ!

ಶ್ರೀ ಬಿ. ರಾಚಯ್ಯ.—ಹಿಂದೆ ಆದಾದ್ದು ಆಗಿಹೋಯಿತು. ಅದನ್ನು ಈ ದಿವಸ ಚರ್ಚೆ ಮಾಡುವುದರಿಂದೇನೂ ಪ್ರಯೋಜನವಾಗುವುದಿಲ್ಲ. ಹಿಂದೆ ಶ್ರೀ ಸಿದ್ದಯ್ಯನವರೇನು ಮಾಡಿದರು, ಶ್ರೀ ಮಂಜಪ್ಪನವರೇನು ಮಾಡಿದರು ಎಂಬುದನ್ನು ಚರ್ಚೆ ಮಾಡಿದರೂ ಅದನ್ನು ನಾವು ಈ ದಿವಸ ಸರಿಪಡಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸಿದ್ದವೀರಪ್ಪನವರೂ ಕೂಡ ಮಂತ್ರಿಗಳಾಗಿದ್ದವರು. ಅವರಿಗೆ ಈ ವಿಚಾರಗಳೆಲ್ಲಾ ಗೊತ್ತಿವೆ. ಹಿಂದಿನವರು ಏನು ಮಾಡಿದ್ದಾರೋ ಅದನ್ನು ನಾವೀದಿವಸ ಅದಲುಬದಲು ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅದನ್ನೆಲ್ಲಾ ವಿಚಾರಣೆ ಮಾಡುವುದಕ್ಕಾಗಿ ಈಗ ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ. ಆ ಸಮಿತಿಗೆ ಇದನ್ನೆಲ್ಲಾ ವಿಚಾರ ಮಾಡುವುದಕ್ಕೆ ಸಾಧ್ಯವಿದೆ.

ಶ್ರೀ ಬಿ. ರಾಚಯ್ಯ.—ಇದುವರೆಗೂ ಕೊಟ್ಟಿರತಕ್ಕ ಭೂಮಿಗಳೇನಿವೆ ಅವುಗಳನ್ನು ನಾನು ಮಂತ್ರಿಯಾಗುವುದಕ್ಕೆ ಮೊದಲೇ ಕೊಡಲಾಗಿದೆ ಎಂದು ನಾನಾಗಲೇ ಹೇಳಿದ್ದೇನೆ. ಆದರೆ ಬರೀ ಕಾಂಗ್ರೆಸ್ಸಿನವರೇ ತಮ್ಮ ಪ್ರಭಾವವನ್ನು ಬೀರಿ ಅದನ್ನೆಲ್ಲಾ ಮಾಡಿದ್ದಾರೆಂಬುದನ್ನು ನಾನು ಒಪ್ಪುವುದಿಲ್ಲ. ಆಯಾಯ ತಾಲ್ಲೂಕಿನಲ್ಲಿರತಕ್ಕ ಕೆಲವು ಸ್ಥಳೀಯ ಮುಖಂಡರೂ ತಮ್ಮ ಪ್ರಭಾವ ಬೀರಿ ಕೆಲಸಗಳನ್ನು ಮಾಡಿಸಿಕೊಂಡಿರತಕ್ಕ ನಿದರ್ಶನಗಳೂ ಬಹಳವಾಗಿವೆ. ಹಿಂದೆ ಮಾಡಿದಂತೆ ಇನ್ನು ಮುಂದೆ ಮಾಡುವುದಕ್ಕೆ ಅವಕಾಶವಿಲ್ಲ ಎಂದು ಇಷ್ಟು ಮಾತ್ರ ಹೇಳಬಲ್ಲೆ. ಹಿಂದೆ ಮಾಡಿದ್ದನ್ನು ಈ ದಿವಸ ಚರ್ಚೆಮಾಡಿ ಪ್ರಯೋಜನವಿಲ್ಲ. ಈ ದಿವಸ ತಪ್ಪು ಮಾಡತಕ್ಕವರು ಅವರು ಅಧಿಕಾರಿಗಳೇ ಆಗಿರಲಿ, ಯಾರೇ ಆಗಿರಲಿ ತಪ್ಪುಮಾಡಿದವರೆಲ್ಲರೂ ತಪ್ಪಿತಸ್ಥರೇ. ಆದರೆ ಈ ದಿವಸ ಬಡವರಿಗೆ ಪ್ರಭಾವಶಾಲಿಗಳ ಪ್ರಭಾವದಿಂದ ಬಹಳ ಅನ್ಯಾಯವಾಗುತ್ತಿದೆ, ಅವರಿಗೆ ಜಮೀನುಗಳು ಸಿಕ್ಕುತ್ತಿಲ್ಲ ಎಂಬ ಆಪಾದನೆಗಳು ಬಂದಿವೆ. ನಮ್ಮ ದೇಶದಲ್ಲಿ 100ಕ್ಕೆ 80 ಜನರು ವ್ಯವಸಾಯವನ್ನು ಅವಲಂಬಿಸಿಕೊಂಡಿದ್ದಾರೆ. ಆದರೆ ದೇಶದಲ್ಲಿ ವ್ಯವಸಾಯದ ಜೊತೆಯಲ್ಲಿ ಕೈಗಾರಿಕೆಗಳೂ ಕೂಡ ಅಭಿವೃದ್ಧಿಯಾಗಬೇಕೆಂದು ನಾವೆಲ್ಲರೂ ಹೇಳುತ್ತಿದ್ದೇವೆ. ನಮ್ಮಲ್ಲಿ ನಾವು ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿಲ್ಲ ಎಂದು ಹೇಳಿ ಆ ಮದ್ರಾಸಿನವರ ಕಡೆ ಕೈತೋರಿಸುತ್ತಿದ್ದಾರೆ. ಮದ್ರಾಸಿನಲ್ಲಿ ಕೈಗಾರಿಕೆಗಳಿಗೆ ಸರ್ಕಾರದವರು ಬಹಳ ಉತ್ತೇಜನ ನೀಡುತ್ತಿದ್ದಾರೆ, ಇಲ್ಲಿ ಹಾಗೆ ಮಾಡುತ್ತಿಲ್ಲವೆಂದು ಹೇಳುತ್ತಾರೆ. ಅದಕ್ಕಾಗಿ ನಾವು ಇಲ್ಲಿ ನಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಬೆಳಸಲು ಭೂಮಿಯನ್ನು ಯಾವ ದರದಲ್ಲಿ ಕೊಡಬೇಕು, ಎಷ್ಟು ಭೂಮಿಯನ್ನು ಕೊಡಬೇಕು ಮತ್ತು ಈ ದರಖಾಸ್ತುಗಳಿಗೆ ಭೂಮಿಯನ್ನು ಯಾವ ದರದಲ್ಲಿ ಕೊಡಬೇಕು ಅನ್ನತಕ್ಕ ವಿಚಾರದಲ್ಲಿ ನಮ್ಮ ಸರ್ಕಾರ ಒಂದು ನಿರ್ದಿಷ್ಟವಾದ ನೀತಿಯನ್ನು ಅನುಸರಿಸುತ್ತಿದೆ. ಹಿಂದೆ ಮಂತ್ರಿಗಳಾಗಿದ್ದವರು ಶಿವಮೊಗ್ಗದಲ್ಲಿ ಯಾರಿಗೋ ಸಕ್ಕರೆ ಕಾರ್ಖಾನೆಗಾಗಿ 3000 ಎಕರೆ ಭೂಮಿಯನ್ನು ಕೊಟ್ಟರು ಎಂಬುದಾಗಿ ಶ್ರೀ ಗೋಪಾಲಗೌಡರು ಹೇಳಿದರು. ಆದರೆ ಅವರು ಒಂದು ದುರುದ್ದೇಶದಿಂದ ಆ ಭೂಮಿಯನ್ನೇನೂ ಕೊಡಲಿಲ್ಲ. ನಮ್ಮ ದೇಶದಲ್ಲಿ ಕೈಗಾರಿಕೆಗಳೂ ಕೂಡ ಮುಂದೆ ಬರಲಿ ಎನ್ನತಕ್ಕ ಉದ್ದೇಶದಿಂದ ಕೊಟ್ಟರು.

ಶ್ರೀ ಎಚ್. ಸಿದ್ದವೀರಪ್ಪ.—ಆ ಮೂರು ಸಾವಿರ ಎಕರೆಗಳನ್ನು ಏತಕ್ಕೆ ಕೊಡಲಾಯಿತು ಎಂದರೆ: It was given as an experimental farm for the factory to supply sugarcane.

Sri S. D. KOTHAVALE (Sankeshwar).—I rise on a point of order, Sir. The Rules of Procedure provide that when an Hon'ble Member is speaking no other Hon'ble Member can stand up and speak. What I find is that when the Hon'ble Minister is giving the reply other Hon'ble

(SRI S. D. KOTHAVALE)

Members stand and make speeches. It is difficult to understand who is saying what. So, my request to the Chair is that the Rules of Procedure should be strictly observed. When one Member is speaking others should not be allowed to speak. If clarifications are required, they should come at the end of the reply.

MR. DEPUTY SPEAKER.—I request the Hon'ble Members not to disturb the Hon'ble Minister.

SRI H. SIDDAVEERAPPA.—Personal explanation is allowed even in parliamentary practice. It was not 3,000 acres but it was about 300 acres which was given by the Revenue Minister, and of course I take the responsibility. I was then the Industries Minister. It was a new area and on 99 years' lease it was given to that man to supply sugarcane because there was no sugarcane in that area.

ಶ್ರೀ ಬಿ. ರಾಚಯ್ಯ.—ಸ್ವಾಮಿ, ನಾನು ಕೊಟ್ಟದ್ದು ತಪ್ಪು ಎಂದು ಹೇಳಲಿಲ್ಲ. ಆ ಕಾಲದಲ್ಲಿ ಭೂಮಿಯ ದುರುಪಯೋಗವಾಗುತ್ತಾ ಇರಲಿಲ್ಲ. ಅಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡಲು ಭೂಮಿಯನ್ನು ಕೊಟ್ಟಿದ್ದಾರೆ.

ಶ್ರೀ ಎಸ್. ಶಿವಪ್ಪ.—ಸ್ವಾಮಿ, ರಾಚಯ್ಯನವರು ಇದನ್ನು ಹಿಂದೆ ಟೀಕೆ ಮಾಡಿದ್ದರು.

ಶ್ರೀ ಬಿ. ರಾಚಯ್ಯ.—ನಾನು ಅದನ್ನು ತಪ್ಪು ಎಂದು ಹೇಳಿದ್ದಲ್ಲ.

ಶ್ರೀ ಎಸ್. ಚನ್ನಯ್ಯ (ಕೃಷ್ಣರಾಜ).—300 ಎಕರೆಯೋ, 3 ಸಾವಿರ ಎಕರೆಯೋ ಎಂದು ಹೇಳುತ್ತಾ ಇಲ್ಲ. ಸುಮಾರು 3000 ಎಕರೆ ಕೊಟ್ಟಿದ್ದಾರೆ.

SRI S. SIVAPPA.—The same Mr. Rachaiah was then on this side and he has criticised it.

SRI H. SIDDAVEERAPPA.—You may kindly see the file. I was the first to raise an objection that nobody should be given what is more than essential. ನಾನು ಹೇಳುವುದು ಇಷ್ಟೆ. ಅದೇನಾದರೂ ಮಾಡಿದರೆ ಬಹಳ ಒಳ್ಳೆಯದು. ಅದನ್ನು ಶುರುಮಾಡಲಿ.

ಶ್ರೀ ಬಿ. ರಾಚಯ್ಯ.—ಪೆರಿಯಪಟ್ಟಣದ ವಿಚಾರ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ಸುಮಾರು 18 ಸಾವಿರ, 250 ಎಕರೆಗಳನ್ನು 1965ನೇ ಮೇ ಯಲ್ಲಿ ಜಯಶ್ರೀ ಟೆಕ್ಸ್‌ಟೈಲ್ಸ್‌ಗೆ ಕೊಟ್ಟಿತ್ತು. ಆದರೆ ಅವರು ಒಪ್ಪಿಕೊಳ್ಳಲಿಲ್ಲ. ಅದು ಹಾಗೆ ಸರ್ಕಾರಕ್ಕೆ ಉಳಕೊಂಡಿತ್ತು. ಮೊದಲು ಫಾರೆಸ್ಟು ಜಮೀನಾಗಿತ್ತು, ಈಗ ರೆವೆನ್ಯೂ ಇಲಾಖೆಯವರಿಗೆ ಉಳಿದುಕೊಂಡು ಬಂತು. ಉಳಿದಿರತಕ್ಕ ಎಷ್ಟೋ ಭೂಮಿಗಳು ರೆವೆನ್ಯೂ ಇಲಾಖೆಯಲ್ಲಿವೆ. ಇದರಿಂದ ಸುಮಾರು 5 ಸಾವಿರ ಎಕರೆಯನ್ನು ಓರಿಯಂಟಲ್ ಅರೊಮೇಟಿಕ್ ಕಂಪನಿಯವರಿಗೆ ಸುಗಂಧದ್ರವ್ಯಗಳ ಗಿಡಗಳನ್ನು ಬೆಳೆಸುವುದಕ್ಕೆ ಬೇಕೆಂದು ಕೇಳಿದ ಪ್ರಕಾರ ಕೊಡಲಾಯ್ತು. ಆದರೆ ಅದರ ಬದಲಾಗಿ 1963ನೇ ಇಸವಿಯಲ್ಲಿ ಪುನಃ ಸುಮಾರು 10 ಎಕರೆ ಭೂಮಿಯನ್ನು ಒಂದು ವರ್ಷದ ಲೀಸ್ ಮೇಲೆ ಕೊಟ್ಟಿತು. ಆ 10 ಎಕರೆಯಲ್ಲಿ ಸುಗಂಧ ಗಿಡಗಳನ್ನು ಬೆಳೆಸಿ, ಒಳ್ಳೆಯದಾದ ಮೇಲೆ ಮತ್ತೆ 11 ಎಕರೆ ಜಮೀನು ಕೊಟ್ಟಿತು. ಈ ಒಂದು ಭೂಮಿ ಸುಗಂಧ ಬೆಳೆಸುವುದಕ್ಕೆ ಚೆನ್ನಾಗಿದೆ ಎಂದು ಒಪ್ಪಿಕೊಂಡ ಮೇಲೆ 2,900 ಎಕರೆಗಳಷ್ಟು ಭೂಮಿಯನ್ನು ಮೂವತ್ತು ವರ್ಷಗಳ ಅವಧಿಗೆ ಒಂದು ಎಕರೆಗೆ ಸುಮಾರು 80 ರೂಪಾಯಿಯಂತೆ ಅವರಿಗೆ ಮಂಜೂರು ಮಾಡಿದರು. ಅದು 29-6-66ರಲ್ಲಿ.

ಶ್ರೀ ಎಚ್. ಸಿದ್ದವೀರಪ್ಪ.—ವರ್ಷಕ್ಕೆ 80 ರೂಪಾಯಿಯೇ ಅಥವಾ ಎಕರೆಗೆ 80 ರೂಪಾಯಿಯೇ ?

ಶ್ರೀ ಎಸ್. ಚನ್ನಯ್ಯ.— 80 ರೂಪಾಯಿ ವರ್ಷ ವರ್ಷ ಕೊಡಬೇಕೋ, ಅಥವಾ ಒಂದು ಸಾರಿ ಕೊಟ್ಟರೆ ಸಾಕೇ ಎಂದು ಕೇಳಿದ್ದು.

ಶ್ರೀ ಬಿ. ರಾಚಯ್ಯ.—ಗೌರ್ನಮೆಂಟ್ ಆರ್ಡರ್ ಪ್ರಕಾರ ವರ್ಷಂಪ್ರತಿ ಕೊಡಬೇಕೆಂದು ಇದೆ. ಈ ಮಧ್ಯೆ ಸರ್ಕಾರದ 29-6-66 ಆರ್ಡರ್ ಹೋಗುವುದರೊಳಗೆ ಈ ಮಟ್ಟದಲ್ಲಿ ಏನು ಬಂದಿತ್ತು ಅದನ್ನು ಅದಷ್ಟು ಬೇಗ ಉಪಯೋಗಿಸಿಕೊಳ್ಳಲಾಗುವುದಿಲ್ಲ, ಮತ್ತು ಅಲ್ಲಿಯ ಜಂಗಲ್ ಕ್ಲಿಯರ್ ಮಾಡಬೇಕಾಗಿರುವುದರಿಂದ, ಒಂದು 100 ಎಕರೆ ಭೂಮಿಯಲ್ಲಿ ಜಂಗಲ್ ಕ್ಲಿಯರ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಕೇಳಿಕೊಂಡಿದ್ದರು. ಆದರೆ ಫಾರೆಸ್ಟ್ ಇಲಾಖೆಯಿಂದ ಒಂದು ಹುಕುಂ ಹೋಗದಿರುವುದರಿಂದ ಅವರು ಪ್ರಾರಂಭ ಮಾಡುವುದನ್ನು ತಡೆಹಿಡಿದರು. ಆದ್ದರಿಂದ ಒಂದು ಅಗ್ರಿಮೆಂಟಿಗೆ ಏನು ಬರಬೇಕಾಗಿತ್ತೋ, ಆ ಅಗ್ರಿಮೆಂಟಿಗೆ ಮುಂಚಿತವಾಗಿ ಅವರು ಎಲ್ಲಾ ಅಲ್ಲಿ ಹೋಗಿ, ಗಿಡಗಳನ್ನು ಮರಗಳನ್ನು ಚೆಕ್ಕಿಕಲಾಗಿ, ಅಗ್ರಿಮೆಂಟ್ ಪ್ರಕಾರ ಒಪ್ಪಿಕೊಂಡು ಕ್ಲಿಯರ್ ಮಾಡಿದ್ದಾರೆ. ಆದರೆ ಸರ್ಕಾರದ ದೃಷ್ಟಿಯಿಂದ ಹೇಳಿದ ಪಕ್ಷದಲ್ಲಿ ಕಾನೂನು ಬದ್ಧವಾಗಿ ಭೂಮಿಯನ್ನು ತೆಗೆದುಕೊಂಡಿದ್ದಾರೆ. ಆದರೆ ಮರಗಳನ್ನು ಅಧಿಕಾರಿಗಳು ವಶಕ್ಕೆ ತೆಗೆದುಕೊಂಡಿದ್ದಾರೆ ಮತ್ತು ಅದಕ್ಕೋಸ್ಕರ ಒಂದು ಡಿಪೋ ಮತ್ತು ಸ್ಪೆಶಲ್ ಸ್ಟಾಫನ್ನು ಮಂಜೂರು ಮಾಡಿ, ಒಂದು ಮರ ಕೂಡ ಹೊರಗಡೆ ಹೋಗದೆ ಹಾಗೆ ನೋಡಿಕೊಂಡಿದ್ದಾರೆ; ಮತ್ತು ನಮ್ಮ ಅಧಿಕಾರಿಗಳ ಸುಪರ್‌ವಿಜನಿನಲ್ಲಿ ಡಿಪೋಗೆ ತಂದಿದ್ದಾರೆ. ನಮ್ಮ ಅಗ್ರಿಮೆಂಟ್ ಪೂರೈಸುವುದಕ್ಕೆ ಭೂಮಿಗೆ ಹೋಗಿ ಆತುರವಾಗಿ ಹೋಗಿ ಕೆಲಸ ಮಾಡಿದ್ದು ಸರಿಯಲ್ಲ ಎಂದು ನಾನು ಒಪ್ಪಿಕೊಂಡಿದ್ದೇನೆ. ಆದರೆ ಅಲ್ಲಿ ದುರುಪಯೋಗವಾಗಿಲ್ಲ ಮತ್ತು ಅವರು ಏನೂ ತೆಗೆದುಕೊಂಡು ಹೋಗಿಲ್ಲ. ಅದಲ್ಲದೆ ನಮ್ಮ ಸ್ಯಾಂಡಲ್ ಆಯಿಲ್ ಫ್ಯಾಕ್ಟರಿಗೆ 50 ಲಕ್ಷ ರೂಪಾಯಿಗಳಷ್ಟು ಸುಗಂಧ ದ್ರವ್ಯದ ವಸ್ತುವನ್ನು ನಮ್ಮ ಕಾರ್ಖಾನೆಗೆ ಒದಗಿಸಿಕೊಡಬೇಕೆಂದು ಹೇಳಿದೆ.

ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಅವರಿಗೆ ಸುಗಂಧ ಬೆಳೆಯುವುದಕ್ಕೆ 30 ವರ್ಷಗಳ ಮೇಲೆ ಲೀಸ್‌ನಲ್ಲಿ ಒಂದು ಎಕರೆಗೆ 80 ರೂಪಾಯಿಯಂತೆ ಕೊಟ್ಟಿದ್ದೀರಿ ಎಂದು ಹೇಳಿದಿರಿ. ಈಗ ಈ 2 ಸಾವಿರದ 900 ಎಕರೆಯನ್ನು ಸ್ಟೇಟ್ ಫಾರೆಸ್ಟಿನಿಂದ ಕೊಟ್ಟಿದ್ದೀರಾ, ಅಥವಾ ಮನ್ನಾ ಜಂಗಲನ್ನು ಕೊಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಇದು ಸ್ಟೇಟ್ ಫಾರೆಸ್ಟ್ ಆಗಿ ಉಳಿದಿಲ್ಲ. ಸ್ಟೇಟ್ ಫಾರೆಸ್ಟು ಯಾವ್ಯಾವುದು ಎನ್ನತಕ್ಕಂತದ್ದು 1950ನೇ ಇಸವಿಯಲ್ಲಿ ಸುಮಾರು 18 ಹಳ್ಳಿಗಳು ಸ್ಟೇಟ್ ಫಾರೆಸ್ಟು ಆಗಿತ್ತು. ಅದನ್ನು ರಿಲೀಸ್ ಮಾಡಿದುದರಿಂದ ಅದು ರೆವೆನ್ಯೂ ಇಲಾಖೆಯಲ್ಲಿ ಉಳಿದುಕೊಂಡಿತ್ತು.

ಶ್ರೀ ಎನ್. ಹುಚ್ಚುಮಾಸ್ತಿ ಗೌಡ (ಹುಲಿಯೂರುದುರ್ಗ).—2,900 ಎಕರೆ ಕೊಟ್ಟಿದ್ದೀರಿ ಎಂದು ಹೇಳಿದಿರಿ. ಅವರು 80 ರೂಪಾಯಿಯಂತೆ ಎಲ್ಲದಕ್ಕೂ ಹಣ ಏನಾದರೂ ಕೊಟ್ಟಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ಇಲ್ಲ, ಅವರು ಒಪ್ಪಿಲ್ಲ. 150 ಎಕರೆಯ ಮರವನ್ನು ಮಾತ್ರ ಅವರು ಕತ್ತರಿಸಿ ನಮ್ಮ ಡಿಪೋಗೆ ಕೊಟ್ಟಿದ್ದಾರೆ. ಸುಮಾರು 21 ಎಕರೆಗಳಲ್ಲಿ ಮಾತ್ರ ಅವರು ಗಿಡಗಳನ್ನು ಬೆಳೆಸುತ್ತಿದ್ದಾರೆ. ಆದ್ದರಿಂದ ಅವರು ಕೇಳಿಕೊಂಡಿದ್ದಾರೆ—ಒಂದು ವರ್ಷಕ್ಕೆ ಒಂದು ಎಕರೆಗೆ 80 ರೂಪಾಯಿಯಾದರೆ, ಈ ಸಂಸ್ಥೆ ನಡೆಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ದರ್ಖಾಸ್ತುದಾರರಿಗೆ ಯಾವ ಕಾನೂನು ರೀತಿಯಲ್ಲಿ ಕೊಡುತ್ತಿದ್ದೀರೋ ಆ ರೀತಿ ಕೊಡಬೇಕೆಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದರಿಂದ ಅವರು 80 ರೂಪಾಯಿನಂತೆ ಕೊಡುವುದಕ್ಕೆ ಒಪ್ಪಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—80 ರೂಪಾಯಿಗಳ ಮೇಲೆ ಕೊಡುವುದಕ್ಕಾಗುವುದಿಲ್ಲವೆಂದು ಆ ಕಂಪನಿಯವರು ಹೇಳಿದ ಮೇಲೆ ಈಗ ಕೊಟ್ಟಿರುವ 150 ಎಕರೆಗಳಿಗೆ ನಿಲ್ಲಿಸಿ, ಮುಂದೆ ಹೆಚ್ಚಿನ ಜಮೀನನ್ನು ಕೊಡದೆ ಉಳಿದಿರುವ ಜಮೀನಿನಲ್ಲಿ ತಾವೇ ಏತಕ್ಕೆ ಸುಗಂಧದ ಗಿಡಗಳನ್ನು ಬೆಳೆಯಬಾರದು ? ತಮಗೂ ಸಹ ಅದರ ಅನುಭವವಾಗಿದೆ.

5-30 P.M.

ಶ್ರೀ ಬಿ. ರಾಚಯ್ಯ.—ನಾವು ಬೆಳೆಯುವುದಕ್ಕಾಗುವುದಿಲ್ಲ. ಅವರು ಕೆಲವಾರು ರೀತಿಯ ಗಿಡಗಳನ್ನು ಫ್ರಾನ್ಸ್ ಮತ್ತು ಯು. ಕೆ. ಯಿಂದ ತರಿಸಿ ಬೆಳೆಸುತ್ತಿದ್ದಾರೆ. ಆ ಗಿಡಗಳನ್ನು ಬೆಳೆಯುವ ಟೆಕ್‌ನಿಕ್ ನಮಗೆ ಗೊತ್ತಿಲ್ಲ.

ಶ್ರೀ ಕೆ. ಎಚ್. ರಂಗನಾಥ್ (ಮೂಡಿಗೆರೆ).—ಅವರು ಎಕರೆಗೆ 80 ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳುತ್ತಿದ್ದಾರೆಂದು ಹೇಳಿದಿರಿ. 2,900 ಎಕರೆ ಜಾಗವನ್ನು ಈ ಗಿಡ ಬೆಳೆಸುವುದಕ್ಕಾಗಿ ಕೊಟ್ಟಿದ್ದೀರಿ. ಎಕರೆಗೆ 80 ರೂಪಾಯಿಗಳಂತೆ ಸರ್ಕಾರಕ್ಕೆ ಲಕ್ಷಗಟ್ಟಲೆ ಹಣ ಬರಬೇಕಾಗಿತ್ತು. ಅವರ ಕೊಟ್ಟಿಲ್ಲ. ಅವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟಿಲ್ಲ. ಗಿಡಗಳನ್ನು ಬೆಳೆಸಿದ ಮೇಲೆ ಅವನು ಎಕರೆಗೆ 80 ರೂಪಾಯಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ ಮೇಲೆ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಬಿ. ರಾಚಯ್ಯ.—ಎಕ್ಸ್‌ಪರಿಮೆಂಟ್ ಮಾಡುವುದಕ್ಕೋಸ್ಕರ ಮೊದಲು 21 ಎಕರೆ ಭೂಮಿಯನ್ನು ಕಾನೂನು ಪ್ರಕಾರ ಕೊಟ್ಟಿತು. ಇನ್ನು ಹೆಚ್ಚಿನ ಜಮೀನನ್ನು ಕೊಡುವಾಗ ಕಾನೂನು ಪ್ರಕಾರವೇ ಕೊಡುತ್ತೇವೆ. ಇನ್ನೂ ಅಗ್ರಿಮೆಂಟ್ ಆಗಿಲ್ಲದಿರುವುದರಿಂದ ಜಮೀನು ಅವರ ವಶಕ್ಕೆ ಹೋಗುವುದಿಲ್ಲ.

[Mr. Speaker in the Chair]

Mr. SPEAKER.—Sri K. H. Ranganath as a good lawyer knows that there is what is called permissive possession pending negotiation.

ಶ್ರೀ ಬಿ. ರಾಚಯ್ಯ.—ಇನ್ನು ಕೈಗಾರಿಕೆಗಳಿಗೆ ಹೆಚ್ಚಿನ ರೀತಿಯಲ್ಲಿ ಜಮೀನನ್ನು ಸರ್ಕಾರದವರು ಕೊಟ್ಟಿದ್ದಾರೆಂದು ಕೆಲವು ಸದಸ್ಯರುಗಳು ಆಕ್ಷೇಪಣೆ ಮಾಡಿದರು. ಕೈಗಾರಿಕೆಗಳನ್ನು ಸ್ಥಾಪನೆ ಮಾಡುವವರಿಗೆ, ಅವರಿಗೆ ಬೇಕಾಗುವ ಭೂಮಿ, ನೀರು ಮತ್ತು ವಿದ್ಯುಚ್ಛಕ್ತಿ ಮತ್ತು ಇತರೇ ಕೆಲವು ಸೌಲಭ್ಯಗಳನ್ನು ಕೊಡಬೇಕಾಗುತ್ತದೆ. ರಾ-ಮೆಟೀರಿಯಲ್ಸ್ ಎಂದು ನಾವು ಏನು ಹೇಳುತ್ತೇವೆ, ಅದನ್ನು ನಾವು ಅವರಿಗೆ ಒದಗಿಸಿಕೊಡದಿದ್ದರೆ ಯಾವ ಉದ್ಯಮಿಗಳು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬರುವುದಿಲ್ಲ. ಹೆಚ್ಚಿನ ರೀತಿಯಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗದಿದ್ದರೆ ನಾವು ಬಡತನದಲ್ಲಿಯೇ ಉಳಿಯಬೇಕಾಗುತ್ತದೆ. ಈ ದೃಷ್ಟಿಯಿಂದ ನಾವು ಅವರಿಗೆ ಇನ್‌ಸೆನ್‌ಟೀವ್ ಎಂದು ಏನು ಹೇಳುತ್ತೇವೆ ಅದನ್ನು ಕೊಡಬೇಕು. ಎಲ್ಲಾ ಸರ್ಕಾರಗಳೂ ಈ ರೀತಿಯ ಸಹಾಯವನ್ನು ಮಾಡುತ್ತವೆ, ಕೈಗಾರಿಕೆಗಳಿಗೆ ಭೂಮಿಯನ್ನು ಕೊಡುವುದರಿಂದ ಯಾವ ಅಪರಾಧವೂ ಆಗುವುದಿಲ್ಲವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಕೆಲವು ಕಡೆ ಭೂಮಿಯನ್ನು ಕೊಡಲೇ ಬೇಕಾಗುತ್ತದೆ. ಕೊಡದಿದ್ದರೆ ಸಾಧ್ಯವಿಲ್ಲ. ಕೊಡದಿದ್ದರೆ ಸರ್ಕಾರಕ್ಕೆ ಬರುವ ವರಮಾನವು ತಪ್ಪಿಹೋಗುತ್ತದೆ. ಯಾರಾದರೂ ಒಬ್ಬರ ದಾಕ್ಷಿಣ್ಯಕ್ಕೆ ಒಳಗಾಗಿ ಭೂಮಿಯನ್ನು ಕೊಟ್ಟರೆ ಅದು ತಪ್ಪಾಗುತ್ತದೆ. ಪಾಳು ಇರುವ ಬೂಮಿಯನ್ನು ಎಂಭತ್ತು ರೂಪಾಯಿಗಳಿಗೆ ಒಂದು ಎಕರೆಯಂತೆ ಕೊಟ್ಟಿದ್ದೇವೆ. ಅವರು ಅಲ್ಲಿ ಉತ್ಪಾದನೆ ಮಾಡುತ್ತಾರೆ. ಉತ್ಪಾದನೆ ಮಾಡುವವರಿಗೆ ಭೂಮಿಯನ್ನು ಕೊಡುವ ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಬಡವರು ಭೂಮಿಯನ್ನು ಕೇಳಿದರೆ ಕೊಡುವುದಿಲ್ಲ.

ಶ್ರೀ ಬಿ. ರಾಚಯ್ಯ.—ಬಡವರ ವಿಷಯದಲ್ಲಿ ಯಾವ ರೀತಿ ಸಹಾಯ ಮಾಡಬೇಕೆಂಬುದು ಗೊತ್ತಿದೆ. ಆ ವಿಚಾರವನ್ನು ನಾನು ಚಿಕ್ಕಮಗಳೂರಿಗೆ ಬಂದಾಗ ಹೇಳುತ್ತೇನೆ. ನಾನು ಸಹ ಬಡತನದಲ್ಲಿ ಬೆಳೆದವನು. ನಾನೂ ಸಹ ಕಷ್ಟವನ್ನು ಅನುಭವಿಸಿದ್ದೇನೆ. ಈ ಅಧಿಕಾರ ಶಾಶ್ವತವಲ್ಲ ಎನ್ನುವುದು ಸಹ ನನಗೆ ಗೊತ್ತಿದೆ. ಬಡವರ ಬಗ್ಗೆ ಸಹಾನುಭೂತಿ ತೋರಿಸಬೇಕೆಂದು ಶ್ರೀಮಾನ್ ಶಿವಪ್ಪನವರಲ್ಲಿ ಎಷ್ಟು ಆಸಕ್ತಿ ಇದೆಯೋ ಅಷ್ಟೇ ನನಗೂ ಸಹ ಇದೆ.

Sri H. SIDDAVEERAPPA.—I want the Hon'ble Minister to answer two points : (1) the policy of the Government in the matter of transfers of Government officers and (2) about the Bhagavathi Valley.

ಶ್ರೀ ಬಿ. ರಾಚಯ್ಯ.—ಆ ಭಗವತಿ ಕಾಡಿನ ಬಗ್ಗೆ ಹೇಳುತ್ತೇನೆ. ಭದ್ರಾನದಿ ಮತ್ತು ತುಂಗಾನದಿ ಹುಟ್ಟುವ ಜಾಗದಲ್ಲಿ ಈ ಕಾಡಿದೆ. ಗಂಗಾ ಮೂಲವಾದ ಸ್ಥಳ ಇದು. ಈ ಕಾಡು ಒಂದು ನಿರ್ಜನವಾದ ಪ್ರದೇಶದಲ್ಲಿದೆ. ದಟ್ಟಾರಣ್ಯವಾದ ಈ ಕಾಡು ಚಿಕ್ಕಮಗಳೂರು ಜಿಲ್ಲೆಯಲ್ಲಿದೆ. ಇಲ್ಲಿ ಯಾರೂ ಪ್ರವೇಶವನ್ನೇ ಮಾಡಿ ಮರಗಳನ್ನು ಕಡಿದಿರಲಿಲ್ಲ. 170 ಅಡಿ ಉದ್ದದ ಮರಗಳು ಇಲ್ಲಿ ಬೆಳೆದು ನಿಂತಿವೆ. ನೂರಕ್ಕೆ 90 ಭಾಗ ದೊಡ್ಡ ದೊಡ್ಡ ಮರಗಳೇ ಇಲ್ಲಿವೆ. ಎಲಕ್ಟ್ರಿಸಿಟಿ ಬೋರ್ಡಿನವರು ಮತ್ತು ರೈಲ್ವೆ ಇಲಾಖೆಯವರು ತಮಗೆ ಬೇಕಾದ ಕಂಬಗಳನ್ನು ಮತ್ತು ಸ್ಲೀಪರುಗಳನ್ನು ಪ್ರತಿ ವರ್ಷ 24 ಸಾವಿರದಿಂದ 40 ಸಾವಿರದವರೆಗೆ ಕೇಳುತ್ತಿದ್ದವರು ಈ ವರ್ಷ ಒಂದು ಲಕ್ಷ ಬೇಕೆಂದು ಕೇಳಿದರು. ಈ ಕಾಡಿನಲ್ಲಿ ಒಳ್ಳೆಯ ದೊಡ್ಡ ದೊಡ್ಡ ಮರಗಳು ಸಿಗುತ್ತವೆಂದು ತಿಳಿದು ಆ ಮರಗಳನ್ನು ಕಡಿಯಲು ಟೆಂಡರ್ ಕರೆದೆವು. ಮರಗಳನ್ನು ಕಡಿಯುವುದಕ್ಕೆ ಟೆಂಡರ್‌ನಲ್ಲಿ ಮೂರು ವರ್ಷದ ಅವಧಿಯನ್ನು ಸಹ ಕೊಟ್ಟಿದ್ದೆವು. ಈಗ ಎರಡು ವರ್ಷಗಳಿಂದ ಕಂಟ್ರಾಕ್ಟರುಗಳು ಮರಗಳನ್ನು ಕಡಿದು ಸಪ್ಲೈ ಮಾಡುತ್ತಿದ್ದರು.

ಅಧ್ಯಕ್ಷರು.—ಅವರು ಹೇಳುತ್ತಾರೆ, ಬೆಂಕಿ ಬಿದ್ದ ಬಗ್ಗೆ ತನಿಖೆ ಮಾಡಬೇಕು ಎಂದು.

ಶ್ರೀ ಬಿ. ರಾಚಯ್ಯ.—ಆ ಕಾಡಿಗೆ ಬೆಂಕಿ ಬಿದ್ದಾಗ ನಮ್ಮ ಅಸಿಸ್ಟೆಂಟ್ ಫಾರೆಸ್ಟ್ ಅಧಿಕಾರಿ ಅಲ್ಲಿಗೆ ಹೋಗಿದ್ದರು. ನಮ್ಮಲ್ಲಿ original working staff ಏನು ಇದೆ, ಅವರು ಸಹ ಆಗಿರುವ ನಷ್ಟದ ಬಗ್ಗೆ ವಿವರಗಳನ್ನು ತಯಾರು ಮಾಡುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಗೆ ಬೇರೆ ಒಂದು ಸ್ಟಾಫ್ ಕೊಟ್ಟಿದ್ದೇವೆ, ಇವರು ಸಹ ವರದಿ ತಯಾರು ಮಾಡುತ್ತಿದ್ದಾರೆ. ಈಗಾಗಲೆ ಮೂರನೆ ಎರಡು ಭಾಗದಷ್ಟು ಮರಗಳನ್ನು ಕಂಟ್ರಾಕ್ಟರ್‌ಗಳು ಕಡಿದು, ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಬೇಕಾದ ಕಂಬಗಳನ್ನು ಮತ್ತು ರೈಲ್ವೆ ಇಲಾಖೆಯವರಿಗೆ ಬೇಕಾದ ಸ್ಲೀಪರ್‌ಗಳನ್ನು ಒದಗಿಸಿದ್ದಾರೆ. 2-3-67ರಲ್ಲಿ ಆ ಕಾಡಿಗೆ ಬೆಂಕಿ ಬಿದ್ದು ಕಾಡು ಸುಟ್ಟು ಹೋಯಿತು. ಇದರಿಂದ ಜನರಿಗೆ ಮತ್ತು ಜಾನುವಾರುಗಳಿಗೆ ಯಾವ ರೀತಿಯ ಹಾನಿಯೂ ಸಹ ಆಗಿಲ್ಲ. 1 ಲಕ್ಷದ 38 ಸಾವಿರ ಘನ ಅಡಿಗಳಷ್ಟು ತಯಾರು ಮಾಡಿಟ್ಟಿದ್ದ ಸ್ಲೀಪರ್‌ಗಳು ಸುಟ್ಟುಹೋದವು. ಸುಮಾರು 7 ಲಕ್ಷ ರೂಪಾಯಿ ಗಳಷ್ಟು ನಷ್ಟವಾಯಿತು. ಈ ಬೆಂಕಿ ಬಿದ್ದಿದ್ದರಿಂದ ಸುಮಾರು 300 ಎಕರೆ ಅರಣ್ಯ ಹಾಳಾಗಿದೆ. ಬೆಂಕಿಯ ಕಾರಣದಿಂದ ಹಸಿರು ಮರಗಳು ಸಹ ಸುಟ್ಟು ಕೆಳಗೆ ಬಿದ್ದಿವೆ. ಬೆಂಕಿ ಬೀಳುವುದಕ್ಕೆ ಕಾರಣ ಈ ಕಾಡು ಕಣಿವೆಯ ರೀತಿಯಲ್ಲಿದೆ. ಎತ್ತರದಲ್ಲಿರುವ ಬೋಳು ಗುಡ್ಡದಲ್ಲಿ ಒಣಗಿದ ಹುಲ್ಲು ಇತ್ತು. ಅದಕ್ಕೆ ಬೆಂಕಿ ಬಿದ್ದಾಗ್ಗೆ ಜೋರಾಗಿ ಗಾಳಿ ಬೀಸಿದ್ದರಿಂದ, ಬೆಂಕಿ ಈ ಕಾಡಿನ ಮುನ್ನೂರು ಎಕರೆಗೂ ಅವರಿಸಿತು.

ಶ್ರೀ ಎಚ್. ಸಿದ್ದವೀರಪ್ಪ.—ಮಾರ್ಚಿ ತಿಂಗಳಲ್ಲಿ ಆ ಕಾಡಿನಲ್ಲಿ ಮಂಜು ಬೀಳುತ್ತಿರುತ್ತದೆ. ಅಂದಮೇಲೆ ಆ ಕಾಡಿಗೆ ಬೆಂಕಿ ಹಚ್ಚಲು ಭೂತ ಏನಾದರೂ ಬಂದಿತ್ತೆ! ಭೂತ ಬೆಂಕಿ ಹಚ್ಚಿದ್ದರೆ ಆ ಮಾತು ಬೇರೆ. ಇವರು ಹೇಳುವ ಮಾತನ್ನು ನಂಬುವುದಕ್ಕೆ ಅರ್ಹವಾಗಿಲ್ಲ. ಬೆಂಕಿ ಬಿದ್ದಾಗ್ಗೆ ತಾವು ಏನಾದರೂ ಹೋಗಿ ನೋಡಿದಿರಾ! ಅದರ ಬಗ್ಗೆ ತನಿಖೆ ಮಾಡಿಸಿದ್ದೀರಾ? ಈ ವಿಚಾರದ ಬಗ್ಗೆ ನಾವೇ ನಾದರೂ ಕೇಳುವುದಕ್ಕೆ ಹೋದರೆ ನಮ್ಮ ಮೇಲೆ ಲಾಯರ್ ನೋಟೀಸ್ ಕೊಟ್ಟು ಕ್ರಿಮಿನಲ್ ಕೇಸ್ ಹಾಕುತ್ತಾರೆ.

ಶ್ರೀ ಬಿ. ರಾಚಯ್ಯ.—ನಾನು ಹೋಗಿ ನೋಡಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಹುಲ್ಲಿಗೆ ಬೆಂಕಿ ಬಿದ್ದರೆ ಗಟ್ಟಿ ಮರಗಳು ಸುಡುವುದಿಲ್ಲ. ಈ ವಿಚಾರ ಮಂತ್ರಿಗಳಿಗೂ ಸಹ ಗೊತ್ತಿದೆ.

ಶ್ರೀ ಬಿ. ರಾಚಯ್ಯ.—ಅಲ್ಲಿ ಬಿದಿರುಗಳನ್ನು ತಯಾರುಮಾಡತಕ್ಕ ಕಾಲದಲ್ಲಿ ಒಣಗಿಹೋಗಿರುವ ಡೆಬ್ರೀಸ್ ಬಹಳವಾಗಿದ್ದುದರಿಂದ ಅದು ಬೇಗನೆ ಹತ್ತಿಕೊಂಡಿತು. ಆಗ ಅಸಿಸ್ಟೆಂಟ್ ಫಾರೆಸ್ಟ್ ಆಫೀಸರ್ ತೀವ್ರವಾಗಿ ಅದನ್ನು ತನಿಖೆಮಾಡಿ ಫೈರ್ ಬ್ರಿಗೇಡನ್ನು ತರಿಸುವುದಕ್ಕೆ......

Mr. SPEAKER.- Fire Brigades were not immediately available.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸುಮಾರು 15 ದಿವಸಗಳು ಬೆಂಕಿ ಉರಿದಿದೆ. ಕೋಟ್ಯಾಂತರ ರೂಪಾಯಿಗಳು ಫಾರೆಸ್ಟ್ ಇಲಾಖೆಯವರಿಗೆ ನಷ್ಟವಾಗಿರುವಾಗ ಸರ್ಕಾರಕ್ಕೆ ಕಾಡಿನಿಂದ ಉತ್ಪತ್ತಿ ಹೇಗೆ ಆಗುತ್ತದೆ ?

ಶ್ರೀ ಎಚ್. ಸಿದ್ದವೀರಪ್ಪ.—ಆ ನಷ್ಟ 30 ಕೋಟಿ ರೂಪಾಯಿಗಳ ಮೇಲೆ ಇತ್ತು. ಅದನ್ನು ಅರಣ್ಯ ಇಲಾಖೆಯವರು ಎಕ್ಸ್‌ಪ್ಲಾಯಿಟ್ ಮಾಡಿದರೇ ?

ಶ್ರೀ ಬಿ. ರಾಚಯ್ಯ.—ಆ ಭಾಗದ ವಿಸ್ತೀರ್ಣ 72 ಸಾವಿರದ 198 ಎಕರೆಗಳು. ಅದರಲ್ಲಿ 300 ಎಕರೆಗಳಷ್ಟು ಬೆಂದುಹೋಗಿದೆ ಎಂಬುದಾಗಿ ವರದಿ ಬಂದಿದೆ. ಅದರೊಳಗೆ ಎಷ್ಟೋ ಮರಗಳು ನಷ್ಟ ವಾಗಿವೆ. ಆ ಮರಗಳನ್ನು ಲೆಕ್ಕಹಾಕಿದರೆ ಮಾನ್ಯ ಸದಸ್ಯರು ಹೇಳುವಷ್ಟು ಆಗುವುದಿಲ್ಲ. ಒಟ್ಟು ಅದ ರಿಂದ 7 ಲಕ್ಷ ರೂಪಾಯಿ ಚಿಲ್ಲರೆಗಳಷ್ಟು ನಷ್ಟವಾಗಿದೆ.

ಶ್ರೀ ಎಸ್. ಶಿವಪ್ಪ.—ಮಂತ್ರಿಗಳು ಅಲ್ಲಿಗೆ ಏಕೆ ಹೋಗಲಿಲ್ಲ ?

Mr. SPEAKER.—After the Budget is passed, all of you can go and I will also join.

ಶ್ರೀ ಎಚ್. ಸಿದ್ದವೀರಪ್ಪ.—ತಾವು ಓದುತ್ತಾ ಇರತಕ್ಕ ವರದಿ ತಮ್ಮ ಅಧಿಕಾರಿಗಳು ಕೊಟ್ಟಿ ದ್ದುದ್ದಾನೇ ? ಆ ರೀತಿ ಅರಣ್ಯ ಇಲಾಖೆಯ ಅಧಿಕಾರಿಗಳು ಅದನ್ನು ಕೊಟ್ಟಾದ ಮೇಲೆ ಅದು ಪ್ರಕಟ ವಾದುದು ಮಾರ್ಚ್ ತಿಂಗಳಲ್ಲಿ. ಇಲ್ಲಿ ಆ ವಿಷಯ ಬಂದಮೇಲೆ ಅರಣ್ಯ ಇಲಾಖೆಯ ರೀಜನಲ್ ಆಫೀ ಸರ್‌ಸ್ ಅರಣ್ಯ ಸಂಪತ್ತು ಹಾಳಾಗಿ ಹೋಯಿತು, ದೇಶದ ಸ್ವತ್ತು ನಷ್ಟವಾಯಿತು ಎಂದು ವರದಿಕೊಟ್ಟ ಮೇಲೆ ತಾವು ಒಂದು ಪ್ರೋಗ್ರಾಂ ಅಲ್ಲಿಗೆ ಹಾಕಿಕೊಂಡು ಏಕೆ ಹೋಗಲಿಲ್ಲ ?

ಶ್ರೀ ಬಿ. ರಾಚಯ್ಯ.—ನಾನು ಪ್ರೋಗ್ರಾಂ ಹಾಕಿದ್ದು ನಿಜ. ಖಾತರಿಯಾಗಿ ಅಲ್ಲಿಗೆ ಹೋಗಿದ್ದೆ. ಆದರೆ ಅಲ್ಲಿ ಹುಲಿಗೆ ಸಿಕ್ಕಿಹಾಕಿಕೊಂಡು ಬದುಕಿ ಬರುವುದೇ ಕಷ್ಟವಾಯಿತು.

ಶ್ರೀ ಎಸ್. ಶಿವಪ್ಪ.—ಹಾಗಿದ್ದಪಕ್ಷದಲ್ಲಿ ಹೆಲಿಕ್ಯಾಫ್ಟರ್ ತಮಗಾಗಿ ಅಲ್ಲಿಗೆ ಹೋಗುತ್ತಿತ್ತು.

ಶ್ರೀ ಎಸ್. ಶಿವಪ್ಪ.—ಮಾರ್ಚ್ ತಿಂಗಳಲ್ಲಿ ಮಳೆ ಇತ್ತೋ ?

ಶ್ರೀ ಬಿ. ರಾಚಯ್ಯ.—ಮಳೆ ಇರಲಿಲ್ಲ. ನಾನು ಹೇಳುವುದು ಒಂದು, ಅವರು ಕೇಳುವುದು ಒಂದು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಸರಿಯಾದ ಮಾಹಿತಿಯನ್ನು ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಕೊಡಬೇಕಾದರೆ ಸ್ಟಾಫ್ ಇನ್‌ಸ್ಪೆಕ್ಷನ್ ಮಾಡದೆ ಕೊಡುವುದಕ್ಕಾಗುವುದಿಲ್ಲ. ಅವರು ಇನ್‌ಸ್ಪೆಕ್ಷನ್ ಮಾಡಿದ್ದರೆ ಈ ರೀತಿಯಾಗಿ ತಪ್ಪು ಮಾಹಿತಿಯನ್ನು ಇಲ್ಲಿ ಕೊಡುತ್ತಿರಲಿಲ್ಲ.

Mr. SPEAKER.—No more disturbance till the reply is over.

Sri S. SIVAPPA.—When the correct reply is not given can we keep quiet ?

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮಾನ್ಯ ಮಂತ್ರಿಗಳು ತಪ್ಪು ಮಾಹಿತಿಯನ್ನು ಕೊಡುತ್ತಿದ್ದರೂ ನಾವು ಸಮಾಧಾನ ತೆಗೆದುಕೊಳಬೇಕೆಂದು ತಾವು ಹೇಳುತ್ತೀರಾ ? ಉತ್ತರ ಕೊಡುವುದಕ್ಕೆ ಅವರಿಗೆ 4 ಘಂಟೆಗಳು ಹಿಡಿದರೂ ನಮಗೆ ತೊಂದರೆ ಇಲ್ಲ.

ಶ್ರೀ ಬಿ. ರಾಚಯ್ಯ.—ಇದು 2-3-67ರಲ್ಲಿ ನಡೆದುದು. ತಕ್ಷಣ ಹೋಗುವುದಕ್ಕೆ ನಾನು ಈ ಅಧಿಕಾರದಲ್ಲಿರಲಿಲ್ಲ. ನಂತರ ಮತ್ತೆ ನಾನು ಏಪ್ರಿಲ್ 8—9ಕ್ಕೆ ಹೋಗಬೇಕು ಎಂಬುದಾಗಿ ಒಂದು ಪ್ರೋಗ್ರಾಂ ಹಾಕಿಕೊಂಡಿದ್ದೆ. ನನಗೆ ಆಗ ಅನಿವಾರ್ಯವಾದ ಕಾರಣ, ನಾನು ಕಾಯಿಲೆ ಇದ್ದುದರಿಂದ ಅಲ್ಲಿಗೆ ಹೋಗಲಿಕ್ಕಾಗಲಿಲ್ಲ. ಆದರೆ ನಾನು ಅಲ್ಲಿಗೆ ಹೋಗಿ ನೋಡಬಾರದು ಎಂದು ಅಲ್ಲ. ಮಾನ್ಯ ಸದಸ್ಯರಿಗಿಂತಲೂ ನನಗೆ ಆಗ ಹೆಚ್ಚಿನ ಕಾತುರತೆ ಇತ್ತು. ಈಗ ವರದಿ ಬಂದ ತಕ್ಷಣ ಅದನ್ನು ಸಭೆಯ ಮುಂದೆ ತಿಳಿಸುತ್ತಿದ್ದೇನೆ. ಇದರಲ್ಲಿ ಏನಾದರೂ ಸಂದೇಹ ಮಾನ್ಯ ಸದಸ್ಯರಿಗೆ ಇದ್ದರೆ, ನಾನು ಖಂಡಿತವಾಗಿ ಇಂಪಾರ್ಷಿಯಲ್ ಎನ್‌ಕ್ವೈರಿ ಬೇಕಾದರೂ ಮಾಡುತ್ತೇನೆ. ಮಾನ್ಯ ಸದಸ್ಯರಿಗೆ ಯಾವ ತರಹ ವಿಚಾರಣೆ ಬೇಕೆಂಬುದಾಗಿ ಹೇಳುತ್ತಾರೋ, ಜುಡಿಷಿಯಲ್ ಎನ್‌ಕ್ವೈರಿ ಬೇಕೋ ಅಥವಾ ನಾನ್ ಅಫಿಷಿಯಲ್ ಎನ್‌ಕ್ವೈರಿ ಬೇಕೋ, ಅಥವಾ ಇನ್ನಾವ ತರಹ ಎಕ್ವೈರಿ ಬೇಕೋ ಅದನ್ನು ಮಾಡಲು ನಾನು ಸಿದ್ಧ.

Sri H. SIDDAVEERAPPA.—Thank you very much for the assurance that you will hold an enquiry.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರನೇಕರು ಇನ್ನೂ ಬಹಳ ವಿಷಯಗಳನ್ನು ಹೇಳಿದ್ದಾರೆ. ಅವರಿಗೆ ಸ್ವಲ್ಪ ಉತ್ತರ ಹೇಳಬೇಕಾಗುತ್ತದೆ. ಭಗವತಿ ಅರಣ್ಯ ವಿಷಯವಾಗಿ ಈಗಾಗಲೇ ಹೇಳಿದ್ದೇನೆ.

ಇನ್ನು ಕೆಲವು ಕೈಗಾರಿಕೆಗಳಿಗಾಗಿ ಭೂಮಿ ಕೊಡುವ ವಿಷಯದಲ್ಲಿ ಕೆಲವು ನೀತಿಗಳನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಮತ್ತೆ ಕೆಲವು ಮಾನ್ಯ ಸದಸ್ಯರು ಸ್ಟ್ಯಾಂಪು ಅಭಾವವಾಗಿದೆ ಎಂಬುದಾಗಿ ಪ್ರಸ್ತಾಪಮಾಡಿದರು. ಹಿಂದೆ ಇದೇ ಸಭೆಯಲ್ಲಿ ಈ ವಿಚಾರವಾಗಿ ಪ್ರಶ್ನೋತ್ತರಗಳು ಬಂದಾಗ 7 ಕೋಟಿ 25 ಲಕ್ಷ ರೂಪಾಯಿಗಳಷ್ಟು ಬೆಲೆ ಬಾಳತಕ್ಕ ಸ್ಟ್ಯಾಂಪು ನಮಗೆ ಬೇಕು ಎಂಬುದಾಗಿ ಕೇಳಿದ್ದೇವೆಂದು ಹೇಳಿದ್ದೇನೆ. ಕಂಟ್ರೋಲರ್ ಆಫ್ ಸ್ಟ್ಯಾಂಪ್ಸ್ ಅವರೊಡನೆ ನಾವು ಪತ್ರ ವ್ಯವಹಾರ ಮಾಡಿದಮೇಲೆ ಇವತ್ತಿನವರೆಗೂ 4 ಕೋಟಿ ರೂಪಾಯಿಗಳಷ್ಟು ಸ್ಟ್ಯಾಂಪು ಕಾಗದ ಪತ್ರಗಳನ್ನು ಒದಗಿಸಿಕೊಟ್ಟಿದ್ದಾರೆ. ಇಂಡಿಯಾದೇಶದಲ್ಲಿ ಅದನ್ನು ಸಾಧ್ಯವಾದಮಟ್ಟಿಗೆ ಪ್ರಿಂಟ್‌ಮಾಡಿ ಕೊಡುವುದಕ್ಕೆ ಒಪ್ಪಿದ್ದಾರೆ. ಇಲ್ಲಿ ಮಾಡಿದರೆ ಫೋರ್ಜರಿಯಾಗುತ್ತದೆಂದು ಅದನ್ನು ಕೇಂದ್ರ ಸರ್ಕಾರದ ಆಡಳಿತದಲ್ಲಿ ಇಟ್ಟುಕೊಂಡಿದ್ದಾರೆ. ಆದ್ದರಿಂದ ಈಗ ಅದರ ಬಗ್ಗೆ ಎಷ್ಟು ಕಷ್ಟ ಪರಿಸ್ಥಿತಿಯೋ ಅದನ್ನು ಹೋಗಲಾಡಿಸುವುದಕ್ಕೆ ಪ್ರಯತ್ನಮಾಡಿದ್ದೇವೆ. ಸಬ್ ರಿಜಿಸ್ಟ್ರಾರ್ ಮತ್ತು ಟ್ರೆಜರಿ ಆಫೀಸರು ಅವರು ವ್ಯಾಲ್ಯು ಆಫ್ ಸ್ಟ್ಯಾಂಪನ್ನು ಜನರಿಂದ ತೆಗೆದುಕೊಂಡು ಆರ್ಡಿನರಿಯಾಗಿ ರಿಜಿಸ್ಟರ್ ಮಾಡುವಂತೆ ಎಲ್ಲಾ ಕೋರ್ಟಿನ ಡಾಕ್ಯುಮೆಂಟುಗಳನ್ನು ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಫಾರಿನ್ ಎಕ್ಸ್‌ಚೇಂಜು ದೊರೆಯುವುದು ಕಷ್ಟವಾದುದರಿಂದ ನಮಗೆ ಎಷ್ಟು ಸ್ಟ್ಯಾಂಪು ಕಾಗದ ದೊರೆಯಬೇಕೋ ಅಷ್ಟು ದೊರೆಯಲಿಲ್ಲ. ಅಂತಹ ಉಲ್ಬಣ ಪರಿಸ್ಥಿತಿ ಬಂದಿದೆ. ಅದಕ್ಕಾಗಿ

ತೀವ್ರ ಕ್ರಮವನ್ನು ಬೇಕಾದಷ್ಟು ತೆಗೆದುಕೊಂಡಿದ್ದೇವೆ. ಈಗ ಕೆಲವು ಸ್ಟ್ಯಾಂಪುವೆಂಡರ್ಸ್ ಸ್ಟ್ಯಾಂಪುಗಳನ್ನು ಕಾಳಸಂತೆಯಲ್ಲಿ ಮಾರುತ್ತಿದ್ದಾರೆಂದು ಅನೇಕ ದೂರುಗಳು ಸರ್ಕಾರಕ್ಕೆ ಬಂದುದರಿಂದ ಎಲ್ಲಾ ವೆಂಡರುಗಳೂ ತಮ್ಮಲ್ಲಿರತಕ್ಕ ಸ್ಟ್ಯಾಂಪು ಸ್ಟಾಕನ್ನೆಲ್ಲಾ ಕೂಡಲೇ ಪ್ರಕಟಣೆ ಮಾಡಬೇಕೆಂದು ಹೇಳಿದ್ದೇವೆ. ಆದ್ದರಿಂದ ಈಗ ಡಾಕ್ಯುಮೆಂಟ್ಸ್ ರಿಜಿಸ್ಟರ್ ಆಗುವ ಕಾಲದಲ್ಲಿ ತಡವಾಗುತ್ತಿದೆ. ಅದಕ್ಕಾಗಿ ಒಂದು ತಿದ್ದುಪಡಿಯನ್ನು ರಿಜಿಸ್ಟ್ರೇಷನ್ ಆಕ್ಟಿಗೆ ಸೂಚನೆಮಾಡಿದ್ದೇವೆ. ಅದು ಈ ಸಭೆಯ ಮುಂದೆ ಬರುತ್ತದೆ. ಅದು ಈ ಸಭೆಯ ಮುಂದೆ ಬಂದಮೇಲೆ ಈ ಬಗ್ಗೆ ಇರತಕ್ಕ ಕಷ್ಟ ಪರಿಹಾರವಾಗುತ್ತದೆಂದು ನಾನು ತಿಳಿದಿದ್ದೇನೆ.

SRI H. SIDDAVEERAPPA.—In one case, the Divisional Commissioner transferred the officers in the usual course. Without the knowledge of the Divisional Commissioner, an order was issued from the Government transferring the Tahsildar to some other place. The Divisional Commissioner threatened that Tahsildar to keep him under suspension because he did not obtain his permission before he handed over the charge. The Divisional Commissioner did not know anything about this transfer. What do you say about this ?

ಶ್ರೀ ಬಿ. ರಾಚಯ್ಯ.—ಡಿವಿಷನಲ್ ಕಮೀಷನರ್ಸ್‌ಗೆ ಟ್ರಾನ್ಸ್‌ಫರ್ಸ್ ಮಾಡತಕ್ಕ ಅಧಿಕಾರ ಕೊಟ್ಟಿದ್ದೇವೆ. ಅದರ ಪ್ರಕಾರ ಅವರು ಅಯಾಯ ಡಿವಿಷನ್‌ಗೆ ಸಂಬಂಧಪಟ್ಟ ಹಾಗೆ ಕೆಲವು ವರ್ಗಾವರ್ಗಿ ಮಾಡುತ್ತಾರೆ. ಹೀಗೆ ಒಂದು ಡಿವಿಷನ್‌ನಿಂದ ಇನ್ನೊಂದು ಡಿವಿಷನ್‌ಗೆ ವರ್ಗ ಆಗುವ ಕಾಲದಲ್ಲಿ ಸರ್ಕಾರಕ್ಕೆ ಕೆಲವು ಮನವಿಗಳು ಬರುತ್ತವೆ. ಅಂತಹ ಸಂದರ್ಭದಲ್ಲಿ ಈ ರೀತಿಯಾದಂಥ ಪರಿಸ್ಥಿತಿ ಒದಗಿ ಬರುತ್ತದೆ. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಕೆಲಸ ಮಾಡಿದ ತಾಸೀಲ್ದಾರ್ ಆರು ತಿಂಗಳು ಕೂಡ ಅಲ್ಲಿ ಇರಲಿಲ್ಲ. ಅವರನ್ನು ಹರಿಹರಕ್ಕೋ, ದಾವಣಗೆರೆಗೋ ವರ್ಗ ಮಾಡಿದ್ದರು. ಮೂರು ವರ್ಷ ಆದಮೇಲೆ ವರ್ಗ ಮಾಡಬೇಕು, ಸಾಧ್ಯವಾದಷ್ಟುಮಟ್ಟಿಗೆ ಎರಡು ವರ್ಷದವರಗೆ ಅವರನ್ನು ಅಲ್ಲಿಯೇ ಇಡತಕ್ಕದ್ದು ಮತ್ತೆ ಡಿವಿಷನಲ್ ಕಮೀಷನರ್ ಯಾರನ್ನು ವರ್ಗ ಮಾಡಿದ್ದರೋ ಅವರನ್ನು ಅಲ್ಲಿಯೇ ಇಡತಕ್ಕದ್ದು ಎಂದು ಸರ್ಕಾರ ಅವರಿಗೆ ಆರ್ಡರ್ ಕಳುಹಿಸಿಕೊಟ್ಟಿದೆ.

ಶ್ರೀ ಎಸ್. ಗೋಪಾಲ ಗೌಡ.—ಶಿಕಾರಿಪುರದ್ದು ಏನು ಮಾಡಿದಿರಿ ?

ಶ್ರೀ ಬಿ. ರಾಚಯ್ಯ.—ಶಿಕಾರಿಪುರದ್ದು ಡಿವಿಷನಲ್ ಕಮೀಷನರ್ ಅಧಿಕಾರಕ್ಕೆ ಬರುತ್ತದೆ. ಅವರನ್ನು ಅಲ್ಲಿ ಇಟ್ಟುಕೊಳ್ಳುವುದು ಸರಿಯಲ್ಲ ಎಂದು ಜನ ಒಂದು ಟೆಲಿಗ್ರಾಂ ಕಳುಹಿಸಿದರು. ಬಹಳ ಅನ್ಯಾಯವಾಗಿದೆ, ಬರೀ ಬ್ರಾಹ್ಮಣರಾದಂಥವರಿಗೆ ತಾಸೀಲ್ದಾರ್ ಹುದ್ದೆ ಕೊಡುತ್ತೀರಿ, ಬೇರೆ ಜನಾಂಗದವರಿಗೆ ಕೊಡುವುದಿಲ್ಲ ಎಂದು. ಅದಕ್ಕೋಸ್ಕರವಾಗಿ ಈ ರೀತಿ ಜನರ ಕೋರಿಕೆ ಪ್ರಕಾರ ಅವರನ್ನು ವರ್ಗ ಮಾಡಿದ್ದೇನೆ ಎಂದು ಹೇಳಿದರು. ಅವರು ಹೀಗೆ ಹೇಳಿದ ಮೇಲೆ ಏನು ಆರ್ಡರ್ ಕೊಟ್ಟಿದ್ದೀರೋ ಅದನ್ನು ಜಾರಿಗೆ ಕೊಡಿ ಎಂದು ಹೇಳಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಡಿವಿಷನಲ್ ಕಮೀಷನರ್ ಆರ್ಡರ್ ಮಾಡಿದರು. ಆದರೆ ಬಳ್ಳಾರಿಗೆ ಅಮಲ್ದಾರರು ಹೋಗಿರಲಿಲ್ಲ. ಚಿತ್ರದುರ್ಗ ತಾಸೀಲ್ದಾರರನ್ನು ಕಳುಹಿಸಿದ್ದು ಡಿವಿಷನಲ್ ಕಮೀಷನರ್ ಕಳಿಸಿದ ಆರ್ಡರನ್ನು ಕ್ಯಾನ್ಸಲ್ ಮಾಡಿ ನೀವು ಹಾಗೆಯೇ ಕಳುಹಿಸಿದ್ದೀರಿ.

ಶ್ರೀ ಬಿ. ರಾಚಯ್ಯ.—ಅವರು ಹೇಳಿದ ಹಾಗೆ ನಾವು ಮಾಡಿದ್ದೇವೆ ಎಂದರೆ ನಂಬಬೇಕು. ಫೈಲ್ ಬೇಕಾದರೆ ಕೊಡುತ್ತೇನೆ. ಆ ಕಡೆಯ ಮಾನ್ಯ ಸದಸ್ಯರಾಗಲಿ ಈ ಕಡೆಯ ಮಾನ್ಯ ಸದಸ್ಯರಾಗಲಿ ದಯಮಾಡಿ ಇಂತಹ ವರ್ಗಾವರ್ಗಿಗಳಿಗೆ ಕೈ ಹಾಕಬಾರದು.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಯಾರೂ ಕೈ ಹಾಕುವುದಿಲ್ಲ.

ಶ್ರೀ ಬಿ. ರಾಚಯ್ಯ.—ಇನ್ನೊಂದು ಮಾತನ್ನು ಒಪ್ಪಿಕೊಳ್ಳುತ್ತೇನೆ. ಆಡಳಿತದಲ್ಲಿ ಸಾಧ್ಯವಾದ ಮಟ್ಟಿಗೆ ಸ್ಟೇಬಿಲಿಟಿ ಇರಬೇಕು, ಅಧಿಕಾರಿಗಳು ಸಂತುಷ್ಟರಾಗಿ ಇರಬೇಕು. ಹೀಗಿದ್ದರೆ ಸ್ವಲ್ಪ ಮಟ್ಟಿಗೆ ತಮ್ಮ ದಕ್ಷತೆ ತೋರಿಸುವುದಕ್ಕೆ ಸಾಧ್ಯ ಆಗುತ್ತದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ಮಾನ್ಯ ಸದಸ್ಯರೂ ಜವಾಬ್ದಾರಿಯಾಗಿದ್ದಾರೆ. ಡಿವಿಷನಲ್ ಕಮೀಷನರ್, ಡೆಪ್ಯೂಟಿ ಕಮೀಷನರ್ ಕಡೆ ಹೋಗಿ ಅವರನ್ನು ಕೇಳಿಕೊಂಡು ಬಂದಿದ್ದಾರೆ. ಅದರ ಪಟ್ಟಿಯನ್ನೂ ಕೂಡ ಬೇಕಾದರೆ ಕೊಡುತ್ತೇನೆ ಎಂದು ತಮ್ಮ ಮುಖಾಂತರ ಈ ಸಭೆಯಲ್ಲಿ ಕೇಳಿಕೊಳ್ಳುತ್ತೇನೆ, ತಾವು ಹೇಗೆ ನನ್ನ ಮೇಲೆ ಕಟ್ಟು ನಿಬಂಧನೆಯನ್ನು ಹಾಕುತ್ತೀರೋ ಅದೇ ರೀತಿಯಲ್ಲಿ ಲಂಚ

(ಶ್ರೀ ಬಿ. ರಾಚಯ್ಯ)

ಕೋರರು ಇದ್ದರೆ ಅದನ್ನು ನಮಗೆ ಹೇಳಿ. ನಾವು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಅಧಿಕಾರವನ್ನು ನಡೆಸಿಕೊಂಡು ಹೋಗುವುದಕ್ಕೆ ಅವಕಾಶವನ್ನು ಕೊಡಬೇಕೆಂದು ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ. ನಿರ್ದಾಕ್ಷಿಣ್ಯವಾಗಿ, ಪಕ್ಷಾತೀತವಾಗಿ ಯಾರು ಒಳ್ಳೆಯ ಕೆಲಸ ಮಾಡುತ್ತಾರೋ ಅಂತಹವರಿಗೆ ಬೆನ್ನು ತಟ್ಟುವಂಥಾದ್ದು ನನ್ನ ಸ್ವಾಭಾವಕ್ಕೆ ಬಂದಿದೆ. ಈ ದೃಷ್ಟಿಯಿಂದ ಕೇಳಿ ಕೊಳ್ಳುತ್ತೇನೆ. ಒಂದು ವರ್ಷ ಅವಕಾಶ ಕೊಡಿ. ತಮ್ಮ ಕೆಲಸ ಬೇಗ ಆಗಲಿ ಎಂದು ಎಲ್ಲಿಯು ವರೆಗೆ ಇರುತ್ತದೋ ಅಲ್ಲಿಯವರೆಗೂ ಕರಪಷನ್ ಇರುತ್ತದೆ. ದೇಶದಲ್ಲಿರತಕ್ಕ ಜನ ಸರ್ಕಾರಿ ನೌಕರರಿಗೆ ಸೇರಿದಾಕ್ಷಣ ಬೇರೆ ರೀತಿಯಾಗಿರುವುದಕ್ಕಾಗುವುದಿಲ್ಲ. ಒಳ್ಳೆಯ ಕೆಲಸ ಮಾಡಿರತಕ್ಕ ಅಧಿಕಾರಿಗಳು ಕೂಡ ಈ ದೇಶದಲ್ಲಿ ಹೆಚ್ಚು ಇದ್ದಾರೆ. ಹಾಗೆ ಇರುವುದರಿಂದ ನಮಗೆ ಸತ್ಯ, ಧರ್ಮ ಸ್ವಲ್ಪಮಟ್ಟಿಗೆ ಉಳಿದುಕೊಂಡು ಬಂದಿದೆ. ಒಳ್ಳೆಯ ಕೆಲಸ ಆಗಿದೆ, ಒಳ್ಳೆಯ ಅಧಿಕಾರಿಗಳು ಇದ್ದಾರೆ, ಒಳ್ಳೆಯ ಸದಸ್ಯರು ಇದ್ದಾರೆ, ಒಳ್ಳೆಯ ಮಂತ್ರಿಗಳು ಇದ್ದಾರೆ. ಅವರಿಗೆ ಬೆನ್ನು ತಟ್ಟುವುದಕ್ಕೆ ಕಲಿಯಬೇಕು, ಇಲ್ಲದಿದ್ದರೆ ಅವರಿಗೆ ಕೆಲಸ ಮಾಡುವುದಕ್ಕೆ ಮನಸ್ಸು ಬರುವುದಿಲ್ಲ.

ಇನ್ನು ಮುಜರಾಯಿ ವಿಷಯದಲ್ಲಿ ಮಾನ್ಯ ಸದಸ್ಯರು ಹೇಳಿದ್ದಾರೆ. ನಮ್ಮಲ್ಲಿ 35 ಸಾವಿರ ದೇವಸ್ಥಾನಗಳು ಇವೆ. ಅದರಿಂದ ಅವುಗಳಿಗೆ 2 ಲಕ್ಷ 90 ಸಾವಿರ ರೂಪಾಯಿಗಳ ಉತ್ಪತ್ತಿ ಬರುತ್ತದೆ. ಅದಕ್ಕೋಸ್ಕರ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಯೂನಿಫಾರಂ ಕಾನೂನು ತರಬೇಕು ಎಂದು ಸರ್ಕಾರದ ಉದ್ದೇಶ ಇದೆ. ದೇವಸ್ಥಾನದ ಉತ್ಪತ್ತಿಯನ್ನು ಹೆಚ್ಚು ಮಾಡಬೇಕು. ಯಾತ್ರಾರ್ಥಿಗಳಿಗೆ ಯಾವರೀತಿ ಸೌಕರ್ಯ ಒದಗಿಸಬೇಕು. ದೇವಸ್ಥಾನಗಳಿಗೆ ಪ್ರತಿನಿತ್ಯವೂ ನಡೆಯತಕ್ಕ ಕರ್ತವ್ಯ ಏನು ಇದೆ ಅದನ್ನು ನಡೆಸಿಕೊಂಡು ಹೋಗತಕ್ಕಂಥ ಉದ್ದೇಶದಿಂದ ಕಾನೂನು ತರುತ್ತಿದ್ದೇವೆ.

ಇನ್ನು 39 ಸಾವಿರ ಚಿಲ್ಲರೆ ಎಕರೆ ಭೂಮಿ ಟೆಂಪಲ್ ಸರ್ವೆಂಟ್ಸ್ ಸ್ವಾಧೀನದಲ್ಲಿದೆ. ಇನ್ನು 1 ಲಕ್ಷ ಎಕರೆ ಚಿಲ್ಲರೆ ಬೇರೆ ಗೇಣಿದಾರರ ಕೈಯಲ್ಲಿ ಇದೆ. ಇದಕ್ಕೆ ಸಂಬಂಧಪಟ್ಟಹಾಗೆ ಭೂಮಿ ಯನು ಹರಾಜು ಮಾಡುವುದರಿಂದ ಟೆನೆಂಟ್ಸ್ ರಕ್ಷಣೆ ಇಲ್ಲ. ಇನಾಂ ಅಬಾಲಿಷನ್ ಆಕ್ಟ್ ಪ್ರಕಾರ ಏನು ರಕ್ಷಣೆ ಕೊಡಬೇಕಾಗಿತ್ತೋ ಆ ರಕ್ಷಣೆ ಕೊಟ್ಟಿಲ್ಲ. ಪ್ರತಿ ವರ್ಷ ಹರಾಜು ಮಾಡುವುದರಿಂದ ಅದರ ಮೇಲೆ ಪಟ್ಟ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದಿಲ್ಲ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ಇನ್ನುಮುಂದೆ ನಾವು ಏನು ಮಾಡಬೇಕು, ಯಾವ ರೀತಿ ಸಾಗುವಳಿಗೆ ಕೊಡಬೇಕು. ಅವರಿಗೆ ಎಷ್ಟರಮಟ್ಟಿಗೆ ರಕ್ಷಣೆ ಕೊಡಬೇಕು ಎನ್ನುವ ಒಂದು ಕಾನೂನನ್ನು ಸಿದ್ಧಪಡಿಸುತ್ತಿದ್ದೇವೆ. ಈಗ ಅವರಿಗೆ ಟೆನೆನ್ಸಿ ತೊಂದರೆ ಮಾಡಬಾರದು ಎನ್ನುವ ಸೂಚನೆಯನ್ನು ನಾವು ಅಧಿಕಾರಿಗಳಿಗೆ ಕೊಟ್ಟಿದ್ದೇವೆ.

6-00 P.M.

ಮತ್ತೇ ಭೂಸುಧಾರಣೆಯ ಕಾನೂನು ಹಾಗೆಯೇ ಉಳಿದಿದೆ, ಅದರ ಕೆಲಸಕಾರ್ಯಗಳು ಮುಂದುವರಿದಂತಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಬಹುಶಃ ರೂಲ್ಸ್ ಕೂಡ ತಯಾರಾಗಿದೆ. ಮೈಸೂರು ಸಂಸ್ಥಾನದಲ್ಲಿ ಅದನ್ನು ಜಾರಿಗೆ ಕೊಡಬೇಕು ಎಂದು ಸೂಚನೆ ಕೊಟ್ಟು ಜಮೀನ್ದಾರರು ತಮ್ಮ ಭೂಮಿಯನ್ನು ವಾಪಸ್ಸು ಪಡೆದುಕೊಳ್ಳುವುದಕ್ಕೆ ಅವಕಾಶವನ್ನು ಕೊಟ್ಟಿರತಕ್ಕವು ಕೆಲವು ಇವೆ. ಕೆಲವು ಮುಕ್ತಾಯವಾಗುತ್ತಾ ಬಂದಿವೆ. ಮತ್ತು ರೆವಿನ್ಯೂ ಟ್ರಿಬ್ಯುನಲ್‌ನವರು ಈ ಕಾನೂನು ಪ್ರಕಾರ ಕೇಸುಗಳನ್ನು ನಡೆಸಬೇಕು. ಹೆಚ್ಚು ಸಂಖ್ಯೆಯಲ್ಲಿ ಮುನ್‌ಸೀಫ್‌ಗಳು ಬೇಕು ಎಂದು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಶಿವಮೊಗ್ಗಾದಿಂದ ವರ್ತಮಾನ ಬಂದಿದೆ. 60 ಸಾವಿರ ಅಪ್ಲಿಕೇಷನ್‌ಗಳು ಲ್ಯಾಂಡ್ ರೆವಿನ್ಯೂ ಟ್ರಿಬ್ಯುನಲ್ ಮುಂದೆ ಬಂದಿವೆ. ಆದಷ್ಟು ಬೇಗ ಅದಕ್ಕೆ ಬೇಕಾದ ಸಿಬ್ಬಂದಿಯನ್ನು ಒದಗಿಸಿ ಈ ಒಂದು ಅನಿಶ್ಚಿತ ಪರಿಸ್ಥಿತಿ ಏನಿದೆ ಅದನ್ನು ಬೇಗ ಇತ್ಯರ್ಥ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆ.

ಇನ್ನು ಅಳಿಯ ಸಂತಾನದ ಭೂಮಿಗೆ ಸಂಬಂಧಪಟ್ಟಹಾಗೆ ಕೆಲವು ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಅಳಿಯ ಸಂತಾನದ ಕಾನೂನಿನ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚೆಯಾಗಿದೆ. ಅವರಿಗೆ ತೊಂದರೆಯಾಗದ ರೀತಿಯಲ್ಲಿ ಎಷ್ಟರಮಟ್ಟಿಗೆ ಗೇಣಿದಾರರಿಗೆ, ಜಮೀನ್ದಾರರಿಗೆ ಪರಿಹಾರವನ್ನು ಹುಡುಕುವುದಕ್ಕೆ ಸಾಧ್ಯವಿದೆಯೋ ಅಷ್ಟರಮಟ್ಟಿಗೆ ಹುಡುಕಿ ಬದಲಾವಣೆ ಸಾಧ್ಯವಾದರೆ ಅದನ್ನು ತರುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ಗೇಣಿಶಾಸನದ ಕಾನೂನು ಪ್ರಕಾರ ತಹಶೀಲ್ದಾರರ ಹತ್ತಿರ ಕೆಲವು ಕೇಸುಗಳು ಪೆಂಡಿಂಗ್ ಉಳಿದಿವೆ. ಇವು ನಿಧಾನವಾಗುವುದಕ್ಕೆ ಕಾರಣ ಪಾರ್ಟಿಯ ವಕೀಲರು ಯಾರು ಇದ್ದಾರೋ ಅವರು ಕೇಸುಗಳ ಅಡ್ಜರ್ನ್‌ಮೆಂಟ್ ಕೇಳುವುದರಿಂದ ಇವು ನಿಧಾನವಾಗುತ್ತಿವೆ. ತಹಶೀಲ್ದಾರರಿಗೆ ಲೆವಿ ವಸೂಲು ಮಾಡುವುದು ಒಂದು ಕಡೆ, ಆಹಾರವನ್ನು ವಸೂಲು ಮಾಡತಕ್ಕದ್ದು ಮತ್ತು ಇತರೇ ರೆಗ್ಯುಲರ್ ಕೆಲಸಗಳು ಇತ್ಯಾದಿ ಕೆಲಸಗಳು ಇರುವುದರಿಂದ ಅವರಿಗೆ ಹೆಚ್ಚು ಕೆಲಸ ಆಗಿದೆ. ಈ ರೀತಿಯಾಗಿ ಅವು ನಿಧಾನವಾಗುವುದಕ್ಕೆ ಇದೂ ಒಂದು ಕಾರಣವಾಗಿದೆ.

ಇನ್ನು ಅರಣ್ಯ ಇಲಾಖೆಗೆ ಸಂಬಂಧಪಟ್ಟಹಾಗೆ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಈ ಇಲಾಖೆಯಲ್ಲಿ 10 ಕೋಟಿ 84 ಸಾವಿರ ರೂಪಾಯಿಗಳು ಉತ್ಪತ್ತಿಯಾಗುತ್ತದೆ. ಇದರಲ್ಲಿ ನಮ್ಮ ಖರ್ಚು ಹೆಚ್ಚಾಗಿದೆ ಉತ್ಪತ್ತಿ ಕಡಿಮೆಯಾಗಿದೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಇದರಲ್ಲಿ ಬರೀ ಎಸ್ಟಾಬ್ಲಿಷ್‌ಮೆಂಟಿಗೋಸ್ಕರ 7 ಪರ್ಸೆಂಟ್ ಖರ್ಚಾಗುತ್ತಿದೆ. ಈಗ 5 ವರ್ಷಗಳ ಹಿಂದೆ 13 ಪರ್ಸೆಂಟ್ ಇತ್ತು. ಸಾಮಾನುಗಳ ಬೆಲೆಗಳು ಏರಿರುವುದರಿಂದ ಉತ್ಪತ್ತಿ ಹೆಚ್ಚಾಯಿತು. ಅರಣ್ಯವನ್ನು ಪೋಷಿಸಿಕೊಂಡು ಹೋಗತಕ್ಕದ್ದು ಕ್ರಮಬದ್ಧವಾಗಿ ನಡೆದಿದೆ. ಈ ಅರಣ್ಯ ಇಲಾಖೆಯ ಕೆಲಸಗಳನ್ನು ವರ್ಕಿಂಗ್ ಪ್ಲಾನ್ ಮಾಡಿಕೊಂಡು ಅದರಂತೆ ಕೆಲಸಗಳನ್ನು ನಡೆಸಿಕೊಂಡು ಬರುತ್ತಿದೆ. ಮಲೆನಾಡಿನಲ್ಲಿ ಯಾವುದು ಮೈನರ್ ಫಾರೆಸ್ಟ್ ಇದೆಯೋ ಮತ್ತು ಎಲ್ಲಿ ಕಾಡನ್ನು ಕಡಿದಿದೆಯೋ ಅಂಥಾದ್ದನ್ನು ಅಫಾರಸ್ಟೇಷನ್ ಮಾಡುತ್ತಿದ್ದೇವೆ. ಮಲೆನಾಡಿನಲ್ಲಿ ಜನಗಳು ತಮ್ಮ ಜಮೀನಿಗೆ ಬೇಕಾಗಿರತಕ್ಕ ಹಸುರು ಗೊಬ್ಬರ, ಮನೆಗಳಿಗೆ ಬೇಕಾಗಿರತಕ್ಕ ಕೆಲವು ಉಪಯುಕ್ತವಾದ ಸಾಮಾನುಗಳಿಗಾಗಿ ಮಲೆನಾಡಿನ ಪ್ರಿವಿಲೇಜಸ್ ಎಂದು ಸ್ವಂತ ಕಾಡನ್ನು ಬೆಳೆಸಿಕೊಂಡು ಬರುತ್ತಿದ್ದರು. ಅದರ ಬಗ್ಗೆ ಸ್ವಲ್ಪ ಮಟ್ಟಿಗೆ ಕಷ್ಟವಾಗಿದೆ. ಮನೆಯ ಪಕ್ಕದಲ್ಲಿ ಮತ್ತು ಹಿತ್ತಲುಗಳಲ್ಲಿ ಕಾಡನ್ನು ಬೆಳೆಸುತ್ತೇವೆ ಎಂದರೆ ಅದರಿಂದ ಜನಗಳಿಗೆ ತೊಂದರೆ ಯಾಗುತ್ತದೆ. ಆದ್ದರಿಂದ ಮಲೆನಾಡಿನ ಮಾನ್ಯ ಸದಸ್ಯರು ತಿಳಿಸಿದಂತಹ ಸೂಚನೆ ನಿಜವಾಗಿಯೂ ಕೂಡ ಜನಗಳಿಗೆ ತೊಂದರೆಯಾಗುತ್ತದೆ ಎಂದು ಅನಿಸುತ್ತದೆ. ಈಗ ಮಲೆನಾಡಿನ ಪ್ರಿವಿಲೇಜಸ್ ಬಗ್ಗೆ ಜನಗಳಿಗೆ ಏನು ತೊಂದರೆಯಾಗಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದಾರೆಯೋ ಅದನ್ನು ಯೂನಿಫಾರಂ ರೀತಿಯಲ್ಲಿ ಇಟ್ಟುಕೊಂಡು ಬರುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಇನ್ನು ಮಲೆನಾಡಿನಲ್ಲಿ ನೀಲಗಿರಿ ಮರಗಳನ್ನು ಹೆಚ್ಚು ಬೆಳೆಸಿಕೊಂಡು ಬರುತ್ತಿದ್ದೇವೆ, ಬೇರೆ ಜಾತಿಯ ಮರಗಳನ್ನು ಬೆಳೆಸುತ್ತಿಲ್ಲ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ನೀಲ ಗಿರಿ ಮರಗಳನ್ನು ಜಾನುವಾರುಗಳು ತಿನ್ನುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಮಾತ್ರ ಇತರ ಮೃದುಮರಗಳನ್ನು ಬೆಳೆಸುತ್ತೇವೆ. ನೀಲಗಿರಿ ಮರಗಳನ್ನು ನಾವು ಬಹು ಭಾಗ ಬೆಳೆಯುತ್ತೇವೆ ಏತಕ್ಕೆಂದರೆ ಇದು ಬಹಳ ಕೆಲಸಗಳಿಗೆ ಬೇಕಾಗುತ್ತದೆ. ಸೌದೆಗೆ ಬೇಕಾಗುತ್ತದೆ, ಎಲೆಕ್ಟ್ರಿಕ್ ಪೋಲುಗಳಿಗೆ ಬೇಕಾಗುತ್ತದೆ, ಪ್ಲೈವುಡ್‌ಗೆ ಬೇಕಾಗುತ್ತದೆ ; ಮತ್ತು ಬೇರೆ ಬೇರೆ ಉಪಯುಕ್ತ ವಾದ ಕೆಲಸಗಳಿಗೆ ಬೇಕಾಗುತ್ತದೆ. ಆದ್ದರಿಂದ ನಾವು ಇದನ್ನು ಹೆಚ್ಚು ಬೆಳೆಸುತ್ತಿದ್ದೇವೆ. ಇದರ ಜೊತೆಗೆ ಸಾಗುವಾನಿ ಮರಗಳನ್ನು ಬೆಳೆಸುತ್ತೇವೆ, ರೋಜ್‌ವುಡ್ ಮರಗಳನ್ನು ಬೆಳೆಸು ತ್ತಿದ್ದೇವೆ, ಗೇರು ಬೀಜದ ಪ್ಲಾಂಟೇಷನ್ ಅನ್ನು ಬೆಳೆಸುತ್ತಿದ್ದೇವೆ, ರಬ್ಬರ್ ಮರಗಳನ್ನು ಬೆಳೆಸು ತಿದ್ದೇವೆ. ಈಗ ನಾವು ಸುಮಾರು 26 ಸಾವಿರ ಎಕರೆಗಳಲ್ಲಿ ಗೇರು ಬೀಜದ ಮರಗಳನ್ನು ಬೆಳೆಸಿ ದ್ದೇವೆ. ಸಿವಿಲ್‌ಪ್ಲಾನ್‌ಟೇಷನ್ ಅನ್ನು 2 ಲಕ್ಷ ಎಕರೆಯಲ್ಲಿ ಮಾಡಿದ್ದೇವೆ. ಟೀಕ್‌ಪ್ಲಾನ್ ಟೇಷನ್ 46 ಸಾವಿರ ಎಕರೆಯವರೆಗೂ ಬೆಳೆಸಿಕೊಂಡು ಬಂದಿದ್ದೇವೆ. ಈ ರೀತಿಯಾಗಿ ನಾವು ಕಾಡಿನಲ್ಲಿ ಮರಗಳನ್ನು ಬೆಳೆಸಿಕೊಂಡು ಬರುತ್ತಿದ್ದೇವೆ.

ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಕ್ಯಾಶ್ಯು ನಟ್ಸ್ ಪ್ಲಾಂಟೇಷನ್ಸ್, ರಬ್ಬರ್ ಪ್ಲಾಂಟೇ ಷನ್ ಸಾಫ್ಟ್ ವುಡ್ ಹಾಗು ಲಿನೋಲಿಯಂ ಪ್ಲಾಂಟೇಷನ್, ಸುಗಂಧ ದ್ರವ್ಯ ಮರಗಳ ಪ್ಲಾಂಟೇ ಷನ್ ಬೆಳೆಸುವುದಕ್ಕೆ ಪ್ರಯತ್ನಮಾಡಿದ್ದೇವೆ. ಕಳೆದ ಒಂದೆರಡು ವರ್ಷಗಳಲ್ಲಿ ಸಾಕಷ್ಟು ಮಳೆಯಿಲ್ಲದ ಮೂಲಕ ನೀಲಗಿರಿ ಮರಗಳು ಸಾಕಷ್ಟು ಪ್ರಮಾಣದಲ್ಲಿ ಬೆಳೆಯಲಿಲ್ಲ. ಈ ಪ್ಲಾಂಟೇಷನ್ ಬೆಳೆಸುವ ಕೆಲಸ ಸರಿಯಾಗಿ ಆಗಲಿಲ್ಲ. ಎಲ್ಲೆಲ್ಲಿ ಚೆನ್ನಾಗಿ ಕೆಲಸವಾಗಿದೆ ಎಂಬುದನ್ನು ನೋಡಿದರೆ ಖರ್ಚು ಮಾಡತಕ್ಕಂಥ ಹಣ ಸದುಪಯೋಗವಾಗಿದೆ. ಒಂದು ಟನ್ನಿಗೆ 80 ರಿಂದ 125 ರೂಪಾಯಿ ಬೆಲೆ ಬಾಳುವ ಗಿಡಗಳನ್ನು ಸಾಧಾರಣವಾಗಿ ಬೆಳೆಸಲಾಗಿದೆ. ಮಲೆನಾಡಿನಲ್ಲಿ ಬೆಳೆಯುವ ಯುಕ್ಲಿಪ್ಟಿಸ್ ಮರ ರೇಯಾನ್ ತಯಾರ್ಮಾಡುವುದಕ್ಕೆ ಉಪಯೋಗವಾಗುತ್ತದೆ. ಪೇಪರ್ ಮಿಲ್‌ಗಳಿಗೆ ಕಾಡಿನಲ್ಲಿ ಬೆಳೆಯುವ ಬೊಂಬು ಸಾಕಷ್ಟು ಸಿಕ್ಕುತ್ತಿಲ್ಲ. ಇದು ಬೇಗ ಬೆಳೆಯುತ್ತದೆ. ಹುಣಸೆ ಮರಗಳನ್ನು ಸಹ ಬೆಳೆಸಲಾಗಿದೆ. ಸಾಫ್ಟ್ ವುಡ್ ಪ್ಲಾಂಟೇಷನ್ನಿನಲ್ಲಿ ಕೆಲವು ಜಾತಿಯ ಮರಗಳ ಜೊತೆಗೆ ಬೇವಿನ ಮರ ಕೂಡ ಬೆಳೆಸಿದೆ. ಎಲ್ಲ ಜಾತಿಯ ಗಿಡಗಳೂ ಇದರಲ್ಲಿ ಇವೆ. ಮುಖ್ಯವಾಗಿ

(ಶ್ರೀ ಬಿ. ರಾಚಯ್ಯ)

ಟೀಕ್ ವುಡ್ ಮತ್ತು ರೋಜ್ ವುಡ್ ಪ್ಲಾಂಟೇಷನ್‌ನಲ್ಲಿ ವರ್ಕಿಂಗ್ ಪ್ಲಾನ್ ಪ್ರಕಾರ ಬೆಳೆಸುತ್ತಿದ್ದೇವೆ. ಮಲೆನಾಡಿನಲ್ಲಿ ಇರತಕ್ಕಂಥ ದೊಡ್ಡ ಕಾಡಿನಲ್ಲಿ ಸಾಕಷ್ಟು ಉತ್ಪತ್ತಿಯಾಗುವಂಥ ಮರಗಳಿವೆ ಎಂದು ಭಾವಿಸುವುದು ಬೇಡ. ಸಾಫ್ಟ್ ವುಡ್ ಮತ್ತು ಇತರೇ ಜಾತಿಯ ಸೌದೆ ಮರಗಳಿಂದ ಆರ್ಥಿಕ ಉತ್ಪಾದನೆ ಒಂದು ಎಕರೆಗೆ ಜಾಸ್ತಿಯಾಗುತ್ತದೆ. ಕಾಡಿನಲ್ಲಿ ಇರತಕ್ಕ ಗಿಡಗಳಿಗೆ ಒಂದು ವಯಸ್ಸು ಇರುತ್ತದೆ. ನೂರು ವರ್ಷ ಇನ್ನೂರು ವರ್ಷಗಳ ಮರಗಳು ತಾವಾಗಿಯೇ ಬೀಳುತ್ತವೆ. ಅಂಥ ಮರಗಳನ್ನು ಕಡಿದು ಕೈಗಾರಿಕೆಗೆ ಉಪಯೋಗಿಸದಿದ್ದರೆ ಸರಕಾರಕ್ಕೆ ನಷ್ಟವಾಗುತ್ತದೆ. ಸಾಫ್ಟ್ ವುಡ್, ಪ್ಲೈವುಡ್ ಇಂಡಸ್ಟ್ರಿ, ಮ್ಯಾಚ್ ಇಂಡಸ್ಟ್ರಿ ಪ್ಯಾಕಿಂಗ್ ಕೆಲಸ ಮಾಡತಕ್ಕಂಥ ಕೈಗಾರಿಕೆಗೆ ಕೊಟ್ಟಿದ್ದೇವೆ. ವೆಸ್ಟರ್ನ್ ಇಂಡಿಯಾ ಮ್ಯಾಚ್ ಇಂಡಸ್ಟ್ರಿ ಕಂಪನಿಗೆ ನಮ್ಮ ಸಂಸ್ಥಾನ ಅಲ್ಲದೆ ಬೇರೆ ಸಂಸ್ಥಾನಗಳು ಸಹ ಸಾಫ್ಟ್ ವುಡ್ ಕೊಟ್ಟಿದ್ದಾರೆ. ಬೆಂಕಿ ಕಡ್ಡಿಯ ಬೆಲೆಯು ಸರಕಾರದ ನಿಯಂತ್ರಣದಲ್ಲಿ ನಿಂತಿರುವುದರಿಂದ ಮರದ ಬೆಲೆ ಜಾಸ್ತಿಯಾಗಿಲ್ಲ. ಈಗ ಕೊಟ್ಟಿರತಕ್ಕಂಥ ದರ ಸ್ಟಾಂಡಿಂಗ್ ಟಿಂಬರಿಗೆ ಕೊಟ್ಟಿದ್ದೇವೆ. ಪುಷ್ಪಗಿರಿ ಪ್ಲಾಂಟೇಷನ್ನಿನಲ್ಲಿ ನೀಲಗಿರಿ ಮರಗಳ ಬೆಲೆ ನೋಡಿದಾಗ ಸರಕಾರಕ್ಕೆ ನಷ್ಟವಾಗಿದೆ. ಸಾಫ್ಟ್ ವುಡ್ ಬೆಳೆಸಲು ಜನ ಮುಂದೆ ಬರಲಿಲ್ಲ. ಡಿಪಾರ್ಟ್‌ಮೆಂಟಿನವರು ಇದನ್ನು ಮಾಡಿದಾಗ ಮರ ಒಣಗಿ ಹೋಯಿತು. ಆದರೂ ಕೂಡ ಬೆಲೆ ಗೊತ್ತು ಮಾಡಿರುವುದು ಸಾಮಾನ್ಯವಾಗಿ ರೀಜನೇಬಲ್ ಪ್ರೈಸ್ ಆಗಿದೆ ಎಂಬ ನಿರ್ಧಾರಕ್ಕೆ ಬಂದು ಅದನ್ನು ಕೊಟ್ಟಿದ್ದೇವೆ. ಬೆಲೆ ಹೆಚ್ಚು ಮಾಡಲು ರಿವೈಜ್ ಮಾಡುವುದಕ್ಕೆ ಅಧಿಕಾರ ಇದೆ.

ಶ್ರೀ ಎಚ್. ಸಿದ್ದವೀರಪ್ಪ.—ಭದ್ರಾವತಿ ಕಂಪನಿಯಿಂದ ಒಂದು ಕೋಟಿ ರೂಪಾಯಿ ಬಾಕಿ ಬರಬೇಕಾಗಿರುವುದನ್ನು ವಸೂಲ್ಮಾಡಿದ್ದೀರಾ ಹೇಳಿ.

ಶ್ರೀ ಬಿ. ರಾಚಯ್ಯ.—ಮ್ಯಾಚ್ ವುಡ್ ಇಂಡಸ್ಟ್ರಿ, ಇಂಡಿಯನ್ ಪ್ಲೈವುಡ್ ಇಂಡಸ್ಟ್ರಿ ಕಮರ್ಷಿಯಲ್ ಯೂನಿಯನ್ ಕಂಪನಿಯಿಂದ ಸಾಫ್ಟ್ ವುಡ್ ಕಂಪನಿಯಿಂದ ಬರಬೇಕಾದ ಬಾಕಿ ಇಲ್ಲ. ಕಾಡಿನಲ್ಲಿ ಇರತಕ್ಕಂಥ ಮೃದು ಮರ ಏನಿದೆ ಅದು ವಯಸ್ಸಿಗೆ ಬಂದ ಮೇಲೆ ಒಣಗಿ ಹೋಗುತ್ತದೆ ಮತ್ತು ಉಪಯೋಗಕ್ಕೆ ಬರುವುದಿಲ್ಲ. ಈ ದೃಷ್ಟಿಯಿಂದ ಲಾಂಗ್ ಲೀಜ್ ಮೇಲೆ ಇದನ್ನು ಕೊಟ್ಟಿದ್ದೇವೆ. ಇದನ್ನು ರಿವೈಜ್ ಮಾಡುವುದಕ್ಕೆ ಆತಂಕವೇನೂ ಇಲ್ಲ. ಕಳೆದ ಐದು ವರ್ಷ ಅವಧಿಯಲ್ಲಿ ಎರಡು ಸಾರಿ ಇದನ್ನು ರಿವೈಜ್ ಮಾಡಿದ್ದೇವೆ. ಟನ್ ಮರಕ್ಕೆ ಎಂಟು ರೂಪಾಯಿ ರೇಟ್ ಕೊಟ್ಟಿದ್ದನ್ನು ಈಗ 40 ರೂಪಾಯಿ ಆಗಿದೆ, ಇದು ಎಷ್ಟು ಹೆಚ್ಚಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ಈ ಒಂದು ಪಟ್ಟಿಯಲ್ಲಿ ಕೊಟ್ಟಿರುವ ಹಾಗೆ ಏನೇನು ಬೆಲೆ ಇತ್ತು, ಹೊರಗಡೆ ಹರಾಜಿನಲ್ಲಿ ಎಷ್ಟು ಬೆಲೆ ಬರುತ್ತದೆ, ಇದನ್ನು ಲೆಕ್ಕಾಚಾರ ಮಾಡಿ ನೋಡಿದರೆ ನಾವು ಕೊಟ್ಟಿರತಕ್ಕಂಥಾದ್ದು ಸರಿಯಾಗಿದೆ ಎಂದು ನನಗೆ ಅನ್ನಿಸುತ್ತದೆ. ಕಂಪನಿಗಳಿಗೆ ಮರ ಕೊಡದೇ ಇದ್ದ ಪಕ್ಷದಲ್ಲಿ ಕಂಟ್ರಾಕ್ಟರುಗಳು ಹರಾಜಿನಲ್ಲಿ ಭಾಗವಹಿಸಿ ಕೊಂಡುಕೊಂಡಿದ್ದಾದರೆ ಕಡಿಮೆ ಬೆಲೆಗೆ ಕಂಪನಿಗೆ ಅವರು ಕೊಡುತ್ತಾರೆ. ಸುತ್ತು ಮುತ್ತು ಇರತಕ್ಕ ಕಾಡಿನಲ್ಲಿ ಕೊಂಡು ಕೂಪೇನಲ್ಲಿ ಕಡಿಮೆ ಬೆಲೆಗೆ ಅವರು ಕೊಡುವುದಕ್ಕೆ ಅವಕಾಶವಿದೆ. ಆದುದರಿಂದ ಲಾಂಗ್ ಲೀಜ್ ಬೇಸಿಸ್ ಮೇಲೆ ಕಂಪನಿಗೆ ಕೊಡುತ್ತಾ ಬಂದಿದ್ದೇವೆ. ಈ ರೀತಿ ಮೈಸೂರು, ಚಿಕ್ಕಮಗಳೂರು, ದಾಂಡೇಲಿ ಪ್ಲೈವುಡ್ ಕಂಪನಿಗಳಿಗೆ ಸಾಫ್ಟ್ ವುಡ್ ಕೊಟ್ಟಿದ್ದೇವೆ. ಅವರಿಂದ ಬರತಕ್ಕ ಬಾಕಿ ಏನೂ ಉಳಿದಿಲ್ಲ. ಭದ್ರಾವತಿ ಐರನ್ ವರ್ಕ್ಸ್, ಭದ್ರಾವತಿ ಪೇಪರ್ ಮಿಲ್ಸ್, ಇಲೆಕ್ಟ್ರಿಸಿಟಿ ಬೋರ್ಡ್ ಇವು ಸಾಮಾನ್ಯವಾಗಿ ಗವರ್ನಮೆಂಟ್ ಕಂಪನಿಗಳು ಇದ್ದ ಹಾಗೆ ಇರುವುದರಿಂದ ಈ ಡಿಪಾರ್ಟ್‌ಮೆಂಟಿನಿಂದ ಬರಬೇಕಾದ ಬಾಕಿ ಉಳಿದಿದೆ. ಅದನ್ನು ಕೂಡ ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬಾಕಿ ಬರಬೇಕಾದುದಕ್ಕೆ ಈ ಒಂದು ಪಟ್ಟಿ ಇದೆ. ಇದಕ್ಕೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಭೆಯ ಮುಂದೆ ಇಡುತ್ತೇನೆ. ಉತ್ಪಾದನೆ ಹೆಚ್ಚು ಮಾಡುವುದಕ್ಕೆ ಕಳ್ಳ ಸಾಗಾಣಿಕೆಯಿಂದ ಬೆಲೆ ಬಾಳುವ ಮರ ತೆಗೆದುಕೊಂಡು ಹೋಗುವುದನ್ನು ತಡೆಗಟ್ಟುವುದು ಸಾಧ್ಯವಿದೆ ಎಂದು ಹೇಳಿದ್ದೇನೆ. ಅಲ್ಲಲ್ಲಿ ಚೆಕ್ ಪೋಸ್ಟ್ ಇರಬೇಕಾಗಿತ್ತು. ಕಳೆದ ಐದು ವರ್ಷಗಳಲ್ಲಿ ಸಾಧ್ಯವಾದಮಟ್ಟಿಗೆ ಅಲ್ಲಲ್ಲಿ ಚೆಕ್ ಪೋಸ್ಟ್ ಇಟ್ಟು ಕಳ್ಳ ಸಾಗಾಣಿಕೆ ತಡೆಗಟ್ಟಿದ್ದೇವೆ ಎಂದು ನನ್ನ ಭಾವನೆ. ಸಂಪೂರ್ಣವಾಗಿ ಕಳ್ಳ ಸಾಗಾಣಿಕೆ ನಿಂತು ಹೋಗಿದೆ ಎಂದು ಒಪ್ಪಿಕೊಳ್ಳಲು ನಾನು ತಯಾರಿಲ್ಲ. ಬೆಂಗಳೂರು ಪಟ್ಟಣದಂಥ ದೊಡ್ಡ ನಗರದಲ್ಲಿ ಹಗಲು ಹೊತ್ತಿನಲ್ಲಿಯೇ ಅನೇಕ ರೀತಿಯ ಕಳ್ಳತನ ನಡೆಯುವ ಕಾಲದಲ್ಲಿ, ಕಾಡಿನಲ್ಲಿ ಜನರು ಇಲ್ಲದೇ ಇರತಕ್ಕಂಥ ಸ್ಥಳದಲ್ಲಿ ಕಳ್ಳ ಸಾಗಾಣಿಕೆಗೆ ಅವಕಾಶವಿದೆ, ಅದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದಕ್ಕೆ ತಮ್ಮ ಸಹಕಾರವೂ ಬೇಕು.

ಮೈಸೂರು ಗಂಧದ ಎಣ್ಣೆ ಕಾರ್ಖಾನೆಗೆ ಗಂಧದ ಮರವನ್ನು ಕಡಮೆ ದರದಲ್ಲಿ ಕೊಡುತ್ತಿದ್ದೀರಿ, ಮಾರ್ಕೆಟ್ ಬೆಲೆ ಪ್ರಕಾರ ಕೊಟ್ಟಿದ್ದರೆ ಒಂದು ಕೋಟಿ ರೂಪಾಯಿನಷ್ಟು ಲಾಭ ಬರುತ್ತಿತ್ತು ಎಂದು ಹೇಳಿದರು. ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಕೊಡುವಾಗ ಲಾಭ ಬಂತು ಎಂದು ಹೇಳಿದರೂ ಕೂಡ ಕಳ್ಳ ಸಾಗಾಣಿಕೆಯಲ್ಲಿ ಸಾಗಿಸತಕ್ಕ ಗಂಧದ ಮರದಿಂದ ಕಳ್ಳ ಭಟ್ಟಿಯಿಂದ ಗಂಧದ ಎಣ್ಣೆ ತಯಾರು ಮಾಡಿ ಮೈಸೂರು ಗಂಧದ ಎಣ್ಣೆ ತಯಾರು ಮಾಡಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ತಯಾರಾದ ಎಣ್ಣೆಯೊಡನೆ ಪೈಪೋಟಿ ನಡೆಸುತ್ತಿದ್ದರು. ನಮ್ಮ ಗಂಧದ ಎಣ್ಣೆಯ ಬೆಲೆ ಜಾಸ್ತಿಯಾಗಿ ಮಾರಾಟವಾಗದೆ ನಷ್ಟವಾಗುತ್ತಿತ್ತು. ಅಲ್ಲದೆ ಖಾಸಗಿಯವರು ಅಡಲ್ಟರೇಟ್ ಸಹ ಮಾಡುತ್ತಿದ್ದರು. ಇದರಿಂದ ಸರ್ಕಾರಿ ಗಂಧದ ಎಣ್ಣೆ ಕಾರ್ಖಾನೆಗೆ ನಷ್ಟ ಉಂಟಾಗುತ್ತಿತ್ತು.

ಶ್ರೀ ಎಚ್. ಸಿದ್ದವೀರಪ್ಪ.—ಅಡಲ್ಟರೇಷನ್ ಎಲ್ಲಿಯವರೆಗೆ ಹೋಗಿತ್ತು ಎಂದರೆ, ಅಲ್ಯುಮಿನಿಯಂ ಕಂಟೇನರುಗಳಲ್ಲಿದ್ದರೂ ಸಹ ಇನ್‌ಜೆಕ್ಟ್ ಮಾಡಿ ತೆಗೆಯುತ್ತಿದ್ದರು.

ಶ್ರೀ ಬಿ. ರಾಚಯ್ಯ.—ಕಳ್ಳ ಸಾಗಾಣಿಕೆ ಬಂದು, ಹರಾಜಿನಲ್ಲಿ ಸ್ವಲ್ಪ ಭಾಗ ಕೊಂಡು ಅದರ ಜೊತೆಗೆ ಕೆಲವು ಲಾರಿಗಳಲ್ಲಿ ಗಂಧದ ಮರವನ್ನು ತೆಗೆದುಕೊಂಡು ಹೋಗುತ್ತಾರೆನ್ನುವುದು ನಮ್ಮ ಗಮನಕ್ಕೆ ಬಂದು, ಅದರ ಮೇಲೆ ನಮ್ಮ ಸಂಸ್ಥಾನದಲ್ಲಿರುವ ಎಲ್ಲ ಗಂಧದ ಮರಗಳನ್ನೂ ನಮ್ಮ ಕಾರ್ಖಾನೆಗೇ ಕೊಡಬೇಕು ಮತ್ತು ಹಾಗೆ ಕೊಡತಕ್ಕ ಕಾಲದಲ್ಲಿ ರಿಯಾಯಿತಿ ದರದಲ್ಲಿ ಕೊಡಬೇಕು ಎನ್ನುವುದನ್ನು ಒಪ್ಪಿಕೊಂಡಿದ್ದೇವೆ. ಇದರಿಂದ ಇಂಗ್ಲೆಂಡ್ ಮತ್ತು ಯೂರೋಪ್ ರಾಷ್ಟ್ರಗಳಲ್ಲಿ ಗಂಧದ ಎಣ್ಣೆ ಮಾರಾಟವಾಗತಕ್ಕದು ನಿಂತು ಹೋಗಿದ್ದುದು ಪುನಃ ಪ್ರಾರಂಭವಾಗಿ ಒಂದೇ ವರ್ಷದಲ್ಲಿ 50 ಲಕ್ಷ ರೂಪಾಯಿನಷ್ಟು ಹೆಚ್ಚು ಬೆಲೆಯಾಯಿತು. ಗಂಧದ ಎಣ್ಣೆ ಬೆಲೆ ಕಡಮೆಯಾಗಿರುವುದರಿಂದ ಯಾರು ಕಳ್ಳ ಸಾಗಾಣಿಕೆಯಿಂದ ಮರವನ್ನು ಸಾಗಿಸಿ ಎಣ್ಣೆ ತಯಾರು ಮಾಡುತ್ತಿದ್ದರು ಅವರ ಚಟುವಟಿಕೆ ಕಡಮೆಯಾಗಿದೆ. ಈಗ ಪುನಃ ಆ ಚಟುವಟಿಕೆ ಶುರುವಾಗಿರುವ ಹಾಗೆ ಕಾಣುತ್ತದೆ. ಒಂದು ವೇಳೆ ಗಂಧದ ಮರವನ್ನು ಮಾರ್ಕೆಟ್ ಬೆಲೆಯಂತೆ ಕಾರ್ಖಾನೆಗೆ ಕೊಡುವುದಾದರೆ ಕಾರ್ಖಾನೆಯವರು ಅಂತರರಾಜ್ಯ ಮಾರುಕಟ್ಟೆಯಲ್ಲಿ ಬೆಲೆಯನ್ನು ತಗ್ಗಿಸಿ ಮಾರಾಟ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ದೃಷ್ಟಿಯಿಂದ ಗಂಧದ ಮರದ ಬೆಲೆಯನ್ನು ಕಡಮೆ ಮಾಡಬೇಕೆಂದು ಕೈಗಾರಿಕಾ ಮಂತ್ರಿಗಳು ಹೇಳಿದರು. ಆದುದರಿಂದ ಕಡಮೆ ಮಾಡಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಮದ್ರಾಸ್ ಸರ್ಕಾರದವರು ಹರಾಜಿನಲ್ಲಿ ಗಂಧದ ಮರವನ್ನು ಮಾರಾಟ ಮಾಡುತ್ತಾರಲ್ಲವೇ ?

ಶ್ರೀ ಬಿ. ರಾಚಯ್ಯ.—ನಾವೇ ಕೊಂಡುಕೊಳ್ಳುತ್ತೇವೆ, ನಮಗೇ ಕೊಡಿ ಎಂದರೆ ಅವರು ಕೊಡುವುದಕ್ಕೆ ತಯಾರಾಗಿಲ್ಲ. ಮದ್ರಾಸ್, ಆಂಧ್ರದ ಕೆಲವು ಭಾಗಗಳಲ್ಲಿ ಮಾತ್ರ ಗಂಧದ ಮರ ಬೆಳೆಯುತ್ತದೆ. ಮೈಸೂರು ಸಂಸ್ಥಾನ ಇದಕ್ಕೆ ಹೆಸರುವಾಸಿಯಾಗಿರುವುದು. ಈ ಗಂಧದ ಮರಗಳನ್ನು ಹರಾಜಿಗೆ ಇಟ್ಟು ಮಾರಾಟ ಮಾಡುವುದಾದರೆ ಕಳ್ಳ ಸಾಗಾಣಿಕೆ ಇನ್ನೂ ಜಾಸ್ತಿಯಾಗುತ್ತದೆ. ಒಂದು ಪರ್ಮಿಟ್ ಇದ್ದರೆ ನಾಲ್ಕು ಪರ್ಮಿಟ್‌ಗಳಷ್ಟು ಮರ ಹೋಗುತ್ತದೆ ಎಂದು ಏನು ಮಾನ್ಯ ಸದಸ್ಯರು ಹೇಳಿದ್ದಾರೆ ಅದೇ ರೀತಿ ಇಲ್ಲಿಯೂ ಆಗಬಹುದು. ಗಂಧದ ಮರದ ಕಳ್ಳ ಸಾಗಾಣಿಕೆಯಾಗುತ್ತಿರುವುದರಿಂದ ಕೊಡಗಿನಲ್ಲಿ ಏನು ಕಾನೂನು ಇದೆಯೋ ಅದೇ ಕಾನೂನನ್ನು, ಎಂದರೆ, ಗಂಧದ ಮರದ ಬೆಲೆಯಲ್ಲಿ ನೂರಕ್ಕೆ ಐವತ್ತು ಭಾಗವನ್ನು ಆ ಭೂಮಿಯ ಮಾಲೀಕನಿಗೆ ಕೊಡಬೇಕು ಎನ್ನುವ ಕಾನೂನನ್ನು ಒಪ್ಪಿಕೊಂಡಿದ್ದೇವೆ. ಅದು ಈಗ ಫೈನಲೈಸ್ ಆಗುವ ಸ್ಥಿತಿಯಲ್ಲಿದೆ. ಮತ್ತೆ ಆರ್ಟಿಸಾನ್ಸ್ ಎಂದರೆ ಗುಡಿಕಾರರು, ಊದಬತ್ತಿ ತಯಾರು ಮಾಡುವವರು ಕಳ್ಳ ಸಾಗಾಣಿಕೆಯಲ್ಲಿ ಗಂಧದ ಮರವನ್ನು ತರಿಸಿಕೊಳ್ಳುವುದು ಇತ್ತು. ಈಗ ಗಂಧದ ಚಕ್ಕೆಯನ್ನು ಬಿಳಿ ಚಕ್ಕೆಯನ್ನು ಊದಬತ್ತಿ ತಯಾರು ಮಾಡುವವರಿಗೆ ಒಂದು ಟನ್ನಿಗೆ ನೂರು ರೂಪಾಯಿ ದರದಲ್ಲಿ ಕೊಡಬೇಕೆಂದು ಮಾಡಿರುವುದರಿಂದ ಬಹುಶಃ ಅವರು ಕಳ್ಳ ಸಾಗಾಣಿಕೆ ಮಾಡುವುದಕ್ಕೆ ಉತ್ತೇಜನ ಕೊಡಲಾರರು. ಗುಡಿಕಾರರಿಗೆ ಇಂಡಸ್ಟ್ರಿಯಲ್ ಬ್ಯಾಂಕಿನಿಂದ ಸೇಕಡ 50 ರಷ್ಟು ದರದಲ್ಲಿ ಗಂಧದ ಮರವನ್ನು ಕೊಟ್ಟು ಅವರಿಂದ ಉತ್ಪಾದನೆಯಾಗತಕ್ಕ ಸಾಮಾನುಗಳನ್ನು ತಂದು ಮಾರಾಟ ಮಾಡಬೇಕೆಂದು ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ಇದರ ಜೊತೆಗೆ. ಆಂಟಿ ಸ್ಮಗ್ಲಿಂಗ್ ಸ್ಕ್ವಾಡ್ಸ್ ಇಟ್ಟುಕೊಂಡಿದ್ದೇವೆ. ಅವರು ಬಹಳ ಕೆಲಸ ಮಾಡಿದ್ದಾರೆ. ಇವರು ಕಳೆದ ಒಂದು ವರ್ಷದಿಂದ ಹಿಡಿದಿರುವ ಗಂಧದ ಮರದ ವಿವರಗಳನ್ನು ಸಭೆಯ ಗಮನಕ್ಕೆ ತರುತ್ತೇನೆ. 18-1-66 ರಲ್ಲಿ ಒಂದು ಲಾರಿಯಲ್ಲಿ 3.2 ಟನ್‌ನಷ್ಟು ಗಂಧದ ಮರ 21 ಸಾವಿರ ರೂಪಾಯಿ ಬೆಲೆ ಬಾಳತಕ್ಕದನ್ನು ಹಿಡಿದಿದ್ದಾರೆ, 30-1-66 ರಲ್ಲಿ 25 ಟನ್ ಹಿಡಿದಿದ್ದಾರೆ, 28-8-66 ರಲ್ಲಿ 18 ಸಾವಿರ ರೂಪಾಯಿ ಬೆಲೆ ಬಾಳತಕ್ಕ ಗಂಧದ ಮರವನ್ನು ಹಿಡಿದಿದ್ದಾರೆ, 30-8-1966 ರಲ್ಲಿ ಸಂಕೇಶ್ವರ

(ಶ್ರೀ ಬಿ. ರಾಚಯ್ಯ)

ಪೋಲೀಸ್ ಸ್ಟೇಷನ್ ಹತ್ತಿರ 16,360 ರೂಪಾಯಿ ಗಂಧದ ಮರ ಹಿಡಿದಿದ್ದಾರೆ, 7-9-66 ರಲ್ಲಿ 30 ಸಾವಿರ ರೂಪಾಯಿ ಬೆಲೆ ಬಾಳುವ ಮರವನ್ನು ಹಿಡಿದಿದ್ದಾರೆ, 5-10-66 ರಲ್ಲಿ 1.8 ಟನ್ ಮರವನ್ನು ಯಮುನಾಪುರದ ಹತ್ತಿರ ಹಿಡಿದಿದ್ದಾರೆ, 1-12-66 ರಲ್ಲಿ 15 ಟನ್ ಗಂಧದ ಮರ ವನ್ನು ಮಾಗಡಿ ತಾಲ್ಲೂಕಿನಲ್ಲಿ ಹಿಡಿದಿದ್ದಾರೆ, 11-2-67 ರಲ್ಲಿ 4.2 ಟನ್ ಮರವನ್ನು ಗುಂಜನಾಳ್ ರೇಂಜಿನಲ್ಲಿ ಹಿಡಿದಿದ್ದಾರೆ, 378 ಗಂಧದ ಬಿಲೆಟ್ಸ್ 40 ಸಾವಿರ ರೂಪಾಯಿ ಬೆಲೆ ಬಾಳುವಂಥದನ್ನು 27-3-67ರಲ್ಲಿ ಹುಬ್ಬಳ್ಳಿ ಹತ್ತಿರ ಹಿಡಿದಿದ್ದಾರೆ. ಹುಬ್ಬಳ್ಳಿಯಲ್ಲಿ ಒಂದು ಮನೆಯಲ್ಲಿ 471 ಬಿಲೆಟ್ಸ್ ಹಿಡಿದಿದ್ದಾರೆ, 27-6-67 ರಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ 40 ಸಾವಿರ ರೂಪಾಯಿ ಬೆಲೆ ಬಾಳುವ ಗಂಧದ ಮರವನ್ನು ಹಿಡಿದಿದ್ದಾರೆ.

ಗಂಧದ ಮರ ಕೇವಲ ಸರ್ಕಾರಿ ಭೂಮಿಯಲ್ಲಿ ಮಾತ್ರವಲ್ಲ ಖಾಸಗಿಯವರ ಭೂಮಿಯಲ್ಲಿಯೂ ಇದೆ. ಇಂಥ ಕಡೆ ಕೂಡ ಕೆಲವು ಕಳ್ಳ ಸಾಗಾಣಿಕೆಯಾಗುತ್ತದೆ ಎಂದು ತಿಳಿದು, ಮೆಚೂರ್ ಆಗಿರುವ ಮರಗಳಿಗೆ ನಂಬರ್ ಮಾಡುವ ವ್ಯವಸ್ಥೆಯನ್ನು ಪ್ರಾರಂಭಿಸಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಹೊಸಪೇಟೆ ಹತ್ತಿರ ಕುಮಾರಸ್ವಾಮಿ ಬೆಟ್ಟದಿಂದ ಗಂಧದ ಮರ ಎಷ್ಟು ಕಳ್ಳತನವಾಯಿತು, ಅದನ್ನು ಹಿಡಿದ ಅಧಿಕಾರಿ ಪಾಪ ಎಷ್ಟು ತೊಂದರೆ ಪಟ್ಟ, ಸರ್ಕಾರ ದವರೇನಾದರೂ ಅವನಿಗೆ ರಕ್ಷಣೆ ಕೊಟ್ಟರೇ ಎನ್ನುವುದನ್ನು ಹೇಳಿ ಸ್ವಾಮಿ.

ಶ್ರೀ ಬಿ. ರಾಚಯ್ಯ.—ಹೊಸಪೇಟೆ ಹತ್ತಿರ ಮರವನ್ನು ಹಿಡಿದವರಿಗೆ ರಕ್ಷಣೆ ಕೊಟ್ಟಿದ್ದೇವೆ, ಅದರಲ್ಲಿ ಯಾರು ಯಾರು ಸಿಕ್ಕಿಹಾಕಿಕೊಂಡಿದ್ದಾರೆ ಅವರ ಮೇಲೆ ಕೇಸು ಹಾಕಿದ್ದೇವೆ. ದೊಡ್ಡವರನ್ನು ಕೂಡ ಬಿಟ್ಟಿಲ್ಲ. ಜಿಲ್ಲಾ ಅರಣ್ಯಾಧಿಕಾರಿಗಳು ಇನ್ನೂ ಸಸ್ಪೆನ್‌ಷನ್‌ನಲ್ಲಿದ್ದಾರೆ. ಎನ್‌ಕ್ವೈರಿ ಇನ್ನೂ ನಡೆಯುತ್ತಿದೆ.

ಗಂಧದ ಮರ ಸರ್ಕಾರಿ ಜಮೀನಿನಲ್ಲಲ್ಲದೆ ಖಾಸಗಿ ಜಮೀನಿನಲ್ಲಿ ಕೂಡ ಬೆಳೆಯುತ್ತ ಇರುವುದರಿಂದ, ಅಧಿಕ ಬೆಲೆ ಬರುತ್ತದೆ ಎನ್ನುವ ದೃಷ್ಟಿಯಿಂದ, ಸರ್ಕಾರದವರು ಕಡಮೆ ರೇಟಿನಲ್ಲಿ ಕೊಡುತ್ತಾರೆ ಎನ್ನುವ ದೃಷ್ಟಿಯಿಂದ ಕಳ್ಳ ಸಾಗಾಣಿಕೆಗೆ ಅವಕಾಶವಾಗುತ್ತಿದೆ ; ಮತ್ತು ಇಲಾಖೆಯಲ್ಲಿರುವ ಜನರೂ ಕೂಡ ಸ್ವಲ್ಪಮಟ್ಟಿಗೆ ಇದಕ್ಕೆ ಸಹಾಯಕರಾಗಿದ್ದಾರೆ ಎಂದು ನಾನು ಹೇಳಿದ್ದೇನೆ. ಆದ್ದರಿಂದ ಯಾರು ಯಾರು ಇಂಥದಕ್ಕೆ ಸಹಾಯಕರಾಗಿದ್ದರೋ ಅಂಥವರು ಈಗ ಸಸ್‌ಪೆನ್‌ಷನ್‌ನಲ್ಲಿದ್ದಾರೆ. ಅನೇಕರ ಮೇಲೆ ಎನ್‌ಕ್ವೈರಿ ನಡೆಯುತ್ತಿದೆ. ಕೆಲವರನ್ನು ಕೆಲಸದಿಂದ ತೆಗೆದಿದ್ದೇವೆ. ಆದುದರಿಂದ ಬಹುಮಟ್ಟಿಗೆ ಸರ್ಕಾರಿ ಸುಪರ್ದಿನಲ್ಲಿರುವ ಅರಣ್ಯ ಸಂಪತ್ತನ್ನು ಉಳಿಸಿಕೊಂಡು ಹೋಗುವುದಕ್ಕೆ ಸಾಕಷ್ಟು ಪ್ರಯತ್ನವನ್ನು ಮಾಡುತ್ತಿದ್ದೇವೆ. ಈ ಪ್ರಯತ್ನ ಕೇವಲ ಅಧಿಕಾರಿಗಳ ಮುಖಾಂತರ ಆಗುತ್ತದೆ ಎಂದು ತಿಳಿದುಕೊಳ್ಳದೆ ಸಾರ್ವಜನಿಕರು ಮತ್ತು ತಾವೆಲ್ಲರೂ ಇದಕ್ಕೆ ಸಹಕಾರ ಕೊಡಬೇಕು. ಆಯಾ ಮಟ್ಟದಲ್ಲಿ ತಮಗೆ ಕಂಡುಬಂದಂಥ ನ್ಯೂನತೆಗಳು ಏನಿವೆ ಅದನ್ನು ತಿಳಿಸಿದರೆ ಸಾಕಷ್ಟುಮಟ್ಟಿಗೆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಅಧಿಕಾರಿಗಳ ಅಂತರರಾಜ್ಯ ಸೀನಿಯಾರಿಟಿ ಪಟ್ಟಿ ಫೈನಲೈಸ್ ಆಗದೆ ಇರುವುದರಿಂದ ಅವರೆಲ್ಲರೂ ಕೂಡ ಸರ್ಕಾರದ ಕೆಲಸದಲ್ಲಿ ಆಸಕ್ತಿ ವಹಿಸುತ್ತಿಲ್ಲ ಎಂದು ಹೇಳಿದ್ದಾರೆ. ಇದು ಕೇವಲ ಅರಣ್ಯ ಇಲಾಖೆಗೆ ಸಂಬಂಧಪಡುವುದಿಲ್ಲ. ಸಾಧ್ಯವಾದಮಟ್ಟಿಗೂ ಇದನ್ನು ಬೇಗ ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಐದು ಭಾಗಗಳಿಂದ ಬಂದಿರತಕ್ಕ ಅಧಿಕಾರಿಗಳಿರುವುದರಿಂದ ಯಾವುದೇ ತೀರ್ಮಾನ ತೆಗೆದುಕೊಂಡರೂ ಕೂಡ ತಮಗೆ ಅನ್ಯಾಯವಾಗಿದೆ ಎಂದು ಮತ್ತೊಬ್ಬರು ಕೋರ್ಟಿಗೆ ಹೋಗ ತಕ್ಕದ್ದು ಸ್ವಾಭಾವಿಕ. ಅಂತಿಮವಾಗಿ ಶ್ರೇಷ್ಠ ನ್ಯಾಯಾಲಯದಲ್ಲಿ ಏನು ತೀರ್ಮಾನ ಕೊಡುತ್ತಾರೆ ಆ ತೀರ್ಮಾನದ ಮೇಲೆ ನಾವು ಈ ಕಾರ್ಯವನ್ನು ತೆಗೆದುಕೊಳ್ಳುತ್ತೇವೆ. ಹೈಕೋರ್ಟಿನಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡರೆ ಇನ್ನೊಂದು ಗುಂಪಿನವರು ಸುಪ್ರೀಂ ಕೋರ್ಟಿಗೆ ಹೋಗಿ ಒಂದು ರೀತಿಯ ಅಪೀಲ್ ಹಾಕಿಕೊಂಡರೆ ನಾವು ಏನು ಮಾಡುವುದಕ್ಕೆ ಆಗುತ್ತದೆ ?

ಶ್ರೀ ಎಚ್. ಸಿದ್ಧವೀರಪ್ಪ.—ಹೈಕೋರ್ಟ್ ಆರ್ಡರ್ ಆಗಿದ್ದುದನ್ನು ಜಾರಿಗೆ ಕೊಡದೆ ಸರ್ಕಾರ ಕಂಟೆಂಟ್ ಆಫ್ ಕೋರ್ಟ್ ಮಾಡಿದೆ ಎಂದು ಹೇಳಿದ್ದಾರೆ. ಅದಕ್ಕೆ ಏನು ಹೇಳುತ್ತೀರಿ ?

6-30 P.M.

ಶ್ರೀ ಬಿ. ರಾಚಯ್ಯ.—ಇದು ಗೆಜೆಟೆಡ್ ಆಫೀಸರುಗಳಿಗೆ ಸಂಬಂಧಪಟ್ಟಿದೆ, ಈ ವಿಚಾರದಲ್ಲಿ ಸುಪ್ರೀಂ ಕೋರ್ಟಿಗೆ ಅಪೀಲಿರುವುದರಿಂದ ಅದು ತೀರ್ಮಾನವಾದಮೇಲೆ ಕೋರ್ಟಿನ ನಿರ್ದೇಶದ ಮೇಲೆ ಸರಕಾರ ಸೂಕ್ತ ಕ್ರಮ ಕೈಕೊಳ್ಳುವುದು. ಎನ್. ಜಿ. ಓ. ಗಳಿಗೆ ಸಂಬಂಧಪಟ್ಟಹಾಗೆ ಈಕ್ವೇಷನ್ ಕೆಲಸ ಪೂರೈಸಿದೆ. ಒಟ್ಟಿನಲ್ಲಿ ಈ ಕಾರಣದಿಂದ ನೌಕರರಿಗೆ ಅತೃಪ್ತಿಯಾಗಿದೆ, ಅವರು ಸರಿಯಾಗಿ ತಮ್ಮ ಕರ್ತವ್ಯವನ್ನ ಮಾಡುತ್ತಿಲ್ಲ ಎಂದು ಹೇಳುವುದಾದರೆ ಅವರಿಗೆ ಸರ್ಕಾರ ಸಂಬಳ ಕೊಡುತ್ತಿದೆ, ಎಲ್ಲಿಯವರೆಗೆ ಅವರು ಸರಕಾರಿ ನೌಕರರಾಗಿರುವರೋ ಅಲ್ಲಿಯವರೆಗೆ ಅವರು ತಮ್ಮ ಕರ್ತವ್ಯಮಾಡಬೇಕಾಗಿದೆ. ಆ ದೃಷ್ಟಿಯಿಂದ ಅವರು ಸರಿಯಾಗಿ ತಮ್ಮ ಕೆಲಸವನ್ನು ಮಾಡದಿದ್ದರೆ ಬಹುಶಃ ಕರ್ತವ್ಯಭ್ರಷ್ಟರಾಗುತ್ತಾರೆ. ಅಂಥವರನ್ನು ಸರಕಾರ ಇಟ್ಟುಕೊಳ್ಳುವುದಕ್ಕೆ ತಯಾರಾಗಿರುವುದಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ.—ಈಗತಾನೆ ಇಂಡಿಯನ್ ಫಾರೆಸ್ಟ್ ಸರ್ವಿಸ್‌ಗೆ ಸೇರಿರುವುದರಿಂದ ನಮ್ಮ ಅಧಿಕಾರಿಗಳ ಹಕ್ಕುಬಾಧ್ಯತೆಗೆ ಧಕ್ಕೆ ಬಾರದಂತೆ ಕಾಪಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಬಹುಶಃ ನಮ್ಮ ಸಂಸ್ಥಾನದಮಟ್ಟಿಗೆ 3 ಜನ ಅಧಿಕಾರಿಗಳನ್ನೊಳಗೊಂಡ ಒಂದು ಸಮಿತಿ ಇದೆ, ಆ ಅಧಿಕಾರಿಗಳು, ಇಂಡಿಯಾ ಸರಕಾರದ ಪಿ. ಎಸ್. ಸಿ. ಸದಸ್ಯರು ಆ ಸದಸ್ಯರು ಇತರ ಸದಸ್ಯರೊಂದಿಗೆ ಸೇರಿ ನಮ್ಮ ಅಧಿಕಾರಿಗಳ ಹಕ್ಕುಬಾಧ್ಯತೆಯನ್ನು ಕಾಪಾಡಲು ಪ್ರಯತ್ನಪಡುತ್ತಾರೆ. ಆದುದರಿಂದ ಅವರು ಸರಿಯಾದ ಪ್ರಯತ್ನ ಮಾಡುತ್ತಾರೆಂದು ನಂಬಿದ್ದೇನೆ.

ಶ್ರೀ ಎ. ಮುನಿಯಪ್ಪ.—ಕೆಲವರು ಕೇರಳ ಮತ್ತು ಆಂಧ್ರದಿಂದ ಬಂದು ನಮ್ಮ ಅರಣ್ಯವನ್ನು ಹಾಳುಮಾಡುತ್ತಿದ್ದಾರೆ, ಅದನ್ನು ತಪ್ಪಿಸಲು ಕಾರ್ಯಕ್ರಮವೇನಾದರೂ ಇದೆಯೇ ?

ಶ್ರೀ ಬಿ. ರಾಚಯ್ಯ.—ದೇಶದಲ್ಲಿ ಸುಮಾರು 1ಲಕ್ಷ 20 ಸಾವಿರ ಎಕರೆಗಳಲ್ಲಿ ಈ ಪ್ರಾಂತದವರು ಅಥವಾ ಕೆಲವರು ಹೊರ ಪ್ರಾಂತದವರು ಅಕ್ರಮಪ್ರವೇಶವನ್ನು ಒಂದಲ್ಲ ಒಂದು ರೀತಿಯಲ್ಲಿ ಮಾಡಿದ್ದಾರೆ. ಅಧನ್ನು ಕಾನೂನು ಪ್ರಕಾರ ಸ್ವಾಧೀನಪಡಿಸಿಕೊಂಡು ಕೊಡಲು ಸಾಧ್ಯವಿರುವ ಕಡೆ ಕೊಟ್ಟು ಸೂಕ್ತ ಕ್ರಮ ಕೈಕೊಂಡಿದ್ದೇವೆ, ಯಾರನ್ನು ಹೊರದೂಡಬೇಕೋ ಅವರನ್ನು ಅಕ್ರಮಿಸಿಕೊಂಡಿದ್ದ ಭೂಮಿಯಿಂದ ಹೊರದೂಡಿದ್ದೇವೆ. ಕೊಡಗು ಮತ್ತು ಶಿವಮೊಗ್ಗದಲ್ಲಿ ಏನಾಗಿದೆ ಎಂಬದು ಪತ್ರಿಕೆಗಳಲ್ಲೂ ಬಂದಿದೆ. ರಿಸರ್ವ್ ಪೋಲೀಸನ್ನು ತೆಗೆದುಕೊಂಡುಹೋಗಿ ಅಕ್ರಮಿಸಿಕೊಂಡಿದ್ದವರನ್ನು ಹೊರದೂಡಲಾಗಿದೆ. ಆ ದೃಷ್ಟಿಯಿಂದ ಅಕ್ರಮಪ್ರವೇಶ ಕಡಮೆಯಾಗಬಹುದೆಂಬ ಆಸೆಯಿದೆ. ಮಾನ್ಯ ಸದಸ್ಯರು ಹೇಳಿರುವ ಮುಖ್ಯವಾದ ವಿಷಯಗಳಕಡೆ ಸಾಧ್ಯವಾದ ಮಟ್ಟಿಗೆ ಗಮನಕೊಡಲಾಗಿದೆ. ಮಾನ್ಯ ಸದಸ್ಯರು ಮಧ್ಯೆ ಪ್ರವೇಶಮಾಡಿದ್ದರಿಂದ ಎಷ್ಟು ಉತ್ತರ ಹೇಳಬೇಕಾಗಿತ್ತೋ ಅಷ್ಟನ್ನು ಹೇಳಲು ಸಾಧ್ಯವಾಗಲಿಲ್ಲ. ಆದರೂ ಕೂಡ ಯಾವ ಯಾವ ವಿಷಯಗಳಮೇಲೆ ಪ್ರಸ್ತಾಪಮಾಡಿಲ್ಲ, ಖೋತಾಸೂಚನೆಗಳಲ್ಲಿ ಬಂದಿರುವ ವಿಷಯ ಮತ್ತು ಬಜೆಟ್ ಭಾಷಣದಲ್ಲಿ ಮಾಡಿರುವ ಸಲಹೆ ಮುಂತಾದ್ದನ್ನೆಲ್ಲಾ ಗಮನಿಸಿ ಈ ಎರಡು ಇಲಾಖೆಗಳಲ್ಲೂಕೂಡ ಏನೊಂದು ಸುಧಾರಣೆ ಮಾಡಬೇಕೆಂದು ಜನರಿಗೇನು ಅನುಕೂಲತೆ ಮಾಡಿಕೊಡಬೇಕೆಂದು ಹೇಳಿದ್ದಾರೋ ಅದನ್ನ ಸರಕಾರ ಸಾಧ್ಯವಾದಮಟ್ಟಿಗೆ ಪೂರೈಸುತ್ತದೆ. ಇಷ್ಟು ಉತ್ತರ ಹೇಳಿದಮೇಲೆ ಈಗ ಮಂಡಿಸಿರುವ ಎರಡು ಡಿಮ್ಯಾಂಡುಗಳೇನಿವೆ ಅದಕ್ಕೆ ಕೇಳಿರುವ ಹಣವನ್ನು ಒಮ್ಮನಸ್ಸಿನಿಂದ ಮಂಜೂರುಮಾಡಬೇಕು ಎಂದು ಅಧ್ಯಕ್ಷರ ಮೂಲಕ ಪ್ರಾರ್ಥನೆಮಾಡುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The question is:

"That respective sums not exceeding the amounts stated in Demands No. 2, 7, 8, 33, 38, 42 and 51 be granted to government to defray the charges which will come in course of payment during the financial year for the period ending 31st March 1968."

The motion was adopted.

(MR. SPEAKER)

As ordered by the Chair the Motion for Demands for grants adopted by ths House are reproduced below :—

DEMAND NO. 2—LAND REVENUE

9. Land Revenue

" That a sum not exceeding Rs. 2,66,52,000 be granted to the Government to defray the charges which will come in course of payment during the financial year for the period ending 31st day of March 1968, in respect of 'Land Revenue'."

DEMAND NO. 7.—STAMPS

14. Stamps

" That a sum not exceeding Rs. 14,25,000 be granted to the Government to defry the charges will come in course of payment during the financial year for the period ending 31st day of March 1968, in respect of 'Stamps'."

DEMAND NO. 8.—REGISTRATION

15. Registration Fees

" That a sum not exceeding Rs. 25,05,000 be granted to the Government to defray the charges which will come in course of payment during the financial year for the period ending 31st day of March 1968, in respect of 'Registration Fees'."

DEMAND NO. 33.—FAMINE

64. Famine Relief

" That a sum not exceeding Rs. 33,00,000 be granted to the Government to defray the charges which will come in course of payment during the financial year for the period ending 31st day of March 1968 in respect of 'Famine Relief'."

DEMAND NO. 38.—FOREST

70. Forest

" That a sum not exceeding Rs. 6,27,30,000 be granted to the Government to defray the charges which will come in course of payment during the financial year for the period ending 31st day of March 1968, in respect of 'Forest'."

DEMAND NO. 42—COMPENSATION TO ZAMINDARS

92. Payment of Compensation to Land-holders, etc., on the Abolition of Zamindari System

" That a sum not exceeding Rs. 34,73,000 be granted to the Government to defray the charges which will come in course of payment during the financial year for the period ending 31st day of March 1968, in respect of 'Payment of Compensation to Land holders, etc., on the Abolition of Zamindari System'."

DEMAND NO. 51.—CAPITAL OUTLAY ON FORESTS

119. Capital Outlay on Forests

" That a sum not exceeding Rs. 9,50,000, be granted to the Government to defray the charges which will come in course of payment during the financial year for the period ending 31st day of March 1968, in respect of 'Capital Outlay on Forests'."

Mr. SPEAKER.—The House will now adjourned and meet tomorrow at 1 P.M.

The House adjourned at Thirty-Five Minutes past Six of the Clock to meet again at One of the Clock on Thursday the 6th July 1967.